ಸಂ: ಪಸಂಮೀ ಇ-191 ಪಸಸೇ 2020

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

(14)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	717
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವ ದಿನಾಂಕ	:	09.12.2020
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಡೆಸುತ್ತಿರುವ ಸಾಂತ್ವನ ಕೇಂದ್ರಗಳಿಗೆ, 2020-21ನೇ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನದಲ್ಲಿದೆಯೇ;	ಬಂದಿದೆ.
ಆ)	ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಕ್ಕಳಿಗೆ ಸಾಂತ್ವನ ನೀಡುವ ತಾತ್ಕಾಲಿಕ ಆಶ್ರಯ, ರಕ್ಷಣೆ ನೀಡುವ ಸಾಂತ್ವನ ಕೇಂದ್ರಗಳನ್ನು ಮುಂದುವರಿಸಿಕೊಂಡು ಹೋಗಲು ಸರ್ಕಾರ ಕೈಗೊಂಡ ಕ್ರಮಗಳೇನು;	ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಒನ್ ಸ್ಟಾಪ್ ಸೆಂಟರ್ (ಸಖಿ) ಕೇಂದ್ರಗಳನ್ನು ಪ್ರಾರಂಭಿಸಿರುವುದರಿಂದ 2020-21ನೇ ಸಾಲಿನಿಂದ ಸಾಂತ್ವನ ಯೋಜನೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿತ್ತು. ಆದರೆ, ಒನ್ ಸ್ಟಾಪ್ ಸೆಂಟರ್ ಗಳನ್ನು ಜಿಲ್ಲಾ ಕೇಂದ್ರಗಳಿಗೆ ಮಾತ್ರ ಸ್ಥಾಪಿಸಿದ್ದು, ನೊಂದ ಮಹಿಳೆಯರು ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಲು ಕಷ್ಟಕರವಾಗುವುದರಿಂದ ಸಾಂತ್ವನ ಕೇಂದ್ರಗಳನ್ನು ಮುಂದುವರೆಸುವ ಬಗ್ಗೆ ಪರಿಶೀಲಿಸಿ, ಸಾಂತ್ವನ ಯೋಜನೆಯನ್ನು ದಿನಾಂಕ:31.03.2021ರವರೆಗೆ ಮುಂದುರೆಸಲು ಅನುಮೋದನೆ ನೀಡಲಾಗಿದೆ.
ಇ)	ಸದರಿ ಕೇಂದ್ರಗಳ ನಿರ್ವಹಣೆಗೆ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?	2020-21ನೇ ಸಾಲಿನಲ್ಲಿ ಯಾವುದೇ ಅನುದಾನ ನಿಗಧಿಪಡಿಸಿರುವುದಿಲ್ಲ. ಇಲಾಖೆಯ ಇತರೆ ಯೋಜನೆ ಅಡಿ ಉಳಿತಾಯವಾಗುವ ಅನುದಾನವನ್ನು ಪುನರ್ ವಿನಿಯೋಗ ಮಾಡಿಕೊಂಡು ಸಾಂತ್ವನ ಕೇಂದ್ರಗಳಿಗೆ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಪುನರ್ ವಿನಿಯೋಗ ಆದೇಶ ಬಂದ ಕೂಡಲೇ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದು.

(ಶ್ರಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 120 ಮಮಅ 2020

(15)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ. ಸೋಮನಗೌಡ ಬಿ. ಪಾಟೀಲ (ಸಾಸನೂರ) (ದೇವರ ಹಿಪ್ಪರಗಿ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 723

ಉತ್ತರ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ (ದೇವರಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಜಾಲ್ವಾದ-ಕೊರ್ವಾರ್‌ದ 12 ಹಳ್ಳಿಗಳು, ಅಸ್ಕಿ-ಕಲಕೇರಿಯ 14 ಹಳ್ಳಿಗಳಲ್ಲಿ) ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ಬಂದಿದೆ. ವಿಜಯಪುರ ಜಿಲ್ಲೆಗೆ ಜಲಧಾರೆ ಯೋಜನೆಯು ಅನುಮೋದನೆ ಆಗಿರುವುದರಿಂದ, ಜಾಲ್ವಾದ-ಕೊರ್ವಾರ್‌ದ ಮತ್ತು 12 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಅಸ್ಕಿ-ಕಲಕೇರಿ ಮತ್ತು 14 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಕೈಬಿಟ್ಟು, ಈ ಯೋಜನೆಗಳಡಿ ಉದ್ದೇಶಿತ ಗ್ರಾಮಗಳನ್ನು ಜಲಧಾರೆ ಯೋಜನೆಯಡಿ ಪರಿಗಣಿಸಲಾಗಿದೆ.
ಆ)	ಈ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಸರ್ಕಾರ ಯೋಜನೆ ರೂಪಿಸಿದೆಯೇ; ಹಾಗಿದ್ದಲ್ಲಿ, ಯೋಜನೆಯ ಅಂದಾಜು ಮೊತ್ತ ಎಷ್ಟು; (ವಿವರ ನೀಡುವುದು)	ಪ್ರಸ್ತುತ ಒಟ್ಟಾರೆ ಜಿಲ್ಲೆಗೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು ಜಲಧಾರೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ದಿ:03.08.2020ರ SLSSCಯಲ್ಲಿ ಅನುಮೋದನೆ ನೀಡಲಾಗಿದೆ. ವಿಜಯಪುರ ಜಿಲ್ಲೆಗೆ ಅನುಮೋದನೆಯಾಗಿರುವ ಜಲಧಾರೆ ಅಡಿ ಸಂಪೂರ್ಣ ಜಿಲ್ಲೆಯನ್ನು ಒಳಗೊಂಡಂತೆ ಸುಸ್ಥಿರ ಜಲಮೂಲಗಳನ್ನು ಆಧಾರಿಸಿ 2 ಯೋಜನೆಗಳನ್ನು ರೂಪಿಸಲಾಗಿದೆ. ಈ ಎರಡೂ ಯೋಜನೆಯ ಒಟ್ಟು ಮೊತ್ತ (ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ) ಸುಮಾರು ರೂ.2154.00ಕೋಟಿಗಳಾಗಿರುತ್ತದೆ. ಜಲಧಾರೆ ಯೋಜನೆ ಅನುಷ್ಠಾನಗೊಳ್ಳುವವರೆಗೂ ಈ ಎರಡೂ ಯೋಜನೆಗಳಡಿ ಉದ್ದೇಶಿತ ಗ್ರಾಮಗಳ ಪೈಕಿ, ಕೆಲವೊಂದು ಗ್ರಾಮಗಳಲ್ಲಿ ಪರ್ಯಾಯವಾಗಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಪ್ರಸಕ್ತ ಸಾಲಿನ ಎಸ್.ಡಿ.ಪಿ. ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
ಇ)	ಈ ಗ್ರಾಮಗಳಿಗೆ ಯಾವಾಗ ಕುಡಿಯುವ ನೀರು ಒದಗಿಸಲಾಗುವುದು; ಇದಕ್ಕೆ ಬೇಕಾಗುವ ಕಾಲಮಿತಿ ಎಷ್ಟು? (ವಿವರ ನೀಡುವುದು)	ಜಲಧಾರೆ ಯೋಜನೆಯ PSR ಅನುಮೋದನೆಗೊಂಡಿದ್ದು, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಪಡೆದ ನಂತರ ಟೆಂಡರ್ ಕರೆದು ನಿಗಧಿತ ಅವಧಿಯೊಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಹಾಗೂ ಪರ್ಯಾಯವಾಗಿ ಎಸ್.ಡಿ.ಪಿ. ಅಡಿ ಕೈಗೊಂಡಿರುವ ಕಾಮಗಾರಿಗಳನ್ನು ಮಾರ್ಚ್-2021ನೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಿ ಕುಡಿಯುವ ನೀರನ್ನು ಒದಗಿಸಲಾಗುವುದು.

ಸಂ:ಗ್ರಾಕುನೀ&ನೈಇ 86 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	859
ಸದಸ್ಯರ ಹೆಸರು	:	ಶ್ರೀ ಹೂಲಗೇರಿ. ಡಿ.ಎಸ್. (ಲಿಂಗಸುಗೂರು)
ಉತ್ತರಿಸಬೇಕಾದ ಸಚಿವರು	:	ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	09-12-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಕಛೇರಿ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವ ಮಾನದಂಡಗಳ ಆಧಾರದ ಮೇಲೆ ಅಥಣಿ ಪಟ್ಟಣಕ್ಕೆ ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಕಛೇರಿ ಪ್ರಾರಂಭಿಸಲಾಗಿದೆ;	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಹೊಸದಾಗಿ ಸಾರಿಗೆ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅಥಣಿ, ಕಾಗವಾಡ ಹಾಗೂ ರಾಯಭಾಗ ತಾಲ್ಲೂಕು ವ್ಯಾಪ್ತಿಯಲ್ಲಿನ ರಾಜಸ್ವ ವಸೂಲಾತಿ, ವಾಹನಗಳ ನೋಂದಣಿ ಹಾಗೂ ಚಾಲನಾ ಲೈಸೆನ್ಸ್ ನೀಡಿರುವುದು ಮತ್ತು ಚಿಕ್ಕೋಡಿ ಕೇಂದ್ರ ಸ್ಥಾನದಿಂದ ಅಥಣಿ ತಾಲ್ಲೂಕಿಗೆ ಇರುವ ಅಂತರಗಳ ಆಧಾರದ ಮೇಲೆ ಅಥಣಿ ಪಟ್ಟಣದಲ್ಲಿ ಹೊಸದಾಗಿ ಸಾರಿಗೆ ಕಛೇರಿ ಪ್ರಾರಂಭಿಸಲಾಗಿರುತ್ತದೆ.
(ಆ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ಬಸ್ ನಿಲ್ದಾಣ ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಆವರಣ ಹಾಗೂ ಇತರೆ ಅಭಿವೃದ್ಧಿ ಎರಡನೇ ಹಂತದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. ಮುಂದುವರೆದು, ಈಗಾಗಲೇ ಬಸ್ ನಿಲ್ದಾಣದ ಪ್ರಮುಖ ಭಾಗವನ್ನು ಕಾರ್ಯಾಚರಣೆಗೆ ಬಿಟ್ಟುಕೊಡಲಾಗಿರುತ್ತದೆ.
(ಇ)	ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣದಲ್ಲಿ ಬಸ್ ಡಿಪೋ ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಬರುವ ಮುದಗಲ್ ಪಟ್ಟಣವು ಹೋಬಳಿ ಕೇಂದ್ರವಾಗಿದ್ದು, ಸಂಸ್ಥೆಯ ನಿಯಮಗಳ ಪ್ರಕಾರ ಹೋಬಳಿ ಮಟ್ಟದಲ್ಲಿ ಬಸ್ ಘಟಕ ನಿರ್ಮಿಸಲು ಅವಕಾಶಗಳಿರುವುದಿಲ್ಲ. ಈಗಾಗಲೇ ಮುದಗಲ್ಲ ಗ್ರಾಮದ ಮುಖಾಂತರ ಪ್ರತಿ ದಿನ 232 ಸಾರಿಗೆ ಸಂಸ್ಥೆಗಳು ಕಾರ್ಯಾಚರಣೆಯಲ್ಲಿದ್ದು, ಈ ಸಾರಿಗೆ ಸೇವೆಗಳನ್ನು ಸದರಿ ಮುದಗಲ್ ವ್ಯಾಪ್ತಿಯಲ್ಲಿಯ ಸಾರ್ವಜನಿಕ ಪ್ರಯಾಣಿಕರು ಸಮರ್ಪಕವಾಗಿ ಉಪಯೋಗಿಸುತ್ತಿದ್ದಾರೆ. ಮುದಗಲ್ಲ ಪಟ್ಟಣವು ಹೋಬಳಿ ಪಟ್ಟಣವಾಗಿರುವುದರಿಂದ, ನೂತನ ಬಸ್ ಘಟಕ ನಿರ್ಮಾಣ ಮಾಡಲು ಸಂಸ್ಥೆಯ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

ಟಿಡಿ 104 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 663
ಸದಸ್ಯರ ಹೆಸರು : ಶ್ರೀ ಶರತ್‌ಕುಮಾರ್ ಬಚ್ಚೇಗೌಡ (ಹೊಸಕೋಟೆ)
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳಲ್ಲಿನ ಬಸ್‌ಗಳ ಸಂಖ್ಯೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು;</td><td>ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿನ ಬಸ್ಸುಗಳ ಸಂಖ್ಯೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತ್ತಿದೆ:
<table>
<tr><th>ಕ್ರ ಸಂ</th><th>ಸಂಸ್ಥೆಯ ಹೆಸರು</th><th>ಬಸ್ಸುಗಳ ಸಂಖ್ಯೆ</th><th>ಸಿಬ್ಬಂದಿಗಳ ಸಂಖ್ಯೆ</th></tr>
<tr><td>1</td><td>ಕ.ರಾ.ರ.ಸಾ.ನಿಗಮ</td><td>8480</td><td>37615</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>6573</td><td>32704</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>4923</td><td>23553</td></tr>
<tr><td>4</td><td>ಈ.ಕ.ರ.ಸಾ.ಸಂಸ್ಥೆ</td><td>4659</td><td>19824</td></tr>
</table></td></tr>
<tr><td>ಆ.</td><td>ಪ್ರತಿ ದಿನ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುತ್ತಿರುವವರ ಸಂಖ್ಯೆ ಎಷ್ಟು; ಪ್ರಯಾಣಿಕರನ್ನು ಆಕರ್ಷಿಸಲು ಇಲಾಖೆಯು ಕೈಗೊಂಡಿರುವ ಕ್ರಮಗಳೇನು;</td><td>ಪ್ರತಿ ದಿನ ಸರ್ಕಾರಿ ಬಸ್ಸುಗಳಲ್ಲಿ ಸಂಚರಿಸುತ್ತಿರುವ ಸಂಖ್ಯೆ ಈ ಕೆಳಕಂಡಂತ್ತಿದೆ:
<table>
<tr><th>ಕ್ರ ಸಂ</th><th>ಸಂಸ್ಥೆಯ ಹೆಸರು</th><th>ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)</th></tr>
<tr><td>1</td><td>ಕ.ರಾ.ರ.ಸಾ.ನಿಗಮ</td><td>14 ಲಕ್ಷ</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>18 ಲಕ್ಷ</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>8.61 ಲಕ್ಷ</td></tr>
<tr><td>4</td><td>ಈ.ಕ.ರ.ಸಾ.ಸಂಸ್ಥೆ</td><td>9 ಲಕ್ಷ</td></tr>
</table>
ಪ್ರಯಾಣಿಕರು ಆಕರ್ಷಿಸಲು ಕೈಗೊಂಡಿರುವ ಕ್ರಮಗಳೆ ವಿವರಗಳನ್ನು ಅನುಭಂದದಲ್ಲಿ ಒದಗಿಸಲಾಗಿದೆ.</td></tr>
<tr><td>ಇ.</td><td>ಎಲ್ಲಾ ನಿಗಮಗಳ ಸಿಬ್ಬಂದಿಗಳ ವೇತನ ಪಾವತಿಗಾಗಿ ಪ್ರತಿ ತಿಂಗಳು ಎಷ್ಟು ಹಣ ಖರ್ಚಾಗುತ್ತಿದೆ;</td><td>ನಾಲ್ಕೂ ಸಾರಿಗೆ ನಿಗಮಗಳ ಸಿಬ್ಬಂದಿಗಳ ವೇತನ ಪಾವತಿಗಾಗಿ ಪ್ರತಿ ತಿಂಗಳ ವೇತನದ ವಿವರ ಈ ಕೆಳಕಂಡಂತ್ತಿದೆ:
(ರೂ.ಕೋಟಿಗಳಲ್ಲಿ)
<table>
<tr><th>ಕ್ರ ಸಂ</th><th>ಸಂಸ್ಥೆಯ ಹೆಸರು</th><th>ಪಾವತಿಸುವ ವೇತನ</th></tr>
<tr><td>1</td><td>ಕ.ರಾ.ರ.ಸಾ.ನಿಗಮ</td><td>101.76</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>98.62</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>65.42</td></tr>
<tr><td>4</td><td>ಈ.ಕ.ರ.ಸಾ.ಸಂಸ್ಥೆ</td><td>58.20</td></tr>
</table></td></tr>
</table>

...2

ಈ.	ಕೊರೊನಾ ಲಾಕ್‌ಡೌನ್ ನಿಂದ ತೆರವುಗೊಂಡಿದ್ದರೂ ಸಹ ಸಾರಿಗೆ ಸಂಸ್ಥೆಯ ಬಸ್‌ಗಳು ಸಂಪೂರ್ಣವಾಗಿ ರಾಜ್ಯದಲ್ಲೆಡೆ ಕಾರ್ಯನಿರ್ವಹಿಸದಿರಲು ಕಾರಣವೇನು?	ಪ್ರಯಾಣಿಕರಿಂದ ಬೇಡಿಕೆ ಇಲ್ಲದೇ ಬಸ್ ನಿಲ್ದಾಣಗಳಲ್ಲಿ ಜನಸಂದಣಿ ವಿರಳವಾಗಿರುವ ಕಾರಣ, ಪ್ರವಾಸಿ ತಾಣಗಳು ಹಾಗೂ ಧಾರ್ಮಿಕ ಕೇಂದ್ರಗಳಿಗೆ ಪ್ರಯಾಣಿಸಲು ಪ್ರಯಾಣಿಕರು ಕಡಿಮೆ ಇರುವ ಕಾರಣ, ಕಾರ್ಖಾನೆ/ ಕಂಪನಿಗಳ ಉದ್ಯೋಗಿಗಳಿಗೆ ಮನೆಯಿಂದ ಕೆಲಸ ಮಾಡಲು ಅವಕಾಶ ನೀಡಿರುವಕಾರಣ ಹಾಗೂ ಶಾಲೆ/ ಪದವಿಪೂರ್ವ ಕಾಲೇಜುಗಳು ಪುನಃ ಆರಂಭವಾಗದ ಮತ್ತು ಹವಾನಿಯಂತ್ರಿತ (ಎ/ಸಿ) ಬಸ್ಸುಗಳಿಗೆ ಕಡಿಮೆ ಬೇಡಿಕೆಇರುವಕಾರಣ ಪೂರ್ಣ ಪ್ರಮಾಣದಲ್ಲಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆಗನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ.

ಸಂಖ್ಯೆ: ಟಿಡಿ 237 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 714

ಸದಸ್ಯರ ಹೆಸರು : ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್ (ಪುಲಿಕೇಶಿ ನಗರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಆಟೋ ಚಾಲಕರಿಗೆ ಪರ್ಮಿಟ್ ನೀಡಲಾಗಿದೆ; (ವಿವರ ನೀಡುವುದು)	ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಿಂದ (ಏಪ್ರಿಲ್-2017 ರಿಂದ ಮಾರ್ಚ್-2020 ಅಂತ್ಯಕ್ಕೆ) ಒಟ್ಟು 5574 ಆಟೋರಿಕ್ಷಾ ಪರ್ಮಿಟ್‌ಗಳನ್ನು ನೀಡಲಾಗಿರುತ್ತದೆ.
(ಆ)	2020-21ನೇ ಸಾಲಿನಲ್ಲಿ ಎಷ್ಟು ಆಟೋ ಚಾಲಕರಿಗೆ ಪರ್ಮಿಟ್ ನೀಡಲಾಗಿದೆ; ಕೋವಿಡ್-19 ರಿಂದ ಆರ್ಥಿಕ ಸ್ಥಿತಿ ಇಳಿಕೆಯಿಂದ ಕಷ್ಟ ಪಡುತ್ತಿರುವ ಆಟೋ ಚಾಲಕರಿಗೆ ಹೊಸದಾಗಿ ಆಟೋ ಪರ್ಮಿಟ್ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ;	2020-21ನೇ (ದಿನಾಂಕ:01-04-2020 ರಿಂದ ಇಲ್ಲಿಯವರೆಗೆ) ಸಾಲಿನಲ್ಲಿ ಒಟ್ಟು 2730 ಆಟೋರಿಕ್ಷಾ ಪರ್ಮಿಟ್‌ಗಳನ್ನು ನೀಡಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 48 ಸಾಇಪ 2018, ದಿನಾಂಕ: 26-03-2018ರಲ್ಲಿ ಬೆಂಗಳೂರು ನಗರದಲ್ಲಿ ಸಂಚರಿಸುವ ಆಟೋರಿಕ್ಷಾ ವಾಹನಗಳಿಗೆ ಪರ್ಮಿಟ್ ವಿತರಿಸುವ ಸಂಬಂಧ 30,000 ರಹದಾರಿಗಳನ್ನು ಮುಂದಿನ 5 ವರ್ಷಗಳಿಗೆ ಸೀಮಿತವಾಗಿ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಈ ಪೈಕಿ ಈವರೆಗೆ 8304 ಪರ್ಮಿಟ್‌ಗಳನ್ನು ನೀಡಲಾಗಿದೆ.
(ಇ)	ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಎಷ್ಟು ಆಟೋಗಳಿಗೆ ಪರ್ಮಿಟ್ ನೀಡಲಾಗುವುದು;	
(ಈ)	ನಕಲಿ ಆಟೋ ಪರ್ಮಿಟ್‌ಗಳನ್ನು ತಡೆಗಟ್ಟಲು ಹೊಸದಾಗಿ ತಂದಿರುವ ಇ-ಪರ್ಮಿಟ್‌ಗೆ ಆಧಾರ್ ಲಿಂಕ್ ಹಾಗೂ ಮಾಲೀಕನೇ ಖುದ್ದು ಹಾಜರಿದ್ದು, ಹೆಬ್ಬೆಟ್ಟು ಗುರುತು ನೀಡುವುದನ್ನು ಕಡ್ಡಾಯಗೊಳಿಸಲಾಗುವುದೇ? (ಮಾಹಿತಿ ನೀಡುವುದು)	ನಕಲಿ ಆಟೋ ಪರ್ಮಿಟ್‌ಗಳನ್ನು ತಡೆಗಟ್ಟಲು ಇ-ಪರ್ಮಿಟ್ ಯೋಜನೆಯನ್ನು ದಿನಾಂಕ:13-06-2020 ರಿಂದ ಜಾರಿಗೊಳಿಸಲಾಗಿರುತ್ತದೆ. ಇ-ಪರ್ಮಿಟ್ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿಯೊಂದಿಗೆ ವಾಹನ ಮಾಲೀಕರ ಆಧಾರ್ ಪ್ರತಿಯನ್ನು ಮತ್ತು ವಾಹನದ ಚಾಲನಾ ಅನುಜ್ಞಾ ಪತ್ರದ ಪ್ರತಿಯನ್ನು ಸಲ್ಲಿಸಬೇಕಾಗಿದ್ದು, ಸದರಿ ಚಾಲನಾ ಅನುಜ್ಞಾ ಪತ್ರವನ್ನು ಈಗಾಗಲೇ ಗಣಕ ವ್ಯವಸ್ಥೆಯಲ್ಲಿ ಇರುವ ರಹದಾರಿಗಳ ಮಾಹಿತಿಯೊಂದಿಗೆ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಯೋಜನೆಯ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 6379 ಇ-ಪರ್ಮಿಟ್‌ಗಳನ್ನು ನೀಡಲಾಗಿರುತ್ತದೆ. ಹೊಸದಾಗಿ ತಂದಿರುವ ಇ-ಪರ್ಮಿಟ್‌ಗೆ ಆಧಾರ್ ಲಿಂಕ್ ಹಾಗೂ ಮಾಲೀಕನೇ ಖುದ್ದು ಹಾಜರಿದ್ದು, ಹೆಬ್ಬೆಟ್ಟು ಗುರುತು ನೀಡುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆ ಇರುವುದಿಲ್ಲ.

ಟಿಡಿ 108 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

15ನೇ ವಿಧಾನ ಸಭೆ 8ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 718

ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ (ಮಂಗಳೂರು)

ಉತ್ತರಿಸುವ ದಿನಾಂಕ : 09-12-2020

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿದೆಯೇ; (ಆದೇಶದ ಪ್ರತಿ ನೀಡುವುದು)	ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ 374 ಗ್ರಾಪಂಕಾ 2013 ದಿನಾಂಕ:21-02-2014 ರಲ್ಲಿ ದಿನಾಂಕ:31-12-2011 ರಲ್ಲಿದ್ದಂತೆ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ 432 ಗ್ರಾಪಂಕಾ 2017 ದಿನಾಂಕ:05-12-2017 ರಲ್ಲಿ ದಿನಾಂಕ:31-07-2017 ರಲ್ಲಿದ್ದಂತೆ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಮೇಲ್ಕಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ರಾಜ್ಯ ಮಟ್ಟದ 2 ಜೇಷ್ಠತಾ ಪಟ್ಟಿಗಳನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 2259-2261/2014 ರಲ್ಲಿ ದಿನಾಂಕ:18-03-2019 ರಂದು ನೀಡಿರುವ ಆದೇಶದಲ್ಲಿ ರದ್ದುಪಡಿಸಿದೆ.
(ಆ)	ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳಲ್ಲಿ ನೇರ ನೇಮಕಾತಿ ಹಾಗೂ ಪದೋನ್ನತಿ ಮೂಲಕ ನೇಮಕಗೊಂಡು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.
(ಇ)	ರಾಜ್ಯದ ಯಾವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ಕ್ರಮ ವಹಿಸಲಾಗಿದೆ? (ವಿವರ ನೀಡುವುದು)	**1.ಮುಧೋಳ ತಾಲ್ಲೂಕಿನ ಲೋಕಾಪೂರ ಗ್ರಾಮ ಪಂಚಾಯಿತಿಯನ್ನು** ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 06 ಎಂಎಲ್‌ಆರ್ 2020, ದಿ:23.09.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.

		2.ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮ ಪಂಚಾಯಿತಿ: ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ನಿರ್ದೇಶನಾಲಯದ ಪತ್ರ ಸಂಖ್ಯೆ:30266/ಡಿಎಂಎ/61/ಟಿಪಿಯುಪಿ/2019-20, ದಿ:03.03.2020 ರ ಪತ್ರದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.
		3. **ತಾಲ್ಲೂಕಿನ ಶಿರೂರು ಮತ್ತು ನೀಲಾನಗರ ಗ್ರಾಮ ಪಂಚಾಯಿತಿ:** ಶಿರೂರು ಮತ್ತು ನೀಲಾನಗರ ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಅಧಿಸೂಚನೆ ಸಂಖ್ಯೆ ನಅಇ 33 ಎಂಎಲ್ಆರ್ 2019, ದಿ:05.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		4. **ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ವಡಗೇರಾ ಗ್ರಾಮ ಪಂಚಾಯಿತಿಯನ್ನು:** ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ನಿರ್ದೇಶನಾಲಯದ ಪತ್ರ ಸಂಖ್ಯೆ:24916/ಡಿಎಂಎ/13/ಟಿಪಿಯುಪಿ/2018-19, ದಿ:28.11.2020 ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
		5. **ಮೈಸೂರು ಜಿಲ್ಲೆ, ಶ್ರೀರಾಂಪುರ, ಕಡಕೋಳ, ಇಲವಾಲ, ಬೋಗಾದಿ ಮತ್ತು ರಮ್ಮನಹಳ್ಳಿ** ಗ್ರಾಮ ಪಂಚಾಯಿತಿಗಳನ್ನು ಪ್ರತ್ಯೇಕವಾಗಿ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 133/143/135/130 ಎಂಎಲ್ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		6. **ಮೈಸೂರು ಜಿಲ್ಲೆ, ಕೂರ್ಗಳ್ಳಿ** ಗ್ರಾಮ ಪಂಚಾಯಿತಿಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 132 ಎಂಎಲ್ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		7. **ದಕ್ಷಿಣ ಕನ್ನಡ ಜಿಲ್ಲೆಯ ಮೆನ್ನಬೆಟ್ಟು ಮತ್ತು ಕಿನ್ನಿಗೋಳಿ ಗ್ರಾಮ ಪಂಚಾಯಿತಿಯನ್ನು** ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 20 ಎಂಎಲ್ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		8. **ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ ಮತ್ತು ಮಳವೂರು ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ** ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 92 ಎಂಎಲ್ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.

		9. ದಕ್ಷಿಣ ಕನ್ನಡ ಜಿಲ್ಲೆಯ ಮಂಕಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 158 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		10. ಕೋಲಾರ ಜಿಲ್ಲೆಯ ವೇಮಗಲ್ ಗ್ರಾಮ ಪಂಚಾಯಿತಿ ಹಾಗೂ ಕುರಗಲ್ ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 148 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		11. ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕುರಿತು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 50 ಎಂಎಲ್‌ಆರ್ 2019, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		12. ಬೆಳಗಾವಿ ತಾಲ್ಲೂಕಿನ ಪೀರನವಾಡಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 50 ಎಂಎಲ್‌ಆರ್ 2019, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		13. ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ದಿ:15.10.2020 ರಂದು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 131 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		14. ಅಥಣಿ ತಾಲ್ಲೂಕಿನ ಕಾಗವಾಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 48 ಎಂಎಲ್‌ಆರ್ 2019, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		15. ಯರಗಟ್ಟಿ ತಾಲ್ಲೂಕಿನ ಯರಗಟ್ಟಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 160 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		16. ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 14 ಎಂಎಲ್‌ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		17. ಸೊರಬ ತಾಲ್ಲೂಕಿನ ಆನವಟ್ಟಿ, ಕಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 15 ಎಂಎಲ್‌ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.

		18. ಗೋಕಾಕ ತಾಲ್ಲೂಕಿನ ಅಂಕಲಗಿ ಮತ್ತು ಅಕ್ಕತಂಗೇರಹಾಳ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 111 ಎಂಎಲ್‌ಆರ್ 2020, ದಿ:05.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		19. ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 09 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		20. ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು. ಸಿದ್ಲಿಪುರ, ಎಮ್ಮೆಹಟ್ಟಿ ಮತ್ತು ಹನುಮಂತಾಪುರ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಹೊಳೆಹೊನ್ನೂರು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 15 ಎಂಎಲ್‌ಆರ್ 2020, ದಿ:23.11.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		21. ವಿಜಯಪುರ ಜಿಲ್ಲೆಯ ಬಬಲೇಶ್ವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 156 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		22. ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಬಾಣಾವಾರ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 156 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.
		23. ಯಲಹಂಕ ತಾಲ್ಲೂಕಿನ ಹುಣಸಮಾರನಹಳ್ಳಿ ಮತ್ತು ಸೊಣ್ಣಪ್ಪನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅಧಿಸೂಚನೆ ಸಂಖ್ಯೆ ನಅಇ 154 ಎಂಎಲ್‌ಆರ್ 2020, ದಿ:02.12.2020 ರಂತೆ ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಸಂ. ಗ್ರಾಅಪ 861 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:718 ಕ್ಕೆ ಅನುಬಂಧ-1

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಪ್ರಸ್ತುತ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ	ಮಂಜೂರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ			ಖಾಲಿ ಇರುವ ಹುದ್ದೆಗಳ ಸಂಖ್ಯೆ		ಒಟ್ಟು (8+9)	ಒಟ್ಟು (7+10)
				ನೇರ ನೇಮಕಾತಿ	ಮುಂಬಡ್ತಿ ಕೋಟಾ	ಒಟ್ಟು (5+6)	ನೇರ ನೇಮಕಾತಿ	ಮುಂಬಡ್ತಿ ಕೋಟಾ		
1	2	3	4	5	6	7	8	9	10	11
1	ಬೆಂಗಳೂರು ನಗರ	93	96	62	34	96	0	0	0	96
2	ಬೆಂಗಳೂರು ಗ್ರಾಮಾಂತರ	102	105	66	36	102	2	1	3	105
3	ರಾಮನಗರ	127	127	79	44	123	4	0	4	127
4	ತುಮಕೂರು	330	331	192	107	299	23	9	32	331
5	ಕೋಲಾರ	156	156	96	40	136	5	15	20	156
6	ಚಿಕ್ಕಬಳ್ಳಾಪುರ	157	157	102	23	125	0	32	32	157
7	ಶಿವಮೊಗ್ಗ	271	271	153	62	215	23	33	56	271
8	ದಾವಣಗೆರೆ	196	196	124	35	159	3	34	37	196
9	ಚಿತ್ರದುರ್ಗ	189	189	123	63	186	0	3	3	189
10	ಚಿಕ್ಕಮಗಳೂರು	226	227	121	70	191	27	9	36	227
11	ಚಾಮರಾಜನಗರ	130	130	84	24	108	0	22	22	130
12	ಮೈಸೂರು	266	266	170	87	257	3	6	9	266
13	ಮಂಡ್ಯ	233	233	146	79	225	5	3	8	233
14	ಹಾಸನ	267	267	163	85	248	11	8	19	267
15	ಉಡುಪಿ	158	158	96	45	141	7	10	17	158
16	ದಕ್ಷಿಣ ಕನ್ನಡ	229	230	133	59	192	16	22	38	230
17	ಕೊಡಗು	104	104	60	8	68	8	28	36	104
18	ಉತ್ತರ ಕನ್ನಡ	231	231	147	28	175	3	53	56	231
19	ಬೆಳಗಾವಿ	506	506	300	131	431	29	46	75	506
20	ಹಾವೇರಿ	224	224	146	40	186	0	38	38	224
21	ಬಾಗಲಕೋಟೆ	198	198	129	64	193	0	5	5	198
22	ಧಾರಾವಾಡ	144	144	94	31	125	0	19	19	144
23	ಗದಗ	122	122	72	25	97	7	18	25	122

24	ವಿಜಯಪುರ	213	213	138	70	208	0	5	5	213
25	ಬಳ್ಳಾರಿ	236	236	134	54	188	19	29	48	236
26	ಕೊಪ್ಪಳ	153	153	96	43	139	3	11	14	153
27	ರಾಯಚೂರು	179	179	108	30	138	8	33	41	179
28	ಕಲಬುರಗಿ	263	264	163	31	194	9	61	70	264
29	ಬೀದರ್	185	185	117	30	147	3	35	38	185
30	ಯಾದಗಿರಿ	123	123	75	36	111	5	7	12	123
ಒಟ್ಟು		**6011**	**6021**	**3689**	**1514**	**5203**	**223**	**595**	**818**	**6021**

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ. ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಚುಕ್ಕೆ ರಹಿತಪ್ರಶ್ನೆ ಸಂಖ್ಯೆ: : 504
ಉತ್ತರ ದಿನಾಂಕ : 09.12.2020

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಅರಸೀಕೆರೆ ಕ್ಷೇತ್ರಕ್ಕೆ ಯಗಚಿ ನದಿ ಮೂಲದಿಂದ 3 ಗ್ರಾಮ ಪಂಚಾಯಿತಿಗಳ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಗಮನಕ್ಕೆ ಬಂದಿದೆ.
ಆ.	ಬಂದಿದ್ದಲ್ಲಿ ಈ ಯೋಜನೆ ಮಂಜೂರಾಗಿ ಸುಮಾರು ಹತ್ತು ವರ್ಷಗಳು ಕಳೆದಿದ್ದರೂ ಕಾರ್ಯಗತವಾಗದೆ ಇದುವರೆವಿಗೂ ಪೂರ್ಣ ಪ್ರಮಾಣವಾಗಿ ನೀರು ಒದಗಿಸದೇ ಇರಲು ಕಾರಣಗಳೇನು: ಯಾವಾಗ ಈ ಯೋಜನೆ ಸಂಪೂರ್ಣವಾಗುವುದು: ಜೆ.ಜೆ.ಎಂ ಯೋಜನೆಯಡಿ ಸದರಿ ಗ್ರಾಮಗಳನ್ನು ಸೇರಿಸಲಾಗುವುದೇ (ಮಾಹಿತಿ ಒದಗಿಸುವುದು)?	ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ 48 ಪ್ಲೋರೈಡ್ ಬಾಧಿತ ಜನವಸತಿಗಳು ಮತ್ತು ಇತರೆ 10 ಜನವಸತಿಗಳು ಹಾಗೂ ಮಾರ್ಗ ಮಧ್ಯ ಬೇಲೂರು ತಾಲ್ಲೂಕಿನ 12 ಜನವಸತಿಗಳು ಸೇರಿದಂತೆ ಒಟ್ಟು 70 ಜನವಸತಿಗಳ ಕುಡಿಯುವ ನೀರು ಸರಬರಾಜು ಯೋಜನೆಯು 2008-09ನೇ ಸಾಲಿನಲ್ಲಿ 40 ಎಲ್‌ಪಿಸಿಡಿಗೆ ವಿನ್ಯಾಸಗೊಂಡು ಯೋಜನೆಯ ಮೊದಲನೆಯ ಜೋನ್‌ಗಳಲ್ಲಿ ಗ್ರಾಮಸ್ಥರು ಹೆಚ್ಚು ಪ್ರಮಾಣದ ನೀರನ್ನು ಬಳಸಿದ್ದು, ಕೊನೆಯ ಜೋನ್‌ಗಳಿಗೆ ಪೂರ್ಣ ಪ್ರಮಾಣದ ನೀರು ಪೂರೈಕೆಯಾಗಲು ಸಾಧ್ಯವಾಗುತ್ತಿರುತ್ತಿಲ್ಲ. ಹಲವು ಕಡೆ ಪೈಪ್‌ಲೈನ್ ಗಳು ಹಾಳಾಗಿದ್ದು, ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಯೋಜನೆಯ ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ದಿನಾಂಕ:23-10-2010 ರಂದು ಪೂರ್ಣಗೊಳಿಸಬೇಕಾಗಿದ್ದು, ಗುತ್ತಿಗೆದಾರರ ನಿಷ್ಕಾಳಜಿಯಿಂದ ಯೋಜನೆಯನ್ನು ಈವರೆಗೂ ಪೂರ್ಣಗೊಳಿಸಿರುವುದಿಲ್ಲ. ಸದರಿ ಯೋಜನೆಯನ್ನು ನಿರ್ವಹಣೆ ಮಾಡಲು ಹಲವಾರು ಬಾರಿ ಟೆಂಡರ್ ಕರೆದರೂ ಸಹ ಗುತ್ತಿಗೆದಾರರು ನೇಮಕವಾಗದ ಕಾರಣ ಸಮರ್ಪಕ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಕೈಗೊಂಡಿರುವ ಕರಾರನ್ನು ನಿಯಮಾನುಸಾರ ರದ್ದುಪಡಿಸಿ, ಉಳಿದ ಕಾಮಗಾರಿಗಳಿಗೆ ವಿವರವಾದ ವರದಿಯನ್ನು ತಯಾರಿಸಿ ನಿಯಮಾನುಸಾರ ಜೆ.ಜೆ.ಎಂ. ಯೋಜನೆಯಡಿ ಪೂರ್ಣಗೊಳಿಸಲಾಗುವುದು. 2020-21ನೇ ಸಾಲಿನ JJM ಯೋಜನೆಯಡಿ ಯಗಚಿ ಯೋಜನೆಗೆ ಒಳಪಡುವ ಅರಸೀಕೆರೆ ತಾಲ್ಲೂಕಿನ ಗ್ರಾಮಗಳ ವ್ಯಾಪ್ತಿಯ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲು ಕ್ರಿಯಾ ಯೋಜನೆಯು ಅನುಮೋದನೆಯಾಗಿತ್ತು. ಆದರೆ ಸದರಿ ಯೋಜನೆಯನ್ನು ಸಂಪೂರ್ಣವಾಗಿ ಪುನಃಶ್ಚೇತನಗೊಳಿಸಬೇಕಾಗಿರುವುದರಿಂದ, ಪ್ರಸ್ತುತ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಕೈಬಿಟ್ಟು, ಯೋಜನೆಯನ್ನು ಸಂಪೂರ್ಣವಾಗಿ ಪುನರ್ ಸ್ಥಾಪಿಸಿ ಎಲ್ಲಾ ಗ್ರಾಮಗಳಿಗೆ ನೀರು ಪೂರೈಕೆ ಮಾಡಿದ ನಂತರ ಮುಂಬರುವ ಸಾಲುಗಳಲ್ಲಿ ಸದರಿ ಯೋಜನೆಯ ಜನವಸತಿಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗುವುದು.

ಸಂ:ಗ್ರಾಕುನೀ&ನೈಇ 95 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 506
ಸದಸ್ಯರ ಹೆಸರು	: ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಉಕ್ಕಲಿ ಬಸ್ ನಿಲ್ದಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;	ಉಕ್ಕಲಿ ಬಸ್ ನಿಲ್ದಾಣವನ್ನು 2018-19ರಲ್ಲಿ ನಿರ್ಮಿಸಲಾಗಿದ್ದು, ಕಾರ್ಯಾಚರಣೆಯಲ್ಲಿದೆ. ಬಸ್ ನಿಲ್ದಾಣದ ಆವರಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.
ಆ.	ಸದರಿ ನಿಲ್ದಾಣ ಕಾಮಗಾರಿಗೆ ಮಂಜೂರಾದ ಅನುದಾನ ಎಷ್ಟು;	ಸದರಿ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿಗೆ ರೂ.40.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಬಸ್ ನಿಲ್ದಾಣದ ಆವರಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗೆ (ಎರಡನೇ ಹಂತದಲ್ಲಿ) ರೂ.30.00 ಲಕ್ಷ ಮಂಜೂರಾಗಿರುತ್ತದೆ.
ಇ.	ಈ ಬಸ್ ನಿಲ್ದಾಣ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ;	ಶ್ರೀ ಹನುಮಂತ ಬೆಲ್ಲದ, ಗುತ್ತಿಗೆದಾರರು, ಕಲಬುರಗಿ ಇವರಿಗೆ ಉಕ್ಕಲಿ ಬಸ್ ನಿಲ್ದಾಣದ ಆವರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಗುತ್ತಿಗೆಯನ್ನು ವಹಿಸಿಕೊಡಲಾಗಿದೆ.
ಈ.	ಕಾಮಗಾರಿಯು ಪೂರ್ಣಗೊಳ್ಳದಿರಲು ಕಾರಣಗಳೇನು;	ಕೋವಿಡ್-19ರ ರೋಗದ ಹಿನ್ನೆಲೆಯಲ್ಲಿ ವಿಳಂಬವಾಗಿದ್ದು, ಪ್ರಸ್ತುತ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.
ಉ.	ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?	ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಟಿಡಿ 225 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

(3)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ರಂಗನಾಥ್.ಹೆಚ್.ಡಿ. ಡಾ॥ (ಕುಣಿಗಲ್)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 880
ಉತ್ತರ ದಿನಾಂಕ : 09.12.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕುಣಿಗಲ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮರ್ಪಕ ಸರಬರಾಜಿಗಾಗಿ ಓವರ್ ಹೆಡ್ ಟ್ಯಾಂಕ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	-ಬಂದಿದೆ-
ಆ	ತಾಲ್ಲೂಕಿನಾದ್ಯಂತ ನಿರ್ಮಾಣ ಹಂತದಲ್ಲಿರುವ ಓವರ್ ಹೆಡ್ ಟ್ಯಾಂಕ್‌ಗಳ ಕಾಮಗಾರಿಯು ಅನುದಾನ ಕೊರತೆಯಿಂದಾಗಿ ಅರ್ಧಕ್ಕೆ ಸ್ಥಗಿತಗೊಂಡಿರುವುದು ಹಾಗೂ ಬಳಕೆಯಲ್ಲಿರುವ ಓವರ್ ಹೆಡ್ ಟ್ಯಾಂಕ್‌ಗಳ ನಿರ್ವಹಣೆಯು ಸಮರ್ಪಕವಾಗಿಲ್ಲದೆ ಸರ್ಕಾರದ ಹಣ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಓವರ್ ಹೆಡ್ ಟ್ಯಾಂಕ್ ಕಾಮಗಾರಿಗಳು ನಿರ್ಮಾಣ ಹಂತದಲ್ಲಿ ಅನುದಾನ ಕೊರತೆಯಿಂದ ಸ್ಥಗಿತಗೊಂಡಿರುವುದು ಕಂಡುಬಂದಿರುವುದಿಲ್ಲ. OHTಗಳನ್ನು ಗ್ರಾಮ ಪಂಚಾಯತಿಗಳಿಂದ ಪ್ರತ್ಯೇಕ ಅನುದಾನದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.
ಇ	ಹಾಗಿದ್ದಲ್ಲಿ, ಓವರ್ ಹೆಡ್ ಟ್ಯಾಂಕ್‌ಗಳ ನಿರ್ಮಾಣಕ್ಕಾಗಿ ಅಗತ್ಯವಿರುವ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?	ಅವಶ್ಯಕತೆ ಇರುವ ಗ್ರಾಮಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಓವರ್ ಹೆಡ್ ಟ್ಯಾಂಕ್‌ನ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗುವುದು.

ಸಂ:ಗ್ರಾಕುನೀ&ನೈಇ 87 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್ .ಎಂ. (ಮಂಡ್ಯ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	706
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	09.12.2020

ಕ್ರ ಸಂ	ಪ್ರಶ್ನೆ	ಉತ್ತರ	Answer
ಅ)	ಮಂಡ್ಯ ತಾಲ್ಲೂಕಿನ ಬಸರಾಳು ಹೋಬಳಿ ಯಲ್ಲಿ ನೂತನ ಜವಳಿ ಪಾರ್ಕ್ ನಿರ್ಮಾಣ ಮಾಡಲು 2016ನೇ ಇಸವಿ ಯಲ್ಲಿ 200 ಎಕರೆ ಭೂ-ಸ್ವಾಧೀನ ಪ್ರಕ್ರಿಯೆ ಕೈಗೊಂಡಿದ್ದು, ಈವರೆಗೂ ಜವಳಿ ಪಾರ್ಕ್ ನಿರ್ಮಾಣ ಕಾಮಗಾರಿ ಪ್ರಾರಂಭ ವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.	Yes
ಆ)	ಬಂದಿದ್ದಲ್ಲಿ; ವಿಳಂಬಕ್ಕೆ ಕಾರಣಗಳೇನು;	ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕು, ಬಸರಾಳು ಹೋಬಳಿ, ಕಂಬದಹಳ್ಳಿ ಮತ್ತು ಬಾಳೇನಹಳ್ಳಿ ಗ್ರಾಮದಲ್ಲಿ ಒಟ್ಟು 226-15 ಎಕರೆ ಜಮೀನನ್ನು ಭೂಸ್ವಾಧೀನಪಡಿಸುವ ಸಂಬಂಧ ಕೆ.ಐ.ಎ.ಡಿ.ಬಿ. ಕೈಗಾರಿಕಾ ಇಲಾಖೆ ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಜಂಟಿ ಸ್ಥಳ ತಪಾಸಣೆ ಮಾಡಲಾಗಿ ಗುರುತಿಸಲ್ಪಟ್ಟಿರುವ ಸ್ಥಳಕ್ಕೆ ಇರುವ ಸಂಪರ್ಕ ರಸ್ತೆಗಳು ತುಂಬಾ ಕಿರಿದಾಗಿದ್ದು, ಸದರಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸೂಕ್ತವಾಗಿರುವುದಿಲ್ಲ ಎಂದು ಕೆ.ಐ.ಎ.ಡಿ.ಬಿ. ರವರು ಅಭಿಪ್ರಾಯ ಪಟ್ಟಿರುತ್ತಾರೆ.	A joint spot inspection was conducted by KIADB, Industries and Commerce and Handlooms and Textile Departments regarding land acquisition of 225-15 acres at Kambadahalli and Balenahalli, in Basralu Hobali, Mandya Taluk, Mandya District and KIADB has opined that the said area is not suitable for industrial development since, the connecting roads to the identified places are very narrow.
ಇ)	ಜವಳಿ ಪಾರ್ಕ್ ಕಾಮಗಾರಿ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭ ಮಾಡಲಾಗು ವುದು?		

ಸಂ: ವಾಕೈ 251 JAKE 2020

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

(5)

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 872
ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ. ಬಿ.ಎಂ. (ಬೈಂದೂರು)
ಉತ್ತರಿಸಬೇಕಾದ ಸಚಿವರು : ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 09-12-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಒಂದೇ ಪ್ರಾದೇಶಿಕ ಸಾರಿಗೆ ಕಛೇರಿ ಇರುವುದರಿಂದ ದೂರದ ಬೈಂದೂರು ತಾಲ್ಲೂಕು ಮತ್ತು ಕುಂದಾಪುರ ತಾಲ್ಲೂಕಿನ ಸಾರ್ವಜನಿಕರಿಗೆ, ವಾಹನದ ಮಾರಾಟಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಂದಾಪುರ ತಾಲ್ಲೂಕಿನಲ್ಲಿ ನೂತನ ಪ್ರಾದೇಶಿಕ ಸಾರಿಗೆ (ಆರ್.ಟಿ.ಓ) ಕಛೇರಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಸಾರಿಗೆ ಕಛೇರಿಯನ್ನು ಪ್ರಾರಂಭಿಸುವ ಕುರಿತಂತೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಸಾರಿಗೆ ಕಛೇರಿಯನ್ನು ತೆರೆಯಲು ಪ್ರಸ್ತುತ ಇರುವ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಹೊಸ ಹುದ್ದೆಗಳನ್ನು ಸೃಜಿಸುವುದಕ್ಕೆ ಸಾಧ್ಯವಿರುವುದಿಲ್ಲವಾದ್ದರಿಂದ ಪ್ರಸ್ತುತ ಇರುವ ವ್ಯವಸ್ಥೆಯಲ್ಲಿಯೇ ಕಾರ್ಯನಿರ್ವಹಿಸುವಂತೆ ತಿಳಿಸಲಾಗಿರುತ್ತದೆ. ಅದರಂತೆ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅನುವಾಗುವಂತೆ ಇಲಾಖೆಯ ವತಿಯಿಂದ ಪ್ರತಿ ಮಂಗಳವಾರದಂದು ಶಿಬಿರ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತಿದೆ. ಆದಾಗ್ಯೂ ಉಡುಪಿ ಜಿಲ್ಲೆಯ ಕುಂದಾಪುರ ಹಾಗೂ ಬೈಂದೂರುಗಳನ್ನೊಳಗೊಂಡಂತೆ ಸಾರಿಗೆ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪುನರ್ ಪರಿಶೀಲಿಸಲಾಗುವುದು.
(ಇ)	ಬಂದಿದ್ದಲ್ಲಿ, ಸದರಿ ಪ್ರಸ್ತಾವನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ಮಾಹಿತಿ ನೀಡುವುದು)	

ಟಿಡಿ 105 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	123
ಸದಸ್ಯರ ಹೆಸರು	:	ಶ್ರೀ.ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ)
ಉತ್ತರಿಸುವ ದಿನಾಂಕ	:	09.12.2020
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿರುವ ಪಶುಸಂಗೋಪನೆ ಇಲಾಖೆಯ ಪಶು ಆಸ್ಪತ್ರೆ/ಪಶುಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ ಒಟ್ಟು 18 ಪಶುವೈದ್ಯಕೀಯ ಸಂಸ್ಥೆಗಳಿರುತ್ತವೆ.
ಆ)	ಸದರಿ ತಾಲ್ಲೂಕಿನಲ್ಲಿ ಪಶುಸಂಗೋಪನಾ ಇಲಾಖೆಯ ವಿವಿಧ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಆ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು; (ವಿವರ ನೀಡುವುದು)	ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ವಿವಿಧ ಪಶುವೈದ್ಯಕೀಯ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು <u>ಅನುಬಂಧ</u>ದಲ್ಲಿ ನೀಡಲಾಗಿದೆ. ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಅಧಿಕಾರಿ/ಸಿಬ್ಬಂದಿಗಳ ಕಾಲ ಕಾಲಕ್ಕೆ ವಯೋನಿವೃತ್ತಿ/ಸ್ವಯಂ ನಿವೃತ್ತಿ ಹಾಗೂ ಪದೋನ್ನತಿ ಹೊಂದಿದ ಹಾಗೂ ಪಶುವೈದ್ಯಕೀಯ ಸಂಸ್ಥೆಗಳು ಮೇಲ್ದರ್ಜೆಗೇರಿದ ಹಿನ್ನಲೆಯಲ್ಲಿ ಹುದ್ದೆಗಳು ಖಾಲಿ ಉಳಿದಿರುತ್ತವೆ.
ಇ)	ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ಹಾಗೂ ಅವುಗಳನ್ನು ಯಾವಾಗ ತುಂಬಲಾಗುವುದು? (ವಿವರ ನೀಡುವುದು)	ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಯನ್ನು ನೇರ ನೇಮಕಾತಿ ಮುಖಾಂತರ ಹಾಗೂ ಅರೆ ತಾಂತ್ರಿಕ ವೃಂದದ ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ತುಂಬಲು ಕ್ರಮವಹಿಸಲಾಗುತ್ತಿದೆ.

ಕ್ರ. ಸಂ	ಸಂಸ್ಥೆಗಳು	ಮಂಜೂರು
1.	ಪಶು ಆಸ್ಪತ್ರೆ	04
2.	ಪಶುಚಿಕಿತ್ಸಾಲಯ	12
3.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	02
	ಒಟ್ಟು	18

		ಮುಖ್ಯ ಪಶುವೈದ್ಯಾಧಿಕಾರಿ ವೃಂದದ 03 ಖಾಲಿ ಹುದ್ದೆಗಳನ್ನು ಹಿರಿಯ ಪಶುವೈದ್ಯಾಧಿಕಾರಿ ಹುದ್ದೆಯಿಂದ ಸ್ಥಾನಪನ್ನ ಮುಂಬಡ್ತಿ ನೀಡಿ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಪಶುವೈದ್ಯಾಧಿಕಾರಿಗಳ 12 ಹುದ್ದೆಗಳು ಪ್ರಸ್ತುತ ಖಾಲಿ ಇದ್ದು, ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 639 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡುವ ಪ್ರಸ್ತಾವನೆಗೆ ಪ್ರಸ್ತುತ ಆರ್ಥಿಕ ನಿರ್ಬಂಧಗಳ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯು ಸಹಮತಿ ನೀಡಿರುವುದಿಲ್ಲ, ಆರ್ಥಿಕ ಇಲಾಖೆಯಿಂದ ಅನುಮತಿ ದೊರೆತ ಕೂಡಲೇ ಆದ್ಯತೆ ಮೇಲೆ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮವಹಿಸಲಾಗುವುದು. ಪಶುವೈದ್ಯಕೀಯ ಪರೀಕ್ಷಕರ 04 ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಸ್ಥಾನಪನ್ನ ಮುಂಬಡ್ತಿ ನೀಡಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. ವಾಹನ ಚಾಲಕರ 01 ಖಾಲಿ ಹುದ್ದೆಯನ್ನು ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿದೆ. "ಡಿ" ದರ್ಜೆ ವೃಂದದಲ್ಲಿ 23 ಖಾಲಿ ಹುದ್ದೆಗಳಿದ್ದು, ಸದರಿ ಖಾಲಿ ಹುದ್ದೆಗಳಿಗೆ ಎದುರಾಗಿ 12 ಹುದ್ದೆಗಳಿಗೆ ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿರುತ್ತದೆ.

ಸಂ: ಪಸಂಮೀ ಇ-192 ಪಸಸೇ 2020

(ಪ್ರಭು. ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಅನುಬಂಧ

ದಿನಾಂಕ:01-12-2020 ರಲ್ಲಿದ್ದಂತೆ ರಾಮದುರ್ಗ ತಾಲೂಕಿನಲ್ಲಿ ಮಂಜೂರು/ಭರ್ತಿ/ಖಾಲಿ ಹುದ್ದೆಗಳ ವಿವರ

ಕ್ರಸಂ	ಕ್ಷೇತ್ರದಲ್ಲಿರುವ ಸಂಸ್ಥೆಗಳ ಹೆಸರು	ಪ.ನಿ			ಮು.ಪ.ವೈ			ಪ.ವೈ			ಜಾ.ಆ.ಅ			ಜಾ.ಅ			ಹಿ.ಪ.ಪ			ಪಶುವೈ.ಪ			ಪಶುವೈ.ಸ			ಲಿಪಿಕ			ವಾ.ಚಾ			ಡಿ.ವರ್ಗ			ಹೊ.ಗು ಡಿ ದರ್ಜೆ ನೌಕರರು	ಹೊ.ಗು ವಾಹನ ಚಾಲಕ
		ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ		
1	ಪ.ಆ. ರಾಮದುರ್ಗ	1	1	0	2	1	1	0	0	0	1	1	0	0	0	0	1	1	0	0	0	0	3	3	0	1	1	0	1	0	1	2	1	1	2	1
2	ಪ.ಆ ಸುರೇಬಾನ	0	0	0	1	1	0	0	0	0	0	0	0	1	1	0	0	0	0	0	0	0	0	0	0	0	0	0	0	0	0	2	1	1	0	0
3	ಪ.ಆ ಕಟಕೋಳ	0	0	0	1	0	1	0	0	0	0	0	0	1	1	0	0	0	0	0	0	0	0	0	0	0	0	0	0	0	0	2	2	0	0	0
4	ಪ.ಆ ಮುದಕವಿ	0	0	0	1	0	1	0	0	0	0	0	0	0	0	0	0	0	0	1	1	0	0	0	0	0	0	0	0	0	0	2	0	2	1	0
5	ಪ.ಚಿ. ಸಾಲಾಪೂರ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	0	2	1	0
6	ಪ.ಚಿ.ಚುಂಚನೂರ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	1	1	0	0
7	ಪ.ಚಿ.ಹುಲಕುಂದ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	0	2	1	0
8	ಪ.ಚಿ.ಕದಾಂಪೂರ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	2	2	0	0	0
9	ಪ.ಚಿ.ಸಂದಿಹಾಳ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	1	1	0	0
10	ಪ.ಚಿ.ಗೊಡಚಿ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	0	2	1	0
11	ಪ.ಚಿ.ಮುದೇನೂರ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	2	1	1	0	0
12	ಪ.ಚಿ.ಹೊಸಕೋಟಿ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	2	0	2	1	0
13	ಪ.ಚಿ.ಬಟಕುರ್ಕಿ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	0	2	1	0
14	ಪ.ಚಿ.ನಾಗನೂರ	0	0	0	0	0	0	1	0	1	0	0	0	0	0	0	1	1	0	0	0	0	1	1	0	0	0	0	0	0	0	2	0	2	1	0
15	ಪ.ಚಿ.ಬೆಂಗದಾಳ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	2	0	2	1	0
16	ಪ.ಚಿ.ಚಂದರಗಿ	0	0	0	0	0	0	1	0	1	0	0	0	0	0	0	1	1	0	0	0	0	1	1	0	0	0	0	0	0	0	1	0	1	1	0
17	ಪ್ರಾ.ಪ.ಚಿ ಚಿಪ್ಪಲಕಟ್ಟಿ	0	0	0	0	0	0	0	0	0	0	0	0	0	0	0	1	1	0	0	0	0	1	1	0	0	0	0	0	0	0	1	0	1	1	0
18	ಪ್ರಾ.ಪ.ಚಿ ಮುಳ್ಳೂರ	0	0	0	0	0	0	0	0	0	0	0	0	0	0	0	1	1	0	0	0	0	1	1	0	0	0	0	0	0	0	1	1	0	0	0
	ರಾಮದುರ್ಗ ಕ್ಷೇತ್ರ ಒಟ್ಟು	1	1	0	5	2	3	12	0	12	1	1	0	2	2	0	5	5	0	11	7	4	7	7	0	1	1	0	1	0	1	33	10	23	12	1

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: : 713
ಉತ್ತರ ದಿನಾಂಕ : 09.12.2020

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಯಾದಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿದ್ದರೂ ಯಾವುದೇ ಘಟಕಗಳು ಕಾರ್ಯನಿರ್ವಹಿಸದೆ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾದಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿದ್ದರೂ ಯಾವುದೇ ಘಟಕಗಳು ಕಾರ್ಯನಿರ್ವಹಿಸದೆ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಸದರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಒಟ್ಟು 123 ಘಟಕಗಳ ಪೈಕಿ, 94 ಘಟಕಗಳು ಚಾಲ್ತಿಯಲ್ಲಿದ್ದು, ಉಳಿದ 29 ಘಟಕಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.
ಆ.	ಈ ಘಟಕಗಳ ನಿರ್ವಹಣಾ ಕಾರ್ಯಗಳನ್ನು ವಹಿಸಲಾಗಿದ್ದ ಕಂಪನಿಗಳು ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ.	ಬಂದಿದ್ದಲ್ಲಿ ಇಂತಹ ಕಂಪನಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ 29 ಘಟಕಗಳ ಪೈಕಿ, ಅಂತರ್ಗತ (In-built) O&M ಅಡಿ ಹಾಗೂ ಪ್ರತ್ಯೇಕ O&M ಅಡಿ ಇರುವ ಘಟಕಗಳ ವಿವರಗಳು **ಅನುಬಂಧ–1**ರಲ್ಲಿ ಲಗತ್ತಿಸಿದೆ. ಈ 29 ಘಟಕಗಳ ಪೈಕಿ, ಅಂತರ್ಗತ (In-built) O&M ಅಡಿ ಇರುವ 17 ಘಟಕಗಳನ್ನು ಸುಸ್ಥಿತಿಯಲ್ಲಿಡುವಂತೆ ಆಯಾ ಏಜೆನ್ಸಿಗೆ Notice ಮುಖಾಂತರ ತಿಳಿಸಲಾಗಿದ್ದು, Max Aqua ಏಜೆನ್ಸಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಏಜೆನ್ಸಿಗಳು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುತ್ತಿದ್ದಾರೆ. KRIDL ವತಿಯಿಂದ ಹಸ್ತಾಂತರಿಸಿಕೊಂಡಿರುವ ಉಳಿದ 12 ಘಟಕಗಳ ನಿರ್ವಹಣೆಯನ್ನು ಟೆಂಡರ್ ಮುಖಾಂತರ ಪ್ರತ್ಯೇಕ ಏಜೆನ್ಸಿಗೆ ವಹಿಸಲಾಗಿದೆ. ಮುಂದುವರೆದು, Max Aqua ಏಜೆನ್ಸಿಯವರು ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ವಹಿಸದಿದ್ದರಿಂದ, ಸದರಿಯವರ FSD ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅದರನ್ವಯ ಟೆಂಡರ್ ರದ್ದತಿ ಪ್ರಕ್ರಿಯೆಯಲ್ಲಿದೆ.

ಸಂ:ಗ್ರಾಕುನೀ&ನೈಇ 85 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-1

Sl. No.	Agency responsible for installation	Total No. of Plants installed	No of plants working	No of plants temporarily not working	Remarks
1	Max Aqua	39	30	9	Inbuilt O&M
2	Water Life	7	3	4	Inbuilt O&M
3	Tata Projects	2	2	0	Inbuilt O&M
4	Others (Co operative society, SC/ST Agencies etc.)	12	8	4	Inbuilt O&M
5	KRIDL	63	51	12	63 plants were taken over from KRIDL. Further, Separate O&M tender called was called & is entrusted to Shri. Laxmi Venkateshwara Agency
Total		**123**	**94**	**29**	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	614
ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	:	09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಹಾಸನ ನಗರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ನರ್ಸಿಂಗ್ ಕಾಲೇಜು, ಸರ್ಕಾರಿ ಐ.ಟಿ.ಐ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು ಹಾಗೂ ಇತರೆ ಹಲವಾರು ವಿದ್ಯಾಸಂಸ್ಥೆಗಳಿದ್ದು, ಪ್ರತಿದಿನ ಸುತ್ತಮುತ್ತಲ ತಾಲ್ಲೂಕು ಕೇಂದ್ರಗಳಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಸುಮಾರು 15-20 ಸಾವಿರ ಹೆಣ್ಣು ಮಕ್ಕಳು ಹಾಸನ ನಗರಕ್ಕೆ ಬರುತ್ತಿದ್ದು, ಇವರುಗಳಿಗೆ ಸರಿಯಾದ ಸಾರಿಗೆ ಸೌಲಭ್ಯ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ನಗರವು ಮುಖ್ಯ ಶೈಕ್ಷಣಿಕ ಕೇಂದ್ರವಾಗಿದ್ದು, ಹಾಸನ ನಗರಕ್ಕೆ ಬರುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹಾಸನ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.
ಆ.	ಬಂದಿದ್ದಲ್ಲಿ, ಇವರಿಗೆ ಬಸ್ ಸೌಕರ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಕ.ರಾ.ರ.ಸಾ.ನಿಗಮದ ಹಾಸನ ಮತ್ತು ಚಿಕ್ಕಮಗಳೂರು ವಿಭಾಗದ ವಿವಿಧ ಘಟಕಗಳಿಂದ ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರಗಳು ಮತ್ತು ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಸಾಮಾನ್ಯ ಸಾರಿಗೆ ಮತ್ತು ವೇಗದೂತ ಸಾರಿಗೆಗಳನ್ನು ಆಚರಣೆ ಮಾಡಲಾಗುತ್ತಿದ್ದು, ವಿವರ ಕೆಳಕಂಡಂತಿದೆ:

ತಾಲ್ಲೂಕು ಕೇಂದ್ರಗಳು	ಹಾಸನ ನಗರ ಮತ್ತು ಹೊರವಲಯಗಳಿಗೆ ಆಚರಣೆಯಲ್ಲಿರುವ ಸುತ್ತುವಳಿಗಳ ಸಂಖ್ಯೆ
ಅರಸೀಕೆರೆ	99
ಅರಕಲಗೂಡು	98
ಆಲೂರು	56
ಬೇಲೂರು	146
ಚನ್ನರಾಯಪಟ್ಟಣ	103
ಹಾಸನ	230
ಹೊಳೆನರಸೀಪುರ	139
ಸಕಲೇಶಪುರ	63
ಒಟ್ಟು	**934**

		ಇದಲ್ಲದೆ, ಹಾಸನ–ಆಲೂರು ಮಾರ್ಗದಲ್ಲಿ 08 ನಗರ ಸಾರಿಗೆ ಅನುಸೂಚಿಗಳಿಂದ 108 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸಾರಿಗೆಗಳ ಅನುಕೂಲವನ್ನು ಹಾಸನ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು, ನೌಕರರು, ರೈತರು ಹಾಗೂ ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿದ್ದಾರೆ. ಪ್ರಸ್ತುತ ಕೋವಿಡ್–19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲಾ-ಕಾಲೇಜುಗಳು/ವಿದ್ಯಾಸಂಸ್ಥೆಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸುತ್ತಿದ್ದು, ಪ್ರಯಾಣಿಕರ/ವಿದ್ಯಾರ್ಥಿಗಳ ದಟ್ಟಣೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಂಖ್ಯೆ: ಟಿಡಿ 213 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

(9)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	855
ಸದಸ್ಯರ ಹೆಸರು	:	ಶ್ರೀ ಹರೀಶ್ ಪೂಂಜ (ಬೆಳ್ತಂಗಡಿ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಸರ್ಕಾರಿ ನೌಕರರನ್ನಾಗಿ ನೇಮಿಸಿಕೊಳ್ಳುವ ಕುರಿತು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; (ಸಂಪೂರ್ಣ ವಿವರ ನೀಡುವುದು)	ಮೂಲತ: ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ನಿಯಮಗಳನ್ವಯ ಅಂಗವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಸೇವೆಯು ಗೌರವಧನ ಸೇವೆಯಾಗಿದ್ದು, ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ.	ಸರ್ಕಾರಿ ನೌಕರರಂತೆ 60 ವರ್ಷಕ್ಕೆ ನಿವೃತ್ತಿಗೊಳಿಸಿದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಪಿಂಚಣಿ ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ನ್ಯಾಷನಲ್ ಪೆನ್ಷನ್ ಸಿಸ್ಟಮ್-ಲೈಟ್ (NPS-LITE)ಯಡಿಯಲ್ಲಿ ನೊಂದಾಯಿಸಲಾದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ.
ಇ.	ಮಿನಿ ಅಂಗನವಾಡಿ ಕಾರ್ಯಕರ್ತೆಯರನ್ನು ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಮಿನಿ ಅಂಗನವಾಡಿ ಕಾರ್ಯಕರ್ತೆಯರನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ. ಆದಾಗ್ಯೂ ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಿರುವ ಹಾಗೂ ಹೊಸ ಅಂಗನವಾಡಿ ಕೇಂದ್ರ ಪ್ರಾರಂಭಿಸುತ್ತಿರುವ ಗ್ರಾಮದ ಯೋಜನಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಿನಿ ಅಂಗನವಾಡಿ ಕಾರ್ಯಕರ್ತೆಯರು ಇದ್ದು ಅವರು ಆ ಅಂಗನವಾಡಿ ಕೇಂದ್ರದಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುತ್ತಿದ್ದು, ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹುದ್ದೆಗೆ ಬೇರೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸದೇ ಆದ್ಯತೆ ಮೇರೆಗೆ ಸದರಿ ಮಿನಿ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಈ	ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಕುಟುಂಬಗಳ ಆರೋಗ್ಯ ವಿಮೆ (ಇ.ಎಸ್.ಐ) ಸೌಲಭ್ಯ ಒದಗಿಸುವ ಕುರಿತು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)	ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಗೌರವಧನ ಸೇವೆಗೆ ಸೇರಿರುವುದರಿಂದ ಕುಟುಂಬಗಳ ಆರೋಗ್ಯ ವಿಮೆ(ESI) ಒದಗಿಸಲು ಅವಕಾಶವಿರುವುದಿಲ್ಲ.

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 211 ಐಸಿಡಿ 2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 485

ಸದಸ್ಯರ ಹೆಸರು : ಡಾ॥ ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಕಲಬುರಗಿ ಜಿಲ್ಲೆಯ ಚಿಂಚೋಳಿ ಬಸ್ ಘಟಕದಲ್ಲಿ ಅವಶ್ಯಕ ಬಸ್ಸುಗಳು ಹಾಗೂ ಸಿಬ್ಬಂದಿಗಳ ಕೊರತೆಯಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲಬುರಗಿ ಜಿಲ್ಲೆಯ ಚಿಂಚೋಳಿ ಘಟಕದಲ್ಲಿ ಕೋವಿಡ್-19 ಪೂರ್ವದಲ್ಲಿ 66 ಅನುಸೂಚಿಗಳು ಮತ್ತು ಕೋವಿಡ್-19 ನಂತರ 59 ಅನುಸೂಚಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಪ್ರಸ್ತುತ ಕಾರ್ಯಾಚರಣೆಗೆ ಸಿಬ್ಬಂದಿ ಮತ್ತು ಮೇಲ್ವಿಚಾರಕರ ಕೊರತೆಯಿರುವುದಿಲ್ಲ. ಪ್ರಸ್ತುತ ಕಾರ್ಯಾಚರಣೆಗೆ 14 ವಾಹನಗಳು ಹೆಚ್ಚುವರಿಯಾಗಿ ಘಟಕದಲ್ಲಿ ಲಭ್ಯವಿರುತ್ತವೆ. ಎಲ್ಲಾ ವಾಹನಗಳಿಗೆ ಆಗಿಂದಾಗ್ಗೆ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರ ಬೇಡಿಕೆಗನುಸಾರ ಬಸ್ಸುಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕೋವಿಡ್-19ರ ಮುಂಚಿತವಾಗಿ ಹೆಚ್ಚುವರಿಯಾಗಿ 07 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಆದರೆ ಶಾಲೆಗಳು/ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾಗದೇ ಇರುವುದರಿಂದ ಸದರಿ 07 ಅನುಸೂಚಿಗಳನ್ನು ಪ್ರಾರಂಭ ಮಾಡಿರುವುದಿಲ್ಲ. ಶಾಲೆಗಳು/ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾದ ನಂತರ ಮತ್ತು ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯನುಸಾರ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
ಆ.	ಬಂದಿದ್ದಲ್ಲಿ, ಈ ಕುಂದು ಕೊರತೆಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ;	
ಇ.	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)	ಪ್ರಸ್ತುತ ಕಾರ್ಯಾಚರಣೆಗೆ ಯಾವುದೇ ಸಿಬ್ಬಂದಿ ಮತ್ತು ವಾಹನಗಳ ಕೊರತೆಯಿರುವುದಿಲ್ಲ.

ಸಂಖ್ಯೆ: ಟಿಡಿ 212 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

೨

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 860
ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್ (ಲಿಂಗಸುಗೂರು)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳು ಎಷ್ಟು; ಅವು ಯಾವುವು;	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನಲ್ಲಿ ಒಟ್ಟು 533. ಅಂಗನವಾಡಿ ಕೇಂದ್ರಗಳು ಇವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಆ.	ಈ ಪೈಕಿ ಸ್ವಂತ ಕಟ್ಟಡ ಹೊಂದಿರುವ ಹಾಗೂ ಬಾಡಿಗೆ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳು ಎಷ್ಟು; ಅವು ಯಾವುವು;	ಸ್ವಂತ ಕಟ್ಟಡಗಳು-375 ಬಾಡಿಗೆ ಕಟ್ಟಡಗಳು-134. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಇ.	ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಸ್ವಂತ ಕಟ್ಟಡಗಳನ್ನಾಗಿ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಈಗಾಗಲೇ ಆರ್.ಐ.ಡಿ.ಎಫ್ ಯೋಜನೆಯಡಿ 01, ಎಸ್.ಡಿ.ಪಿ ಯೋಜನೆಯಡಿ 17, ಕೆ.ಕೆ.ಆರ್.ಡಿ.ಬಿ ಯೋಜನೆಯಡಿ 02, ಮತ್ತು ನರೇಗಾ ಯೋಜನೆಯಡಿ 35 ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. ಜನ ಪ್ರತಿನಿಧಿಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಹಯೋಗದೊಂದಿಗೆ ನಿವೇಶನ ಗುರುತಿಸಲು ಕ್ರಮಕೈಗೊಳ್ಳಲಾಗುತ್ತಿದ್ದು ಉಳಿದ ಕಟ್ಟಡಗಳನ್ನು ನಿವೇಶನ ಮತ್ತು ಅನುದಾನ ಲಭ್ಯತೆ ಆಧಾರದ ಮೇಲೆ ನಿರ್ಮಿಸಲಾಗುವುದು.
ಈ	ಈ ಜಿಲ್ಲೆಯ ಲಿಂಗಸೂಗೂರು ಪಟ್ಟಣದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹಾಗೂ ಬಾಲಭವನ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಇಲಾಖೆಯಲ್ಲಿ ತಾಲ್ಲೂಕುಗಳಲ್ಲಿನ ಶಿಶು ಅಭಿವೃದ್ಧಿ ಯೋಜನಾ ಕಛೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ಪ್ರತ್ಯೇಕ ಯೋಜನೆ/ಅನುದಾನ ಇರುವುದಿಲ್ಲ. ಲಿಂಗಸೂಗೂರು ಪಟ್ಟಣದಲ್ಲಿ ಬಾಲಭವನದ ಸ್ವಂತ ಕಟ್ಟಡ ನಿರ್ಮಾಣದ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 212 ಐಸಿಡಿ 2020

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 860ಕ್ಕೆ ಅನುಬಂಧ

LAQ-860 ರಾಯಚೂರು ಜಿಲ್ಲೆಯ ಲಿಂಗಸುಗೂರ ತಾಲೂಕಿನ 533 ಅಂಗನವಾಡಿ ಕೇಂದ್ರಗಳ ವಿವರ

ಕ್ರ.ಸಂ	ಒಟ್ಟು ಅಂ.ಕೇಂದ್ರ ಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
1	533	ರಾಮತ್ನಾಳ	ಮಸ್ಕಿ ತಾಂಡ	ಬಯ್ಯಾಪೂರ-2
2		ಬ್ಯಾಲಿಹಾಳ	ನಿಲೋಗಲ್-3	ಆನ್ವರಿ-4
3		ವಂದಾಲಿ	ಹಿರೇ ಹೆಸರೂರು-2	ರೋಡಲಬಂಡಾ-2
4		ಹೂನೂರು	ಸರ್ಜಾಪೂರ-2	ಸಂತೆಕಲ್ಲೂರು-3
5		ತುರಡಗಿ	ನೀರದೊಡ್ಡಿ-1	ಕನ್ನಾಳ
6		ಎ ಬೋಗಾಪೂರ	ನೀರದೊಡ್ಡಿ-2	ತಿಮ್ಮಾಪೂರ-2
7		ಮಾಕಾಪೂರ	ಗೋಸಾಲ ಪೇಟೆ	ಮ್ಯಾದರಹಾಳ ಗೋಲ್ಲರ ಹಟ್ಟಿ
8		ಮರಳಿ	ವೆಂಕಟರಾಯನಪೇಟೆ-1	ಮೆದಿಕಿನಾಳ ತಾಂಡ
9		ತಲೆಕಟ್	ವೆಂಕಟರಾಯನಪೇಟೆ-2	ಮೆದಿಕಿನಾಳ-3
10		ವ್ಯಾಕರನಾಳ-1	ಗೋಲ್ಲರ ಓಣಿ	ನಾಗರಹಾಳ-4
11		ವ್ಯಾಕರನಾಳ-2	ಹಳೇಪೇಟೆ-1	ಜೂಲಗುಡ್ಡ-2
12		ಹೆಗ್ಗಾಪುರ	ಹಳೇಪೇಟೆ-2	ಬಯ್ಯಾಪೂರ ತಾಂಡ
13		ಹೆಗ್ಗಾಪುರ ತಾಂಡ	ಹಳೇಪೇಟೆ-3	ಬೊಮ್ಮನಾಳ-2
14		ಬನ್ನಿಗೋಳ-1	ಮುಶಾಫೀರ ಖಾನ	ಸಂತೆಕಲ್ಲೂರು-3
15		ಬನ್ನಿಗೋಳ-2	ಮುತ್ಯಾನಾ ದರ್ಗಾ	ಮಟ್ಟೂರು-3
16		ಬನ್ನಿಗೋಳ-3	ಮುದಗಲ್ ಕಿಲ್ಲಾ	ನೀರಲೂಟಿ
17		ಬನ್ನಿಗೋಳ-4	ಬಾಬಾ ಕಟ್ಟಿ	ಹುನಕುಂಟಿ-1
18		ಜನತಾಪೂರ-1	ಮೇಗಳಪೇಟೆ-2	ಬುದ್ದಿ.ಟಿ
19		ಕನ್ನಾಪೂರ ಹಟ್ಟಿ-1	ಮೇಗಳಪೇಟೆ-3	ಜಕ್ಕೆರಮಡು ತಾಂಡ
20		ಕನ್ನಾಪೂರ ಹಟ್ಟಿ ತಾಂಡ	ಮೇಗಳಪೇಟೆ-4	ತಳವಾರ ದೊಡ್ಡಿ
21		ಕೆ.ಎಮ್ ಹಳ್ಳಿ-1	ಮೇಗಳಪೇಟೆ-5	ಉಪ್ಪಾರನಂದಿಹಾಳ-1
22		ನಾಗಾಲಪೂರ-1	ಛಾವಡಿ	ಬಿ.ಕೆ.ಕುಂಟಾ
23		ನಾಗಾಲಪೂರ-2	ಶಾದಿಮಹಲ್	ಹೂವಿನಬಾವಿ
24		ನಾಗಾಲಪೂರ-3	ಖಾದ್ರಿಕಾಲೋನಿ-1	ಮಸ್ಕಿ ಕಬ್ಬೇರ ಓಣಿ
25		ಉಳಿಮೇಶ್ವರ	ಖಾದ್ರಿಕಾಲೋನಿ-2	
26		ಛತ್ತರ ರೋಡ ತಾಂಡ	ಕರಿಗಾರ ಪೇಟೆ-2	
27		ಛತ್ತರ-1	ಮೇಸ್ತ್ರೀಪೇಟೆ-1	
28		ಛತ್ತರ-2	ಮೇಸ್ತ್ರೀಪೇಟೆ-2	
29		ಕುಮಾರ ಖೇಡ	ಪೆಟ್ರೋಲ್ ಬಂಕ್	
30		ತೊಡಕಿ	ಜನತಾಪೂರ-1	
31		ರಾಮಪ್ಪನ ತಾಂಡ	ಕನ್ನಾಪೂರ ಹಟ್ಟಿ-2	
32		ಲಿಂಬೆಪ್ಪನ ತಾಂಡ	ಕೆ.ಎಮ್ ಹಳ್ಳಿ-2	
33		ರಾಮಜಿ ತಾಂಡ	ತೊಡಕಿ ತಾಂಡ	

ಕ್ರಸಂ	ಒಟ್ಟು ಅಂ.ಕೇಂದ್ರ ಗಳ ಸಂಖ್ಯೆ	**ಸ್ವಂತ ಕಟ್ಟಡ** 375	**ಬಾಡಿಗೆ 134**	ಇತರೆ ಸರ್ಕಾರಿ ಕಟ್ಟಡಗಳ ನಡೆಯುತ್ತಿರುವ ಅಂ.ಕೇಂದ್ರಗಳು– **24**
34		ದೇಸಾಯಿ ಬೋಗಾಪೂರ–1	ಕುಮಾರ ಖೇಡ ಗೊಲ್ಲರ ಹಟ್ಟಿ	
35		ದೇಸಾಯಿ ಬೋಗಾಪೂರ–2	ಗೋನವಾಟ್ಲ ತಾಂಡ–2	
36		ಡಿ.ಬಿ ತಾಂಡ	ಹೊನ್ನಳ್ಳಿ–2	
37		ದಾದೂಡಿ ಕಿರಣ ತಾಂಡ	ಮಲ್ಲಯ್ಯ ಹೊಲದೊಡ್ಡಿ	
38		ಹಡಗಲಿ–1	ಕರಡಕಲ್ ಕುಂಬಾರ ಓಣಿ	
39		ಹಡಗಲಿ–2	ಕರಡಕಲ್ ಕುರಬರ ಓಣಿ	
40		ಹಡಗಲಿ ತಾಂಡ	ಕಸಬಾ ಲಿಂಗಸುಗೂರ–1	
41		ಯರದೊಡ್ಡಿ	ಕಸಬಾ ಲಿಂ ಎಸ್.ಸಿ	
42		ಯರದೊಡ್ಡಿ ತಾಂಡ	ಕಸಬಾ ಲಿಂಕುರಬರ ಓಣಿ–1	
43		ವೇಣಪ್ಪನ ತಾಂಡ	ಕಸಬಾಲಿಂ ಕುರಬರ ಓಣಿ–2	
44		ಸೋಂಪೂರ ತಾಂಡ	ಸಮಗಾರ ಓಣಿ	
45		ಮೆದಿಕಿನಾಳ–1	ಸುಣಗಾರ ಓಣಿ	
46		ಮೆದಿಕಿನಾಳ–2	ಕಟಗರ ಓಣಿ	
47		ಮೆದಿಕಿನಾಳ ಎಸ್.ಸಿ	ರಾಜ ಬಕ್ಷಾ ದರ್ಗಾ	
48		ಅಂತರಗಂಗಿ	ಕಬ್ಬೇರ ಓಣಿ	
49		ಅಂತರಗಂಗಿ ತಾಂಡ	ಬ್ರಾಹಣರ ಓಣಿ	
50		ಬೈಲಗುಡ್ಡ	ಲಕ್ಷ್ಮೀಗುಡಿ–1	
51		ಮ್ಯೂದರಹಾಳ–1	ಹಪ್ತಾಬಜಾರ್–1	
52		ಜಕ್ಕೇರಮಡು	ಹುಲಿಗುಡ್ಡ–1	
53		ಸುಲ್ತನಪೂರ	ಶಾದಿಮಹಲ್ ಲಿಂ	
54		ತಿಮ್ಮಾಪೂರ–1	ವಾಟರ್ ಟ್ಯಾಂಕ್	
55		ತಿಮ್ಮಾಪೂರ ಗೊಲ್ಲರ ಹಟ್ಟಿ	ಎಸ್.ಬಿ.ಎಚ್ ಕಾಲೋನಿ	
56		ವ್ಯಾಸನಂದಿಹಾಳ	ಆಜಾದ ನಗರ	
57		ನಾಗರಬೆಂಚಿ–1	ತಹಸಿಲ್ದಾರ ಆಫೀಸ್	
58		ನಾಗರಬೆಂಚಿ–2	ಗುರುಗುಂಟಾ–3	
59		ಮೂಡಲದಿನ್ನಿ	ಗುರುಗುಂಟಾ–4	
60		ಮೂಡಲದಿನ್ನಿ ತಾಂಡ	ಗುರುಗುಂಟಾ–5	
61		ಮೂಡಲದಿನ್ನಿ ಗೊಲ್ಲರ ಹಟ್ಟಿ	ಗುರುಗುಂಟಾ–6	
62		ತೀರ್ಥಬಾವಿ	ಗುರುಗುಂಟಾ–7	
63		ತೀರ್ಥಬಾವಿ ಗೊಲ್ಲರ ಹಟ್ಟಿ	ಗುರುಗುಂಟಾ–9	
64		ಬಗ್ಗಲಗುಡ್ಡ	ಗೊಲ್ಲರ ದೊಡ್ಡಿ	
65		ತಲೇಖಾನ–1	ಲೆಕ್ಕಿಂಚೇರಿ	
66		ತಲೇಖಾನ–2	ಪರಾಂಪೂರ ತಾಂಡ–1	
67		ಚೆನಮ್ಮನ ಗೊಲ್ಲರ ಹಟ್ಟಿ	ಪರಾಂಪೂರ ತಾಂಡ–2	
68		ಬಾಗವಾಡ ಗುಡಿಸಲು	ಅಡವಿಬಾವಿ ಎನ್.ಕೆ	

[illegible]	ಒಟ್ಟು ಅಂ.ಕೇಂದ್ರ ಗಳ ಸಂಖ್ಯೆ	**ಸ್ವಂತ ಕಟ್ಟಡ** 375	**ಬಾಡಿಗೆ 134**	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು–24
69		ಕನ್ನಾಳ–1	ನೀರಲಕೇರಿ–2	
70		ಮ್ಯಾದರಹಾಳ ತಾಂಡ	ಮಿಂಚೇರಿ ತಾಂಡ–1	
71		ಕಾಕಾನಗರ–ಎ	ಆಮದಿಹಾಳ–3	
72		ಕಾಕಾನಗರ–ಬಿ	ಬೋಗಾಪೂರ–2	
73		ಕಿಂಗಕಾಲೋನಿ	ಕಾಚಾಪೂರ–1	
74		ಹಟ್ಟಿ ಗ್ರಾಮ	ಕಾಚಾಪೂರ–3	
75		ಶಾಚಿತಿ ನಗರ	ಉಪ್ಪಾರನಂದಿಹಾಳ–2	
76		ಜಜಾಮೀಯಾ ಮಸ್ಜಿದ್	ಚಿಕ್ಕಲೆಕ್ಕಿಹಾಳ ಮಿನಿ	
77		ಎಸ್.ಸಿ ಕಾಲೋನಿ	ನಾಗರಹಾಳ–2	
78		ಪಾಮನಕಲ್ಲೂರ ಕ್ರಾಸ್	ನರಕಲದಿನ್ನಿ–2	
79		ಎ.ಬಿ ಕಾಲೊನಿ	ಕೋಠಾ–3	
80		ಆರ್.ಆರ್ ಕಾಲೋನಿ	ಕೋಠಾ–4	
81		ಜತ್ತ ಕಾಲೋನಿ–1	ಕೋಠಾ–5	
82		ಹಟ್ಟಿ ಕ್ಯಾಂಪ್	ಗೌಡೂರು–1	
83		ಲಿಂಗವದೊತ್ ಗದ್ದುಗೆ	ಗೋಲ್ಲಪಲ್ಲಿ–2	
84		ಹಟ್ಟಿ ಹೊಸೂರು	ಗೌಡೂರು ತಾಂಡ–2	
85		ಮೇದಿನಾಪೂರ–1	ಭಜಂತ್ರಿ ಓಣಿ	
86		ಮೇದಿನಾಪೂರ–2	ಮಹಾಂತ ನಗರ	
87		ಗುಡದನಾಳ–1	ಮದೀನಾ ಮಸ್ಜಿದ	
88		ಯಲಗಟ್ಟಾ–1	ಸಿದ್ದರೋಡ ಮಠ	
89		ಯಲಗಟ್ಟಾ–2	ಕೋಠಾ ಕ್ರಾಸ್–1	
90		ಮಾಚನೂರ–1	ಕೋಠಾ ಕ್ರಾಸ್–2	
91		ಬಂಡೆಬಾವಿ–1	ಯಲಗಟ್ಟಾ–3	
92		ಬಂಡೆಬಾವಿ–2	ಮಾಚನೂರು–2	
93		ಮಾಲಿಗೌಡ್ರ ದೊಡ್ಡಿ	ಮಾಚನೂರು–3	
94		ಯರಜಂತಿ–1	ಮಾಚನೂರು ತಾಂಡ	
95		ಯರಜಂತಿ–2	ಮೇದಿನಾಪುರ–3	
96		ಬಾರಿಗಿಡದೊಡ್ಡಿ	ಗುಡದನಾಳ–2	
97		ಮಲ್ಲೈದೊಡ್ಡಿ	ವಾಲ್ಮೀಕಿ ನಗರ	
98		ಹಿರೇ ಹೊಲದೊಡ್ಡಿ	ಸಂತೆಕಲ್ಲೂರ–4	
99		ಜ್ಯೋತಿ ಕಾಲೋನಿ	ಅಂಕುಶದೊಡ್ಡಿ–3	
100		ಜತ್ತಿ ಕಾಲೋನಿ–2	ಐದನಾಳ–2	
101		ನಾಗರಹಾಳ–1	ಮಟ್ಟೂರು–3	
102		ನಾಗರಹಾಳ–3	ಮಟಟ್ಟೂರು ತಾಂಡ	
103		ತುಂಬಲಗಡ್ಡಿ–1	ಕುಣಿಕೆಲ್ಲೂರು–2	
104		ತುಂಬಲಗಡ್ಡಿ–2	ಮಸ್ಕಿ ಜಿ.ಪಿ.ಎ	

ಕ್ರಸಂ	ಒಟ್ಟು ಅಂ.ಕೇಂದ್ರ ಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
105		ತೊಂಡಿಹಾಳ-1	ಗಾಂಧಿನಗರ-3	
106		ತೊಂಡಿಹಾಳ-2	ಗಾಂಧಿನಗರ-4	
107		ತೊಂಡಿಹಾಳ-3	ಗಾಂಧಿನಗರ-5	
108		ಹಲ್ಕಾವಟಗಿ-1	ಪಾರ್ವತಿ ನಗರ	
109		ಹಲ್ಕಾವಟಗಿ-2	ಪೂರ್ಘಾರ ಪೇಟೆ	
110		ಹಲ್ಕಾವಟಗಿ-3	ಜನತಾ ಕಾಲೋನಿ	
111		ಅಂಕನಾಳ	ನಾಯಕವಾಡಿ	
112		ಉಪನಾಳ	ಹಳೇ ಬಸ್ಟಾಂಡ್	
113		ನವಲಿ	ಕಣವಿ ಆಚಿಜನೇಯ್ಯ	
114		ರಾಂಪೂರ	ಸೋಮನಾಥ ನಗರ-1	
115		ಪಲಗಲದಿನ್ನಿ	ಸೋಮನಾಥ ನಗರ-2	
116		ಜೂಲಗುಡ್ಡ-1	ಪಿಂಜಾರ ಓಣಿ	
117		ಹನುಮನಗುಡ್ಡ-1	ದೇವಾಂಗ ಮಠ	
118		ಹನುಮನಗುಡ್ಡ-2	ಆನ್ವರಿ-5	
119		ಕಮಲದಿನ್ನಿ-2	ರೋಡಲಬಂಡಾ-2	
120		ಕರಡಕಲ್-1	ರೋಡಲಬಂಡಾ-4	
121		ಕರಡಕಲ್ ಎಸ್.ಸಿ	ವಂದ್ಲಿ ಹೊಸೂರು-2	
122		ಕರಡಕಲ್ ತಾಂಡ	ಅಮರೇಶ್ವರ ನಗರ	
123		ಕಸಬಾ ಲಿಂ ಪಟೇಲ್ ಓಣಿ	ಜೆ.ಆರ್.ತಾಂಡ	
124		ಕಸಬಾ ಲಿಂ ನಾಯಕ ಓಣಿ	ಚಿಕ್ಕ ಉಪ್ಪೇರಿ-2	
125		ಹುಲಿಗುಡ್ಡ-2	ತೋರ್ಲ ಬೇಂಚಿ-2	
126		ಪಿಂಚಣಿಪೂರ-1	ಆನಾಹೊಸೂರು-6	
127		ಪಿಂಚಣಿಪೂರ-2	ಮ್ಯಾದರಾಳ-2	
128		ಗೌಳಿಪೂರ	ಪಿಕಳಿಹಾಳ	
129		ಕೆರೆದಂಡೆ	ಸೋಮ್ಲನಾಯಕ ತಾಂಡ	
130		ಹಪ್ತಾಬಜಾರ್-2	ಲಿಂಗದೊಳ್ಳಿ ದೊಡ್ಡಿ	
131		ಲಕ್ಷ್ಮೀಗುಡಿ-2	ಗಲಗಿನ ದೊಡ್ಡಿ	
132		ಜನತಾ ಕಾಲೋನಿ-1	ಗೌಡೂರು-3	
133		ಜನತಾ ಕಾಲೋನಿ-2	ಗೋನ್ವಾರ-2	
134		ಸಜ್ಜಲಗುಡ್ಡ	ಮಟ್ಟೂರು ಗೋಲ್ಲರ ಹಟ್ಟಿ	
135		ಕೋಮನೂರ		
136		ಬೆಳ್ಳಿಹಾಳ		
137		ಆಮದಿಹಾಳ-2		
138		ಕನಸಾವಿ-2		
139		ಕನಸಾವಿ-3		
140		ಆದಾಪೂರ		

ಕ್ರ.ಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
141		ಕೋಮಲಾಪೂರ		
142		ಹಿರೇ ಯರದಿಹಾಳ		
143		ಚಿಕ್ಕ ಯರದಿಹಾಳ		
144		ಬೊಮ್ಮನಾಳ-1		
145		ಬೊಮ್ಮನಾಳ ತಾಂಡ		
146		ಬಂಡಿಸುಂಕಾಪೂರ		
147		ಬೋಗಾಪುರ-2		
148		ಬಯ್ಯಾಪುರ-1		
149		ಖೈರವಾಡಗಿ-1		
150		ಖೈರವಾಡಗಿ-2		
151		ಖೈರವಾಡಗಿ ತಾಂಡ		
152		ಪೂಜಾರಿ ತಾಂಡ		
153		ಗುಂಡಸಾಗರ-1		
154		ಗುಂಡಸಾಗರ-2		
155		ಕಾಚಾಪೂರ-2		
156		ಮಾವಿನಬಾವಿ-1		
157		ಮಾವಿನಬಾವಿ-2		
158		ಮಾವಿನಬಾವಿ-3		
159		ಭೊಪೂರ-1		
160		ಭೊಪೂರ-2		
161		ಭೊಪೂರ ತಾಂಡ		
162		ರಾಂಪೂರ-1		
163		ರಾಂಪೂರ-2		
164		ಆಶಿಹಾಳ-1		
165		ಆಶಿಹಾಳ-2		
166		ಅಡವಿಬಾವಿ		
167		ಗೀಗಿನಾಯಕ ತಾಂಡ		
168		ಹಾಲವರ್ತಿತಾಂಡ		
169		ಕಿಲ್ಲಾರ ಹಟ್ಟಿ		
170		ಕಿಲ್ಲಾರ ತಾಂಡ		
171		ಹಿರೇಲೆಕ್ಕಿಹಾಳ-1		
172		ಚಿಕ್ಕಲೆಕ್ಕಿಹಾಳ-1		
173		ಸಂತೆಕಲ್ಲೂರು-1		
174		ಸಂತೆಕಲ್ಲೂರು-2		
175		ಸಂತೆಕಲ್ಲೂರು-4		
176		ಅಂಕುಶದೊಡ್ಡಿ-2		

ಕ್ರ.ಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು– 24
177		ಗೋನವಾರ–1		
178		ಗೋನವಾರ–2		
179		ಬಸ್ಸಾಪೂರ		
180		ಮುಸ್ಲಿ ಕಾರಲಕುಂಟಿ		
181		ಮುದಬಾಳ		
182		ಬುದ್ದಿನಿ ಎಸ್		
183		ಹುನಕುಂಟಿ–2		
184		ಕಳ್ಳಿ ಲಿಂಗಸುಗೂರು		
185		ಯಲಗಲದಿನ್ನಿ		
186		ಐದನಾಳ–1		
187		ಮಿಟ್ಟೆಕೆಲ್ಲೂರು		
188		ಕುಣಿಕೆಲ್ಲೂರ–1		
189		ಮಟ್ಟೂರು–1		
190		ಮಟಟ್ಟೂರು–2		
191		ಗುಡಿಹಾಳ–1		
192		ಗುಡಿಹಾಳ–2		
193		ಬುದ್ದಿನಿ ಟಿ		
194		ತೆರಿಬಾಬಿ		
195		ಜೆಕ್ಕರ ಮಡು ಗೋಲ್ಲರ ಹಟ್ಟಿ		
196		ಸುಲ್ತನಪುರ ಗೋಲ್ಲರ ಹಟ್ಟಿ		
197		ಮಟ್ಟೂರು ಗೋಲ್ಲರ ಹಟ್ಟಿ		
198		ಕಡದರಹಾಳ		
199		ಕಡದರಹಾಳ ತಾಂಡ		
200		ಮಸ್ಕಿ ಕಿಲ್ಲಾ		
201		ಮಸ್ಕಿ ಬಿ.ಸಿ.ಎ		
202		ಮಸ್ಕಿ ಗಾಂಧಿನಗರ–1		
203		ಮಸ್ಕಿ ಗಾಂಧಿನಗರ–2		
204		ಮಸ್ಕಿ ಎಸ್.ಸಿ.ಎ–2		
205		ಮಸ್ಕಿ ಕಲ್ಲುಬಾವಿ ಕಟ್ಟಿ		
206		ಮಸ್ಕಿ ಹಳೇ ಬಸ್ಟಾಂಡ್		
207		ಮಸ್ಕಿ ಎಸ್.ಸಿ.ಎ–1		
208		ದಿನ್ನಿಬಾವಿ		
209		ದಿನ್ನಿಬಾವಿ ತಾಂಡ		
210		ಮಾರಲದಿನ್ನಿ ತಾಂಡ–1		
211		ಸಾನಬಾಳ		
212		ವೆಂಕಟಾಪೂರ		

ಕ್ರ.ಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	**ಸ್ವಂತ ಕಟ್ಟಡ** 375	**ಬಾಡಿಗೆ** 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
213		ಬೆನಕನಾಳ		
214		ಉಸ್ಕಿಹಾಳ		
215		ಬೆಲ್ಲದಮರಡಿ		
216		ಅವಿಬಾವಿ ತಾಂಡ-1		
217		ಕಾಟಗಲ್		
218		ಮಾರಲದಿನ್ನಿ-1		
219		ಮಾರಲದಿನ್ನಿ-2		
220		ಕಲಕಬೆಚಿಚಿ ತಾಂಡ		
221		ಡಬ್ಬೇರ ಮಡು		
222		ವೆಂಕಟಾಪೂರ ತಾಂಡ		
223		ಮಾರಲದಿನ್ನಿ ತಾಂಡ-2		
224		ಅಡವಿಬಾವಿ ತಾಂಡ-2		
225		ಆನ್ವರಿ-1		
226		ಆನ್ವರಿ-2		
227		ಆನ್ವರಿ-3		
228		ಆನ್ವರಿ-6		
229		ಹಿರೆ ನಗನೂರ-1		
230		ಹಿರೆ ನಗನೂರ-2		
231		ಚುಕನಟ್ಟಿ		
232		ರೋಡಲಬಂಡಾ-1		
233		ತವಗ		
234		ಕಡ್ಡೋಣ		
235		ವಂದ್ಲಿ ಹೊಸೂರು-1		
236		ಮಲ್ಲಾಪುರ		
237		ಮಲ್ಲಾಪುರ ಕ್ಯಾಂಪ್		
238		ಚಿತ್ತಾಪೂರ-1		
239		ಚಿತ್ತಾಪೂರ-2		
240		ಚಿತ್ತಾಪೂರ-3		
241		ಚಿತ್ತಾಪೂರ-4		
242		ಸಾಯಿ ನಗರ		
243		ಬೆಂಡೋಣಿ-1		
244		ಬೆಂಡೋಣಿ-2		
245		ಚಿಚಿಕ್ಕಜಾವೂರ		
246		ಹಿರೆಜಾವೂರ		
247		ರೋಡಲಬಂಡಾ ಕ್ಯಾಂಪ್		
248		ಚಿಚಿಕ್ಕ ಉಪ್ಪೇರಿ-1		

ಕ್ರಸಂ	ಒಟ್ಟು ಅಂ.ಕೇಂದ್ರ ಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳ್ಲ ನಡೆಯುತ್ತಿರುವ ಅಂ.ಕೇಂದ್ರಗಳು– 24
249		ಸುಣಕಲ್		
250		ತೋರಲ ಬೇಂಚಿ–1		
251		ಜಾಗಿರ ನಂಧಿಹಾಳ		
252		ಆನಾಹೊಸುರು–1		
253		ಆನಾಹೊಸುರು–2		
254		ಆನಾಹೊಸುರು–3		
255		ಆನಾಹೊಸುರು–4		
256		ಆನಾಹೊಸುರು–5		
257		ಆನಾಹೊಸುರು–6		
258		ಚಚಿತ್ರನಾಳ		
259		ಮರಗಂಟನಾಳ		
260		ಮೇಗಳಪೆಟೆ–2		
261		ಕರಿಗಾರ ಪೇಟೆ–1		
262		ಮೇಸ್ತ್ರಿಪೇಟೆ–3		
263		ಡಕ್ಲರ ಓಣಿ		
264		ಪೈಗಂಬರ್ ನಗರ		
265		ಕೋತಾ–1		
266		ಕೋತಾ–2		
267		ಗೌಡೂರು–1		
268		ಗೌಡೂರು–3		
269		ಗೌಡೂರ ತಾಂಡ–1		
270		ದೇವರಪೂರ–1		
271		ದೇವರಪೂರ–2		
272		ದೇವರಪೂರ–3		
273		ಯರಡೋಣ–1		
274		ಯರಡೋಣ–2		
275		ಯರಡೋಣ–3		
276		ಗದಗಿ		
277		ಗದಗಿ ತಾಂಡ		
278		ಪೈದೊಡ್ಡಿ–1		
279		ಪೈದೊಡ್ಡಿ–2		
280		ಜಾಲಹಳ್ಳಿ ದೊಡ್ಡಿ		
281		ಗೋಲ್ಲಪಲ್ಲಿ		
282		ದಮತ್ತೇರ ದೊಡ್ಡಿ		
283		ಬೆಂಚಲದೊಡ್ಡಿ		
284		ಬೆಂಚಲದೊಡ್ಡಿ ತಾಂಡ		

ಕ್ರಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
285		ಪೂಜಾರಿ ತಾಂಡ		
286		ಹೊಸಗುಡ್ಡ		
287		ಹಳೇ ಬೆಂಚಲದೊಡ್ಡಿ ಮಿನಿ		
288		ಕಾಳಾಪೂರ-1		
289		ಕಾಳಾಪೂರ-2		
290		ಮೀಂಚೇರಿ ತಾಂಡ-2		
291		ಮೀಂಚೇರಿ ತಾಂಡ-3		
292		ಪೂಲಭಾವಿ-1		
293		ಪೂಲಭಾವಿ-2		
294		ಪೂಲಭಾವಿ ತಾಂಡ		
295		ಗೋನವಾಟ್ಲ-1		
296		ಗೋನವಾಟ್ಲ-2		
297		ಗೋನವಾಟ್ಲ ತಾಂಡ-1		
298		ಆರ್,ಎನ್ ನಗರ		
299		ಗುಂತಗೋಳ-1		
300		ಗುಂತಗೋಳ-2		
301		ಕಡದರಗಡ್ಡಿ		
302		ಯರಗೋಡಿ		
303		ಯಳಗುಂದಿ		
304		ಜಲದುರ್ಗಾ		
305		ಹಂಚಿನಾಳ-1		
306		ಹಂಚಿನಾಳ-2		
307		ಹೊನ್ನಳ್ಳಿ-1		
308		ಹೊನ್ನಳ್ಳಿ-3		
309		ಮಲ್ಲಯ್ಯನ ಹೊಲದೊಡ್ಡಿ		
310		ಗುರುಗುಂಟಾ-1		
311		ಗುರುಗುಂಟಾ-2		
312		ಗುರುಗುಂಟಾ-8		
313		ಗುಜಲೇರ ದೊಡ್ಡಿ		
314		ಪೂಜಾರಿದೊಡ್ಡಿ		
315		ಗಲಗಿನದೊಡ್ಡಿ		
316		ಲಕ್ಕೇಂಚೆರಿ		
317		ಪರಾಂಪುರ ತಾಂಡ-1		
318		ಐದಬಾವಿ-1		
319		ಐದಬಾವಿ-2		
320		ಮಟಮರಡಿ ದೊಡ್ಡಿ		

ಕ್ರಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು-24
321		ರಾಮಲೂಟಿ		
322		ಪರಾಂಪೂರ		
323		ಐದಬಾವಿ ಕೇನಾಲ್ ಕ್ರಾಸ್		
324		ಲಿಂಗದೊಳ್ಳಿ ದೊಡ್ಡಿ		
325		ತಣಮನಕಲ್		
326		ಗೋಲಲ್ಲರ ದೊಡ್ಡಿ		
327		ರಾಯದುರ್ಗಾ		
328		ಉಪ್ಪಾರದೊಡ್ಡಿ		
329		ಕಳ್ಳಾಳೇರ ದೊಡ್ಡಿ		
330		ಚಚಿಕ್ಕಲೇರದೊಡ್ಡಿ		
331		ಸಾಲೇರದೊಡ್ಡಿ		
332		ಚಿಕ್ಕ ಹೆಸರೂರ-1		
333		ಚಿಕ್ಕಹೆಸರೂರ-2		
334		ಚಿಕ್ಕ ಹೆಸರೂರ-3		
335		ಸರ್ಜಾಪೂರ-1		
336		ಸರ್ಜಾಪೂರ-3		
337		ಸರ್ಜಾಪೂರ-4		
338		ನಿಲೋಗಲ್-2		
339		ನಿಲೊಗಲ್-1		
340		ನಿಲೋಗಲ್-4		
341		ನಿಲೋಗಲ್ ಕ್ರಾಸ್-1		
342		ನಿಲೋಗಲ್ ಕ್ರಾಸ್-2		
343		ಚಿಕ್ಕನಗನೂರ		
344		ವೀರಾಪೂರ-1		
345		ವೀರಾಪೂರ-2		
346		ಗೆಜ್ಜಲಗಟ್ಟಾ-4		
347		ಗೆಜ್ಜಲಗಟ್ಟಾ-1		
348		ಗೆಜ್ಜಲಗಟ್ಟಾ-2		
349		ಗೆಜ್ಜಲಗಟ್ಟಾ-3		
350		ಅಮರಾವತಿ		
351		ಹಿರೇ ಹೆಸರೂರ-1		
352		ಕುಪ್ಪಿಗುಡ್ಡ-2		
353		ಕುಪ್ಪಿಗುಡ್ಡ-1		
354		ಜಾಲಿಬೆಂಚಿ		
355		ಗೋರೆಬಾಳ-1		
356		ಕೆಸರಟ್ಟಿ		

ಕ್ರ.ಸಂ	ಒಟ್ಟು ಅಂ.ಕೇಂದ್ರಗಳ ಸಂಖ್ಯೆ	ಸ್ವಂತ ಕಟ್ಟಡ 375	ಬಾಡಿಗೆ 134	ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂ.ಕೇಂದ್ರಗಳು–24
357		ನೀರಲಕೇರಿ ಮಿನಿ-3		
358		ಗೋರಬಾಳ-2		
359		ಈಚನಾಳ-1		
360		ಈಚನಾಳ-2		
361		ಈಚನಾಳ-3		
362		ಈಚನಾಳತಾಂಡ-1		
363		ಈಚನಾಳತಾಂಡ-2		
364		ಈಚನಾಳ ಕ್ರಾಸ್		
365		ಅಡವಿಬಾವಿ ಕ್ರಾಸ್		
366		ಕೆಸರಟ್ಟಿ ತಾಂಡ		
367		ಕೆಸರಟ್ಟಿ ತಾಂಡ-2		
368		ಗೊರೆಬಾಳತಾಂಡ-1		
369		ಅಡವಿಬಾವಿ		
370		ಹಾಲಭಾವಿ-1		
371		ಹಾಲಬಾವಿ-2		
372		ಹಾಳಭಾವಿ ತಾಂಡ-1		
373		ಹಾಲಭಾವಿ ತಾಂಡ-2		
374		ಹಿರೇಉಪ್ಪೇರಿ		
375		ಯರಗುಂಟಿ		

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 604

ಸದಸ್ಯರ ಹೆಸರು : ಶ್ರೀ ರಾಮದಾಸ್ .ಎಸ್ .ಎ (ಕೃಷ್ಣರಾಜ)

ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 09-12-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಈ.	ಬಂದಿದ್ದಲ್ಲಿ, ಹೆಚ್ಚುವರಿ ಮಾರ್ಗಗಳಲ್ಲಿ ಇನ್ನೂ ಹೆಚ್ಚಿನ ಬಸ್ಸುಗಳನ್ನು ಮಂಜೂರು ಮಾಡಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಇಂಡಿ ಪಟ್ಟಣದ ಜನದಟ್ಟಣೆಗನುಗುಣವಾಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗನುಗುಣವಾಗಿ ಮುಂದಿನ ದಿನಗಳಲ್ಲಿ ಪರಿಶೀಲಿಸಿ ಇನ್ನು 8 ಸಾಮಾನ್ಯ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
ಉ.	ಹೊಂದಿದ್ದಲ್ಲಿ, ಯಾವಾಗ ಮತ್ತು ಎಷ್ಟು ನಗರ ಸಾರಿಗೆ ಬಸ್ಸುಗಳನ್ನು ಮಂಜೂರು ಮಾಡಲಾಗುವುದು?	

ಸಂಖ್ಯೆ: ಟಿಡಿ 228 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಪಾಟೀಲ್ ಎಂ. ವೈ. (ಅಫ್ಜಲ್‌ಪುರ್)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: : 511

ಉತ್ತರ ದಿನಾಂಕ : 09.12.2020

ಕ್ರಸಂ.	ಪ್ರಶ್ನೆಗಳು	ಉತ್ತರಗಳು
ಅ.	ಅಫ್ಜಲ್‌ಪುರ ತಾಲೂಕಿನಲ್ಲಿ ದೇವಲ ಗಾಣಗಾಪೂರ ಗ್ರಾಮವು ದಕ್ಷಿಣ ಭಾರತದಲ್ಲಿ ಅತೀ ದೊಡ್ಡ ಯಾತ್ರ ಸ್ಥಳವಾಗಿದ್ದು ಬೇರೆ ಬೇರೆ ರಾಜ್ಯಗಳಿಂದ ಶ್ರೀದತ್ತ ಮಹಾರಾಜ ದರ್ಶನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಯಾತ್ರಿಕರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಈ ಯಾತ್ರಾ ಸ್ಥಳದಲ್ಲಿ ಕುಡಿಯುವ ನೀರಿನ ಅಭಾವವಿದ್ದು ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಜಲಮೂಲದಿಂದ ಸರ್ಮಪಕವಾಗಿ ನೀರು ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಹುಗ್ರಾಮ ಕುಡಿಯುವ ನೀರು ಯೋಜನೆಗಾಗಿ ಭೀಮಾ ನದಿಗೆ ನಿರ್ಮಿಸಲಾದ ಬ್ಯಾರೇಜ್ ಕಳಪೆ ಮಟ್ಟದಾಗಿದ್ದು ಹಾಗೂ ನೀರು ಪೂರೈಕೆಯಿಂದಾಗಿ ಜನರಿಗೆ ಕುಡಿಯುವ ಹಾಗೂ ರೈತರ ಬೆಳೆಗಳಿಗೆ ನೀರು ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೇವಲಗಾಣಗಾಪೂರ ಮತ್ತು ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಿನ್ಯಾಸ ಹಾಗೂ ಅಂದಾಜು ಪಟ್ಟಿಯನ್ನು 2005ರಲ್ಲಿ ತಯಾರಿಸಲಾಗಿದ್ದು, ಪ್ರಸ್ತುತ ದೇವಲಗಾಣಗಾಪೂರ ಗ್ರಾಮದ ಜನಸಂಖ್ಯೆಯು ಹೆಚ್ಚಾಗಿರುವುದರಿಂದ ಸದರಿ ಗ್ರಾಮ ಮತ್ತು ಸಂಗಮಕ್ಕೆ ಸಂಪೂರ್ಣವಾಗಿ ನೀರು ಸರಬರಾಜು ಆಗುತ್ತಿದೆ. ಬಾಕಿ ಉಳಿದ ಚೌಡಾಪೂರ, ತೆಲ್ಲೂರ, ಕೆರಕನಳ್ಳಿ ಮತ್ತು ಬಟಗೇರಾ ಗ್ರಾಮಗಳಿಗೆ ನೀರು ಪೂರೈಕೆ ಆಗುತ್ತಿಲ್ಲ. ಆದ್ದರಿಂದ, ಸದರಿ ಗ್ರಾಮಗಳಿಗೆ ಪ್ರಸಕ್ತ ಸಾಲಿನ ಜಲ ಜೀವನ ಮಿಷನ್ ಯೋಜನೆ ಅಡಿಯಲ್ಲಿ ಪುನ:ಶ್ಚೇತನ ಕಾಮಗಾರಿ ಕೈಗೆತ್ತಿಕೊಂಡಿದ್ದು, ಕಾಮಗಾರಿಯ ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿರುತ್ತದೆ.
ಇ.	ಬಹುಗ್ರಾಮ ಕುಡಿಯುವ ನೀರು ಯೋಜನೆಗಾಗಿ ಭೀಮಾ ನದಿಗೆ ನಿರ್ಮಿಸಲಾದ ಬ್ಯಾರೇಜ್ ಕಳಪೆ ಮಟ್ಟದಾಗಿದ್ದು ಹಾಗೂ ನೀರು ಸೋರಿಕೆಯಿಂದಾಗಿ ಜನರಿಗೆ ಕುಡಿಯಲು ಹಾಗೂ ರೈತರ ಬೆಳೆಗಳಿಗೆ ನೀರು ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ:	ಅನ್ವಯಿಸುವದಿಲ್ಲ.
ಈ.	ಈ ಬ್ಯಾರೇಜಿಗೆ ಪೂರ್ತಿ ಪ್ರಮಾಣದ ನೀರು ನಿಲ್ಲಿಸಲು ಯಾವಾಗ ಹೈಡ್ರೋಲಿಕ್ ಗೇಟ್ ಗಳನ್ನು ಅಳವಡಿಸಲಾಗುವುದು ಹಾಗೂ ಕಾಮಗಾರಿಯನ್ನು ಮಾಡಿದ ಗುತ್ತಿಗೆದಾರರನ್ನು ಯಾವಾಗ ಕಪ್ಪು ಪಟ್ಟಿಗೆ ಸೇರಿಸಲಾಗುವುದು (ವಿವರ ನೀಡುವುದು)	ಅನ್ವಯಿಸುವದಿಲ್ಲ.

ಸಂ:ಗ್ರಾಕುನೀ&ನೈಇ 96 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನಸಭಾ

ಸದಸ್ಯರ ಹೆಸರು : ಶ್ರೀ ನರೇಂದ್ರ.ಆರ್ (ಹನೂರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 499

ಉತ್ತರ ದಿನಾಂಕ : 09.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದಲ್ಲಿ, ಈ ಕುಡಿಯುವ ನೀರಿನ ಯೋಜನೆ ಪೂರ್ಣಗೊಳ್ಳಲು ಸರ್ಕಾರ ಬಿಡುಗಡೆ ಮಾಡಿರುವ ಹಾಗೂ ಮಾಡಬೇಕಾಗಿರುವ ಅನುದಾನವೆಷ್ಟು; (ವಿವರ ನೀಡುವುದು)	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದ 291 ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ (ಹಂತ-1)ರ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಈವರೆಗೆ ರೂ.5154.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಯೋಜನೆಗೆ ರೂ.166.25 ಕೋಟಿಗಳಿಗೆ ಕರಾರು ಮಾಡಿಕೊಳ್ಳಲಾಗಿದ್ದು, ಉಳಿಕೆ ಮೊತ್ತವನ್ನು ಭೌತಿಕ ಪ್ರಗತಿಯ ಅನುಸಾರ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.
ಇ)	ಈ ಯೋಜನೆಯ ಮುಂದುವರಿದ ಕಾಮಗಾರಿಗೇ (2ನೇ ಹಂತದ ಕಾಮಗಾರಿಗೆ) ಅನುದಾನ ಬಿಡುಗಡೆ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಎರಡನೇ ಹಂತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಮುಖೇನ ನಿಯೋಜನೆಗೊಂಡ ಗುತ್ತಿಗೆದಾರರಿಗೆ ಭೌತಿಕ ಪ್ರಗತಿಯ ಅನುಸಾರ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಸಂ:ಗ್ರಾಕುನೀ&ನೈಇ 93 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	269
ಉತ್ತರ ದಿನಾಂಕ	:	09.12.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿವೆ; ಎಷ್ಟು ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ; (ಸಂಪೂರ್ಣ ವಿವರ ನೀಡುವುದು).</td><td>ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ 04 ಯೋಜನೆಗಳು ಮಂಜೂರಾಗಿದೆ.
1. ಬುಳ್ಳಾಪುರ ಮತ್ತು ಇತರೆ 18 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ.
2. ಹೊಳೆಬೆನವಳ್ಳಿ ಮತ್ತು 23 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ.
3. ಸಂತೆಕಡೂರು ಮತ್ತು 16 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ.
4. ಭದ್ರಾವತಿ ತಾಲ್ಲೂಕು ಒಳಪಟ್ಟ ಯಡೆಹಳ್ಳಿ ಮತ್ತು ಇತರೆ 8 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ.
ಸದರಿ 04 ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಯೋಜಿತ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.</td></tr>
<tr><td>ಆ)</td><td>ಕುಂಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;</td><td>ಕುಂಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಗ್ರಾಮಗಳಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಜಲ ಜೀವನ್ ಮಿಷನ್‌ನಡಿ ರಾಜ್ಯ ಸರ್ಕಾರದ ಯೋಜನೆಯಾದ ಮನೆ ಮನೆಗೆ ಗಂಗೆಯಿಂದ ಕಾರ್ಯಾತ್ಮಕ ನಳದ ನೀರು ಸಂಪರ್ಕವನ್ನು ನೀಡಿ ಶುದ್ಧ ಕುಡಿಯುವ ನೀರನ್ನು 2023ನೇ ಸಾಲಿನ ಅಂತ್ಯದೊಳಗೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.</td></tr>
<tr><td>ಇ)</td><td>ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ ಹಾಗೂ ಎಷ್ಟು ವೆಚ್ಚವಾಗಿದೆ? (ವಿವರ ನೀಡುವುದು)</td><td>ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ;
<table>
<tr><th>ಕ್ರಸಂ</th><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ</th><th>ವೆಚ್ಚ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2017–18</td><td>934.68</td><td>913.64</td></tr>
<tr><td>2</td><td>2018–19</td><td>1,978.03</td><td>859.28</td></tr>
<tr><td>3</td><td>2019–20</td><td>1,630.77</td><td>1,610.51</td></tr>
<tr><td></td><td>ಒಟ್ಟು</td><td>4,543.48</td><td>3,383.43</td></tr>
</table>
</td></tr>
</table>

ಸಂ:ಗ್ರಾಕುನೀ&ನೈಇ 90 ಗ್ರಾನೀಸ(4)20

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 863

ಉತ್ತರ ದಿನಾಂಕ : 09/12/2020

ಕ್ರಸಂ	ಪ್ರಶ್ನೆ	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಅಮಟೂರು ಮತ್ತು 19 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು:	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಅಮಟೂರು ಮತ್ತು 19 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಶ್ಚೇತನಕ್ಕೆ ಕಾಮಗಾರಿಯ ಜಲಮೂಲದ ಸುಸ್ಥಿತರತೆಯನ್ನು ಪರಿಗಣಿಸಿ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ನವಿಲುತೀರ್ಥ ಜಲಾಶಯವನ್ನು ಹಿನ್ನೀರನ್ನಾಗಿ ಪರಿಗಣಿಸಿ ಮರು ವಿನ್ಯಾಸಗೊಳಿಸಲಾಗುತ್ತಿದ್ದು, ವಿಸ್ತೃತ ಯೋಜನಾ ವರದಿ ತಯಾರಿಕೆ ಹಂತದಲ್ಲಿದೆ. ಸದರಿ ಯೋಜನೆಯನ್ನು 2021-22ನೇ ಸಾಲಿನ JJM ವಾರ್ಷಿಕ ಕ್ರಿಯಾಯೋಜನೆಯಲ್ಲಿರಿಸಿ ಅನುಷ್ಠಾನಗೊಳಿಸಲಾಗುವುದು.
ಆ)	ಪ್ರಸ್ತುತ ಸದರಿ ಯೋಜನೆ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಇ)	ಸಾರ್ವಜನಿಕರ ಹಿತದೃಷ್ಠಿಯಿಂದ ಈ ಯೋಜನೆಯನ್ನು ಪುನಶ್ಚೇತನಗೊಳಿಸುವುದು ಅತೀ ಅವಶ್ಯವಿದ್ದು, ಈ ಕುರಿತಾದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ: ಇದಕ್ಕೆ ಬೇಕಾಗುವ ಅನುದಾನವೆಷ್ಟು:	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಅಮಟೂರ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಅನುಷ್ಠಾನಕ್ಕೆ ಜಲಮೂಲದ ಸುಸ್ಥಿರತೆಯನ್ನು ಪರಿಗಣಿಸಿ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ನವಿಲುತೀರ್ಥ ಜಲಾಶಯವನ್ನು ಹಿನ್ನೀರನ್ನಾಗಿ ಪರಿಗಣಿಸಿ ಮರು ವಿನ್ಯಾಸಗೊಳಿಸಲಾಗಿದ್ದು, ವಿಸ್ತೃತ ಯೋಜನಾ ವರದಿ ತಯಾರಿಕೆ ಹಂತದಲ್ಲಿದೆ.
ಈ)	ಹಾಗಾದರೆ, ಸದರಿ ಯೋಜನೆ ಪುನಶ್ಚೇತನಗೊಳಿಸುವ ಮೂಲಕ ಈ ಗ್ರಾಮಗಳಿಗೆ ಮಲಪ್ರಭಾ ನದಿಯಿಂದ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾವುದೇ?	ಸದರಿ ಯೋಜನೆಯ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ಪರಿಶೀಲಿಸಲಾಗುವುದು

ಸಂ:ಗ್ರಾಕುನೀ&ನೈಇ 111 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 722

ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ. ಪಾಟೀಲ್(ಸಾಸನೂರು) (ದೇವರ ಹಿಪ್ಪರಗಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ದೇವರಹಿಪ್ಪರಗಿ ಪಟ್ಟಣದಲ್ಲಿರುವ ಬಸ್ ನಿಲ್ದಾಣವನ್ನು ನವೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು.
ಆ.	ಈ ಬಸ್ ನಿಲ್ದಾಣದಲ್ಲಿ ಅನೇಕ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಇರುವ ಬಸ್ ನಿಲ್ದಾಣದಲ್ಲಿ ಅವಶ್ಯಕ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಬೆಳಕಿನ ವ್ಯವಸ್ಥೆ, ಆವರಣದ ಡಾಂಬರೀಕರಣ, ಆಸನಗಳ ವ್ಯವಸ್ಥೆ, ಮಹಿಳೆಯರ ವಿಶ್ರಾಂತಿ ಕೊಠಡಿ, ಉಪಹಾರ ಗೃಹದ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
ಇ.	ಈ ಮೂಲಭೂತ ಸೌಕರ್ಯಗಳನ್ನು ಯಾವಾಗ ಕಲ್ಪಿಸಲಾಗುವುದು; ಬಸ್ ನಿಲ್ದಾಣವನ್ನು ಯಾವಾಗ ನವೀಕರಿಸಲಾಗುವುದು;	ಕೋವಿಡ್-19ರ ಹಿನ್ನೆಲೆಯಲ್ಲಿ ಸಂಸ್ಥೆಯು ಆರ್ಥಿಕ ನಷ್ಟದಲ್ಲಿದ್ದು ಹಾಗೂ ಹೊಸ ಕಾಮಗಾರಿಯನ್ನು ಕೈಗೊಳ್ಳುವುದನ್ನು ನಿರ್ಬಂಧಿಸಿರುವುದರಿಂದ, ಕಾಮಗಾರಿಯನ್ನು ಮುಂದಿನ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಪರಿಶೀಲಿಸಲಾಗುವುದು.
ಈ.	ನವೀಕರಿಸಿದ ಯೋಜನೆ ರೂಪಿಸಲಾಗಿದೆಯೇ;	ಹೌದು
ಉ.	ಯೋಜನೆ ರೂಪಿಸಿದ್ದಲ್ಲಿ, ಇದಕ್ಕೆ ಮೀಸಲಿರಿಸಿದ ಅಂದಾಜು ಮೊತ್ತ ಎಷ್ಟು;	ಸದರಿ ಬಸ್ ನಿಲ್ದಾಣ ಮರು ನಿರ್ಮಿಸಲು ರೂ.400.00 ಲಕ್ಷಗಳ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.
ಊ.	ಬಸ್ ನಿಲ್ದಾಣ ನವೀಕರಣ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)	ಉಪ ಪ್ರಶ್ನೆ "ಇ"ರಲ್ಲಿ ಉತ್ತರಿಸಿದೆ.

ಸಂಖ್ಯೆ: ಟಿಡಿ 247 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: : 665
ಉತ್ತರ ದಿನಾಂಕ : 09.12.2020

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಈ ಕಾಮಗಾರಿಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಮತ್ತು ಕೈಗೆತ್ತಿಕೊಂಡ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಎಷ್ಟು ಅಪೂರ್ಣಗೊಂಡಿವೆ; (ಸಂಪೂರ್ಣ ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರಗಳನ್ನು **ಅನುಬಂಧ-01** ರಲ್ಲಿ ಲಗತ್ತಿಸಲಾಗಿದೆ.
ಆ.	ಇನ್ನೂ ಕೆಲವು ಕಾಮಗಾರಿಗಳು ಪೂರ್ಣಗೊಳ್ಳದೆ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಾರಣವೇನು;	ಇನ್ನೂ ಕೆಲವು ಕಾಮಗಾರಿಗಳು ಪೂರ್ಣಗೊಳ್ಳದೆ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ವಿಭಾಗ, ಬೀದರ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿ ಇರುವ ಕಾಮಗಾರಿಗಳು ಸೂಕ್ತ ಸ್ಥಳ ಅಂತಿಮಗೊಳ್ಳದಿರುವುದರಿಂದ ಹಾಗೂ ಜಲಮೂಲಗಳು ವಿಫಲ ಹೊಂದಿರುವುದರಿಂದ ಪೂರ್ಣಗೊಳ್ಳಲು ವಿಳಂಬವಾಗಿರುತ್ತವೆ.
ಇ.	ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ.	ಎಲ್ಲಾ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.

ಸಂ:ಗ್ರಾಕುನೀ&ನೈಇ 104 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-01

ಕ್ರ. ಸಂ.	ವರ್ಷ	ಒಟ್ಟು ಕಾಮಗಾರಿಗಳ	ಸಂಖ್ಯೆ	ಒಟ್ಟು ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಷರಾ
1	2017-18	ಮುಂದುರೆದ ಕಾಮಗಾರಿಗಳು	1148	5311.54	464	691	
		ಹೊಸ ಕಾಮಗಾರಿಗಳು	7				
		ಒಟ್ಟು	**1155**				
2	2018-19	ಮುಂದುರೆದ ಕಾಮಗಾರಿಗಳು	691	6877.79	562	337	
		ಹೊಸ ಕಾಮಗಾರಿಗಳು	208				
		ಒಟ್ಟು	**899**				
3	2019-20	ಮುಂದುರೆದ ಕಾಮಗಾರಿಗಳು	337	5060.39	191	353	ಪ್ರಸ್ತುತ್ತ ಸಾಲಿನಲ್ಲಿ (2020-21) 353 ಕಾಮಗಾರಿಗಳ ಪೈಕಿ 232 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ 36 ಶುದ್ಧ ಕುಡಿಯುವ ನೀರಿನ ಘಟಕಗಳ ಕಾಮಗಾರಿಗಳನ್ನು ಕೈಬಿಡಲಾಗಿದೆ.
		ಹೊಸ ಕಾಮಗಾರಿಗಳು	207				
		ಒಟ್ಟು	**544**				

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 505

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಮನಗೂಳಿ ಬಸ್ ನಿಲ್ದಾಣ ನವೀಕರಣ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು
ಆ.	ಹಾಗಿದ್ದಲ್ಲಿ, ಈ ಬಸ್ ನಿಲ್ದಾಣ ನವೀಕರಣ ಕೈಗೊಳ್ಳಲು ಯಾವ ಕ್ರಮ ಕೈಗೊಳ್ಳಲಾಗಿದೆ;	ಕೋವಿಡ್-19ರ ಹಿನ್ನೆಲೆಯಲ್ಲಿ ಹೊಸ ಕಾಮಗಾರಿಗಳನ್ನು ಪ್ರಸ್ತಾಪಿಸದಿರಲು ನಿರ್ದೇಶನ ನೀಡಲಾಗಿರುವುದರಿಂದ, ಮನಗೂಳಿ ಬಸ್ ನಿಲ್ದಾಣ ನವೀಕರಣಗೊಳಿಸುವ ಪ್ರಸ್ತಾವನೆಯನ್ನು 2021-22ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಪರಿಗಣಿಸಲು ಕ್ರಮ ಕೈಗೊಳ್ಳಲಾಗುವುದು.
ಇ.	ಸದರಿ ನವೀಕರಣ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು?	ಸದರಿ ನವೀಕರಣ ಕಾಮಗಾರಿಗೆ ಸುಮಾರು ರೂ.70.00 ಲಕ್ಷಗಳಷ್ಟು ಅಂದಾಜು ಮೊತ್ತ ತಗಲುವ ಸಾಧ್ಯತೆಯಿರುತ್ತದೆ.

ಸಂಖ್ಯೆ: ಟಿಡಿ 224 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: : 624
ಉತ್ತರ ದಿನಾಂಕ : 09.12.2020

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ಕೊಪ್ಪಳ ಜಿಲ್ಲೆಯಲ್ಲಿ ಇಲಾಖೆಯಿಂದ ನಿರ್ವಹಿಸಲ್ಪಡುವ ಶುದ್ಧ ಕುಡಿಯುವ ನೀರಿನ ಒಟ್ಟು ಘಟಕಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)</td><td>ಕೊಪ್ಪಳ ಜಿಲ್ಲೆಯಲ್ಲಿ ಇಲಾಖೆಯಿಂದ ನಿರ್ವಹಿಸಲ್ಪಡುವ ಶುದ್ಧ ಕುಡಿಯುವ ನೀರಿನ ಒಟ್ಟು ಘಟಕಗಳ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ಇಲಾಖೆಯಿಂದ ನಿರ್ವಹಿಸಲ್ಪಡುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ</th></tr>
<tr><td>1</td><td>ಕೊಪ್ಪಳ</td><td>177</td></tr>
<tr><td>2</td><td>ಗಂಗಾವತಿ</td><td>188</td></tr>
<tr><td>3</td><td>ಕುಷ್ಟಗಿ</td><td>179</td></tr>
<tr><td>4</td><td>ಯಲಬುರ್ಗಾ</td><td>166</td></tr>
<tr><td></td><td>ಒಟ್ಟು</td><td>710</td></tr>
</table></td></tr>
<tr><td>ಆ.</td><td>ಸದರಿ ಘಟಕಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆ;</td><td>ಕೊಪ್ಪಳ ಜಿಲ್ಲೆಗೆ ಒಟ್ಟು 710 ಘಟಕಗಳು ಅನುಮೋದನೆಯಾಗಿದ್ದು, 666 ಘಟಕಗಳನ್ನು ಅನುಷ್ಠಾನಗೊಳಿಸಲಾಗಿದೆ, ಉಳಿದ 44 ಘಟಕಗಳ ಅನುಷ್ಠಾನ ಪ್ರಗತಿಯಲ್ಲಿರುತ್ತದೆ. ಅನುಷ್ಠಾನಗೊಳಿಸಲಾದ 666 ಘಟಕಗಳ ಪೈಕಿ 584 ಘಟಕಗಳು ಕಾರ್ಯನಿರ್ವಹಿಸುತ್ತಿವೆ, ಉಳಿದ 82 ಘಟಕಗಳು ತಾತ್ಕಾಲಿಕವಾಗಿ ಜಲಮೂಲದ ಕೊರತೆಯಿಂದ, ವಿದ್ಯುತ್ ಕೊರತೆಯಿಂದ, ಹಾಗೂ ಇತರೆ ಕಾರಣಗಳಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿಲ್ಲ. ಸದರಿ ಘಟಕಗಳನ್ನು ಕಾರ್ಯರೂಪಕ್ಕೆ ತರಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಇ.</td><td>ಘಟಕಗಳ ದುರಸ್ತಿಗಾಗಿ ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನವೆಷ್ಟು;</td><td rowspan="2">ಘಟಕಗಳ ದುರಸ್ತಿಗಾಗಿ ಯಾವುದೇ ಪ್ರತ್ಯೇಕವಾದ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದರೆ SDP ಹಾಗೂ CAP ಅಡಿಯಲ್ಲಿ ಹಂಚಿಕೆಯಾದ ಅನುದಾನದಡಿ ದುರಸ್ತಿ ಕಾಮಗಾರಿಗಳನ್ನು ಪರಿಗಣಿಸಿ ದುರಸ್ತಿಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಈ.</td><td>ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯೇನಾದರೂ ಸರ್ಕಾರಕ್ಕೆ ಬಂದಿದೆಯೇ; ಈ ಕುರಿತು ಸರಕಾರ ಕೈಗೊಂಡ ಕ್ರಮಗಳೇನು ?</td></tr>
</table>

ಸಂ:ಗ್ರಾಕುನೀ&ನೈಇ 100 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 659
ಸದಸ್ಯರ ಹೆಸರು : ಶ್ರೀ ನಂಜೇಗೌಡ ಕೆ.ವೈ. (ಮಾಲೂರು)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳನ್ನು ಹೈಟೆಕ್ ನಿಲ್ದಾಣಗಳನ್ನಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;	ಕ.ರಾ.ರ.ಸಾ.ನಿಗಮ ಮತ್ತು ಬೆಂ.ಮ.ಸಾ.ಸಂಸ್ಥೆಗೆ ಸಂಬಂಧಿಸಿದಂತೆ ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕದಿಂದಾಗಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ. ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳನ್ನು, ಸಾರಿಗೆ ಅವಶ್ಯಕತೆ, ನಿವೇಶನ ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ಹೈಟೆಕ್ ನಿಲ್ದಾಣಗಳನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು. ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಕುಷ್ಟಗಿ ಹಾಗೂ ಹೂವಿನಹಡಗಲಿ ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳನ್ನು ಮರು ನಿರ್ಮಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ
ಆ.	ಮಾಲೂರು ತಾಲ್ಲೂಕು ಕೇಂದ್ರದಲ್ಲಿರುವ ಬಸ್ ನಿಲ್ದಾಣ ತುಂಬಾ ಹಳೆಯದಾಗಿದ್ದು, ತಾಲ್ಲೂಕಿನ ಎರಡು ಕಡೆ ಕೈಗಾರಿಗಾ ಪ್ರದೇಶಗಳು ಅಭಿವೃದ್ಧಿ ಯಾಗುತ್ತಿರುವುದರಿಂದ ಇಲ್ಲಿನ ಬಸ್ ನಿಲ್ದಾಣವನ್ನು ಹೈಟೆಕ್ ಬಸ್ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರದಲ್ಲಿದೆಯೇ;	ಮಾಲೂರಿನಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣ ಇರುವುದಿಲ್ಲ. ಮಾಲೂರಿನಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣ ನಿರ್ಮಿಸಲು ಪ್ರಸ್ತುತ ನಿವೇಶನ ಲಭ್ಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿವೇಶನವು ದೊರೆತಲ್ಲಿ ಕ.ರಾ.ರ.ಸಾ.ನಿಗಮವು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16 ದಿನಾಂಕ: 06.06.2015ರ ಪ್ರಕಾರ, ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.
ಇ.	ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು?	

ಸಂಖ್ಯೆ: ಟಿಡಿ 236 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: : 410

ಉತ್ತರ ದಿನಾಂಕ : 09.12.2020

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕುಷ್ಟಗಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕುಷ್ಟಗಿ ತಾಲ್ಲೂಕಿನ 36 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ.	ಸದರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸ್ಥಳೀಯ ಜಿಲ್ಲಾಡಳಿತದಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?	ಬಂದಿದೆ.
ಇ.	ಹಾಗಿದ್ದಲ್ಲಿ, ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?	ಕುಷ್ಟಗಿ ತಾಲ್ಲೂಕಿನ ಎಲ್ಲಾ ಜನವಸತಿಗಳಿಗೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು DBOT ಯೋಜನೆಯು ಅನುಮೋದನೆಯಾಗಿದ್ದು, ಈಗಾಗಲೇ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯು ಪೂರ್ಣಗೊಂಡ ನಂತರ ತಾಲ್ಲೂಕಿನ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಲಾಗುವುದು. ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ 36 ಗ್ರಾಮಗಳಿಗೆ 56 ಖಾಸಗಿ ಕೊಳವೆ ಬಾವಿಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ನೀರನ್ನು ಪೂರೈಸಲಾಗುತ್ತಿದೆ. ಮುಂದುವರೆದು, CAP ಅಡಿಯಲ್ಲಿ ಕುಷ್ಟಗಿ ತಾಲ್ಲೂಕಿಗೆ ರೂ.50.00ಲಕ್ಷಗಳು ಹಂಚಿಕೆಯಾಗಿದ್ದು, ಈಗಾಗಲೇ ರೂ.35.00ಲಕ್ಷಗಳ 67 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಇವುಗಳ ಪೈಕಿ ಕೊಳವೆಬಾವಿಗಳ ಫ್ಲಶಿಂಗ್/ರೀಡ್ರಿಲ್ಲಿಂಗ್ ಮತ್ತು ಪೈಪ್‌ಲೈನ್ ವಿಸ್ತರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಉಳಿದ ರೂ.15.00ಲಕ್ಷಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿದ್ದು, ಅನುಮೋದನೆಯ ಹಂತದಲ್ಲಿರುತ್ತದೆ.
ಈ.	ಜಿಲ್ಲಾಡಳಿತ ಕ್ರಮದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯು ಬಂದಿದೆಯೇ; ಬೋರ್‌ವೆಲ್‌ಗಳನ್ನು ಕೊರೆಯಲು ಸರ್ಕಾರವು ಅನುಮತಿಯನ್ನು ನೀಡುವುದೇ?	ಬಂದಿದೆ. ಅವಶ್ಯಕತೆಗೆ ಅನುಗುಣವಾಗಿ ಬೋರ್‌ವೆಲ್ ಕೊರೆಯಿಸಲು ಕ್ರಮವಹಿಸಲಾಗುವುದು.

ಸಂ:ಗ್ರಾಕುನೀ&ನೈಇ 91 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	691
ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ. ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	:	09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿ ಕೇಂದ್ರವನ್ನು ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ.	ಚೇಳೂರು ತಾಲ್ಲೂಕು ಕೇಂದ್ರದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಹಂತದಲ್ಲಿದೆ;	ಹೌದು, ಚೇಳೂರಿನಲ್ಲಿ ಕ.ರಾ.ರ.ಸಾ.ನಿಗಮ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆಯಿದ್ದು, ಸೂಕ್ತ ನಿವೇಶನವನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.
ಇ.	ಇದಕ್ಕಾಗಿ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆಯೇ;	
ಈ.	ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಗುವುದು?	ಪ್ರಸ್ತುತ ಯಾವುದೇ ಹಣ ಮಂಜೂರು ಮಾಡಲಾಗಿರುವುದಿಲ್ಲ. ಚೇಳೂರು ಗ್ರಾಮ ಪಂಚಾಯಿತಿಯ ನಿವೇಶನ ನಿಗಮದ ಸ್ವಾಧೀನಕ್ಕೆ ಬಂದ ನಂತರ ಸಂಸ್ಥೆಯು ಬಸ್ ನಿಲ್ದಾಣ ಮತ್ತು ಬಸ್ ಘಟಕ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16 ದಿನಾಂಕ: 06.06.2015ರ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 241 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 649
ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರಸಂ	ಪ್ರಶ್ನೆ	ಉತ್ತರ
ಅ.	ಕಡೂರು ಕೆ.ಎಸ್.ಆರ್.ಟಿ.ಸಿ ಡಿಪೋನಲ್ಲಿ ಚಾಲ್ತಿಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು;	ಕ.ರಾ.ರ.ಸಾ.ನಿಗಮದ ಚಿಕ್ಕಮಗಳೂರು ವಿಭಾಗದ ಕಡೂರು ಡಿಪೋದಲ್ಲಿ ಒಟ್ಟು 92 ಬಸ್‌ಗಳು ಚಾಲ್ತಿಯಲ್ಲಿರುತ್ತವೆ.
ಆ.	ಹೊಸದಾಗಿ ಬಸ್‌ಗಳನ್ನು ಹಾಗೂ ಬಸ್ ಮಾರ್ಗಗಳನ್ನು ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; (ಮಾಹಿತಿ ನೀಡುವುದು)	ಕಡೂರು ಘಟಕದಲ್ಲಿ ಪ್ರಸ್ತುತ 70 ಅನುಸೂಚಿಗಳನ್ನು 92 ವಾಹನ ಬಲದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, 22 ಹೆಚ್ಚುವರಿ (31%) ವಾಹನಗಳಿರುತ್ತವೆ. ಆದ್ದರಿಂದ, ಪ್ರಸ್ತುತ ಹೊಸ ವಾಹನಗಳನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ. ಕಡೂರು ಘಟಕದಲ್ಲಿ ಪ್ರತಿನಿತ್ಯ 89 ಅನುಸೂಚಿಗಳಿಂದ (ಬಸ್ಸುಗಳು) 37,570 ಕಿ.ಮೀ. ಗಳನ್ನು ಕ್ರಮಿಸಲಾಗುತ್ತಿತ್ತು. ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳು/ ವಿದ್ಯಾ ಸಂಸ್ಥೆಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸುತ್ತಿದ್ದು, ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಯಾವುದೇ ಹೊಸ ಮಾರ್ಗಗಳನ್ನು ಕಾರ್ಯಾಚರಣೆ ಮಾಡುವ ಪ್ರಸ್ತಾವನೆ ಇರುವುದಿಲ್ಲ.
ಇ.	ಕಡೂರು ತಾಲ್ಲೂಕು ಪಂಚನಹಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ ಮಿನಿ ಡಿಪೋ ನಿರ್ಮಾಣ ಮಾಡುವ ಪ್ರಸ್ತಾವ ಇದೆಯೇ; ಇದ್ದಲ್ಲಿ, ಯಾವಾಗ ಮಾಡಲಾಗುವುದು? (ಮಾಹಿತಿ ನೀಡುವುದು)	ಕ.ರಾ.ರ.ಸಾ.ನಿಗಮದಿಂದ ಪಂಚನಹಳ್ಳಿಯಲ್ಲಿ ಬಸ್ ಘಟಕ ನಿರ್ಮಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.

ಸಂಖ್ಯೆ: ಟಿಡಿ 234 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 708
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಪ್ರಸ್ತುತ ಬಿ.ಎಂ.ಟಿ.ಸಿ. ಬಸ್‌ಗಳ ಸೇವಾ ಸೌಕರ್ಯ/ ಸೌಲಭ್ಯಗಳ ಸುವ್ಯವಸ್ಥೆ ಕುರಿತು ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ಕೋವಿಡ್-19ರ ದುಷ್ಪರಿಣಾಮದಿಂದಾದ ಮಹಾನಗರ ಸಂಚಾರ ವ್ಯವಸ್ಥೆಯಲ್ಲಿನ ಏರುಪೇರುಗಳಿಂದ ಉಂಟಾದ ಆರ್ಥಿಕ ಹಿನ್ನಡೆಗಾಗಿ ಸರ್ಕಾರ ಅನುಸರಿಸಿದ ಕ್ರಮಗಳೇನು; ಬಿ.ಎಂ.ಟಿ.ಸಿ.ಸಂಸ್ಥೆಗೆ ವರ್ಷದಲ್ಲಿ ಉಂಟಾದ ಆರ್ಥಿಕ ನಷ್ಟದ ಮೊತ್ತ ಎಷ್ಟು;	COVID-19 ಲಾಕ್‌ಡೌನ್ ಸಡಿಲಿಕೆ ನಂತರದಲ್ಲಿ ಸಮರ್ಪಕ ಹಾಗೂ ಸುರಕ್ಷಿತ ಸಾರಿಗೆ ಸೇವೆಯನ್ನು ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸುವ ಹಾಗೂ ಕೋರೊನಾ ವೈರಾಣು ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಬೆಂ.ಮ.ಸಾ.ಸಂಸ್ಥೆಯು ಸಂಚಾರ ದಟ್ಟಣೆಗನುಗುಣವಾಗಿ ಅನುಸೂಚಿಗಳನ್ನು ಕಾರ್ಯಾಚರಿಸುತ್ತಿದೆ. ಪ್ರಸ್ತುತ ಸಂಸ್ಥೆಯಿಂದ ನವೆಂಬರ್-2020ರ ಮಾಹೆಯಲ್ಲಿ ಸರಾಸರಿ 4,555 ಸಾಮಾನ್ಯ ಮತ್ತು 65 ಹವಾನಿಯಂತ್ರಿತ, ಒಟ್ಟಾರೆ 4,620 ಸಾರಿಗೆಗಳನ್ನು ಆಚರಣೆಗೊಳಿಸಲಾಗಿರುತ್ತದೆ. ಬೆಂ.ಮ.ಸಾ.ಸಂಸ್ಥೆಯಲ್ಲಿ ಸಾರಿಗೆಗಳ ಸೌಕರ್ಯ/ ಸೌಲಭ್ಯಗಳ ಕುರಿತು ಮತ್ತು ಕೋವಿಡ್-19ರ ದುಷ್ಪರಿಣಾಮದಿಂದಾದ ಮಹಾನಗರ ಸಂಚಾರ ವ್ಯವಸ್ಥೆಯಲ್ಲಿನ ಏರುಪೇರುಗಳಿಂದ ಉಂಟಾದ ಆರ್ಥಿಕ ಹಿನ್ನಡೆ ತಡೆಗಟ್ಟಲು ಸಂಸ್ಥೆಯಿಂದ ಕೈಗೊಂಡ ಕ್ರಮಗಳು ಕೆಳಕಂಡಂತಿವೆ: ➢ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ / ಸೇರ್ಪಡೆಗೊಳಿಸಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ➢ ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ / ವಿಸ್ತರಣೆಯನ್ನು ಮಾಡಲಾಗುತ್ತಿದೆ. ➢ ಸಂಚಾರ ದಟ್ಟಣೆ ಸಮಯದಲ್ಲಿ ಹೆಚ್ಚು ಸುತ್ತುವಳಿಗಳನ್ನು ಅಳವಡಿಸಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ➢ ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile connectivity) ಮೆಟ್ರೋ ಫೀಡರ್ ಸೇವೆಗಳನ್ನು ಒದಗಿಸಲಾಗುತ್ತಿದೆ. ➢ ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವೆ ನಗದು ವ್ಯವಹಾರವನ್ನು ಕಡಿಮೆಗೊಳಿಸುವ ಹಾಗೂ ಚಿಲ್ಲರೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಪ್ರಯಾಣ ದರ ರೂ.5/- ರ ಗುಣಕದಲ್ಲಿ ನಿಗದಿಪಡಿಸಿ ಪುನರ್‌ರಚಿತ ಪ್ರಯಾಣದರಗಳನ್ನು ಆಕರಿಸಲಾಗುತ್ತಿದೆ. ➢ ನಗದು ವ್ಯವಹಾರವನ್ನು ಕಡಿಮೆಗೊಳಿಸಲು ಮತ್ತು ಸುಲಭವಾಗಿ ಹಣ ಸಂದಾಯಗೊಳಿಸಲು ಡಿಜಿಟಲ್ ಟಿಕೇಟಿಂಗ್ (QR code based) ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ➢ ಮಾಸಿಕ ಮತ್ತು ದಿನದ ಪಾಸುಗಳ ಜೊತೆಗೆ ವಾರದ ಪಾಸುಗಳನ್ನು ಪರಿಚಯಿಸಲಾಗಿರುತ್ತದೆ. ➢ ಸಂಸ್ಥೆಯ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳಿಗೆ ಹಾಗೂ ಪ್ರಯಾಣಿಕರಿಗೆ ಸಾಂಕ್ರಾಮಿಕ ರೋಗ ಹರಡದಂತೆ ಹಾಗೂ ಪ್ರಯಾಣಿಕರ ಸುರಕ್ಷತೆಯ ನಿಟ್ಟಿನಲ್ಲಿ ಬಸ್ಸುಗಳಲ್ಲಿ ಶುಚಿತ್ವವನ್ನು ಕಾಪಾಡಲು, ಸೋಂಕು ನಿವಾರಣಾ ಔಷಧಿಗಳನ್ನು ಸಿಂಪಡಿಸಿ ಶುಚಿಗೊಳಿಸಲಾಗುತ್ತಿದೆ.

...2

➢ ಚಾಲನಾ ಸಿಬ್ಬಂದಿಗಳಿಂದ ಕೋವಿಡ್-19 ಸಾಂಕ್ರಾಮಿಕ ರೋಗ ಹರಡದಂತೆ ತಡೆಗಟ್ಟಲು ಅವಶ್ಯವಿರುವ ಮುಖಗವಸು ಮತ್ತು ಸ್ಯಾನಿಟೈಸರ್‌ಗಳನ್ನು ಸರಬರಾಜುಗೊಳಿಸಲಾಗಿರುತ್ತದೆ. ಕರ್ತವ್ಯದ ಅವಧಿಯಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸನ್ನು ಧರಿಸುವಂತೆ ಹಾಗೂ ಸ್ಯಾನಿಟೈಸರ್ ಬಳಸಿ ಕೈಗಳ ಶುಚಿತ್ವವನ್ನು ಕಾಪಾಡಿಕೊಳ್ಳುವಂತೆ ತಿಳಿಸಲಾಗಿರುತ್ತದೆ.

➢ ಸಾರ್ವಜನಿಕ ಪ್ರಯಾಣಿಕರೊಂದಿಗೆ ಅಂತರ ಕಾಪಾಡಿಕೊಳ್ಳಲು, ಚಾಲಕರಿಗೆ ಪ್ರತ್ಯೇಕ ಕ್ಯಾಬೀನ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

ಕೋವಿಡ್-19 ನಿಂದ ಉಂಟಾದ ಆರ್ಥಿಕ ನಷ್ಟದ ಹಿನ್ನೆಲೆಯಲ್ಲಿ ವೇತನ ಪಾವತಿಸುವ ಸಲುವಾಗಿ ಸರ್ಕಾರವು ಸಂಸ್ಥೆಗೆ ಏಪ್ರಿಲ್-2020 ಮತ್ತು ಮೇ-2020ರ ವೇತನದ ಪೂರ್ಣ ಬಾಬ್ತನ್ನು ಹಾಗೂ ಜೂನ್-2020 ರಿಂದ ಸೆಪ್ಟೆಂಬರ್-2020ರ ಮಾಹೆವರೆಗೆ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಶೇಕಡ 75ರಷ್ಟು ಮತ್ತು ಅಕ್ಟೋಬರ್-2020 ಮತ್ತು ನವೆಂಬರ್-2020ರ ಮಾಹೆಯ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಶೇಕಡ 50ರಷ್ಟು ವಿಶೇಷ ಅನುದಾನವನ್ನು ನೀಡಿದೆ. ವಿವರ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)

ಮಾಹೆ	ಅನುದಾನ
ಏಪ್ರಿಲ್ – 2020	98.62
ಮೇ – 2020	98.62
ಜೂನ್ – 2020	60.50
ಜುಲೈ – 2020	60.50
ಆಗಸ್ಟ್ – 2020	60.50
ಸೆಪ್ಟೆಂಬರ್ – 2020	60.50
ಅಕ್ಟೋಬರ್–2020	40.31
ನವೆಂಬರ್–2020	40.31
ಒಟ್ಟು	**519.86**

ಸಂಸ್ಥೆಗೆ ಏಪ್ರಿಲ್-2020 ರಿಂದ ನವಂಬರ್-2020ರವರೆಗೆ ಅಂದಾಜು ಒಟ್ಟು ರೂ.970.00 ಕೋಟಿಗಳ ನಷ್ಟ ಉಂಟಾಗಿರುತ್ತದೆ

ಆ. ಕೋವಿಡ್-19ನ್ನು ಗಣನೆಯಲ್ಲಿಟ್ಟುಕೊಂಡು ಸಂಚಾರ ಸುವ್ಯವಸ್ಥೆಗೆ ಅನುವು ಮಾಡಿಕೊಡುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟು ಪ್ರಯಾಣಿಕರಿಗೆ ವಿಧಿಸಿರುವ ನಿಬಂಧನೆಗಳು ಮತ್ತು ಅವುಗಳ ಅನುಸರಣೆ ಕುರಿತಾದ ವಿವರಗಳು ಯಾವುವು; ಬಸ್‌ಗಳಲ್ಲಿ ಮುಂಜಾಗರೂಕತೆಗಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸುವಲ್ಲಿ ಇಲಾಖೆಯಿಂದ ತೆಗೆದುಕೊಂಡಿರುವ ಪರಿಣಾಮಕಾರಿ ಕ್ರಮಗಳು ಯಾವುವು;

ಸಾರ್ವಜನಿಕ ಪ್ರಯಾಣಿಕರು ಬಸ್ಸುಗಳಲ್ಲಿ ಪ್ರಯಾಣಿಸುವಾಗ COVID-19 ಸೋಂಕು ಹರಡುವುದನ್ನು ತಡೆಗಟ್ಟುವ ದೃಷ್ಟಿಯಿಂದ ಸಾರ್ವಜನಿಕ ಪ್ರಯಾಣಿಕರಿಗೆ ಪ್ರಯಾಣಿಸಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ತಿಳಿಸಲಾಗಿರುತ್ತದೆ:

➢ ಪ್ರಯಾಣಿಕರು ಪ್ರಯಾಣಿಸುವಾಗ ಮುಖಗವಸು ಧರಿಸುವುದು ಕಡ್ಡಾಯಗೊಳಿಸಲಾಗಿರುತ್ತದೆ.

➢ ಸಾರ್ವಜನಿಕ ಬಸ್ಸುಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡುವ ಸಂಬಂಧ, ಬಸ್ಸುಗಳಲ್ಲಿ ಲಭ್ಯವಿರುವ ಆಸನಗಳ ಸಂಖ್ಯೆಯಷ್ಟು ಪ್ರಯಾಣಿಕರನ್ನು ಮಾತ್ರ ಅನುಮತಿಸಲಾಗಿರುತ್ತದೆ.

- ಸಂಸ್ಥೆಯ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರು, ನಿರ್ವಾಹಕರಿಗೆ ಹಾಗೂ ಪ್ರಯಾಣಿಕರಿಗೆ ಸಾಂಕ್ರಾಮಿಕ ರೋಗ ಹರಡದಂತೆ ಬಸ್ಸುಗಳಲ್ಲಿ ಶುಚಿತ್ವವನ್ನು ಕಾಪಾಡಲು, ಸೋಂಕು ನಿವಾರಣಾ ಔಷಧಿಗಳನ್ನು ಸಿಂಪಡಿಸಿ ಶುಚಿಗೊಳಿಸಲಾಗುತ್ತಿದೆ.
- ಸಿಬ್ಬಂದಿಗಳು ಪ್ರತಿದಿನ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ದೇಹದ ಉಷ್ಣಾಂಶವನ್ನು (temperature) ಮತ್ತು ಆಕ್ಸಿಜನ್ ಮಟ್ಟವನ್ನು (Oximeter) ಪರೀಕ್ಷಿಸಿ, ನಂತರ ಕರ್ತವ್ಯಕ್ಕೆ ನಿಯೋಜಿಸಲಾಗುವುದು.
- ಪ್ರಯಾಣಿಕರ ಸುರಕ್ಷತೆ ಹಾಗೂ ಚಾಲನಾ ಸಿಬ್ಬಂದಿಗಳ ಆರೋಗ್ಯವನ್ನು ಕಾಪಾಡುವ ನಿಟ್ಟಿನಲಿ ಕರ್ತವ್ಯದ ಅವಧಿಯಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸನ್ನು ಧರಿಸುವಂತೆ ತಿಳಿಸಲಾಗಿರುತ್ತದೆ ಹಾಗೂ ಕೈಗಳ ಶುಚಿತ್ವವನ್ನು ಕಾಪಾಡಿಕೊಳ್ಳಲು ಸ್ಯಾನಿಟೈಸರ್‌ನ್ನು ವಿತರಿಸಿ ಬಳಸುವಂತೆ ತಿಳಿಸಲಾಗಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರು ಚಾಲಕರೊಂದಿಗೆ ಅಂತರ ಕಾಪಾಡಿಕೊಳ್ಳಲು, ಬಸ್ಸಿನಲ್ಲಿ ಚಾಲಕರಿಗೆ ಪ್ರತ್ಯೇಕ ಕ್ಯಾಬೀನ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.
- ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವೆ ನಗದು ವ್ಯವಹಾರವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಪ್ರಯಾಣ ದರ ರೂ.5/-ರ ಗುಣಕದಲ್ಲಿ ನಿಗದಿಪಡಿಸಿ ಪುನರ್‌ರಚಿತ ಪ್ರಯಾಣದರಗಳನ್ನು ಆಕರಿಸಲಾಗುತ್ತಿದೆ ಹಾಗೂ ಡಿಜಿಟಲ್ ಟಿಕೇಟಿಂಗ್ (QR code based) ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

ಸಂಸ್ಥೆಯ ಬಸ್ ನಿಲ್ದಾಣ, ಟಿಟಿಎಂಸಿ, ಕಾರ್ಯಗಾರ, ಘಟಕ, ತರಬೇತಿ ಕೇಂದ್ರ ಮತ್ತು ಕೇಂದ್ರ ಕಛೇರಿ ಹಾಗೂ ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಸಾರ್ವಜನಿಕರು, ಪ್ರಯಾಣಿಕರು ಮತ್ತು ನೌಕರರು:

1. ಪಾನ್ ಮತ್ತು ಇನ್ನಿತರೆ ತಂಬಾಕು ಬಳಸುವುದನ್ನು ಹಾಗೂ ಎಲ್ಲೆಂದರಲ್ಲಿ ಉಗುಳುವುದನ್ನು ನಿಷೇಧಿಸಲಾಗಿದೆ.
2. ಧೂಮಪಾನ ಮಾಡುವುದನ್ನು ನಿಷೇಧಿಸಲಾಗಿದೆ.
3. ಮಾಸ್ಕ್ ಧರಿಸದೇ ಓಡಾಡುವುದನ್ನು ನಿಷೇಧಿಸಲಾಗಿದೆ.
4. ಮಾಸ್ಕ್ ಧರಿಸದೇ ಬಸ್‌ನಲ್ಲಿ ಪ್ರಯಾಣಿಸುವುದನ್ನು ನಿಷೇಧಿಸಲಾಗಿದೆ.
5. ಉಪಯೋಗಿಸಿದ ಮಾಸ್ಕ್ ಮತ್ತು ಗ್ಲೌಸ್‌ಗಳನ್ನು ಎಲ್ಲೆಂದರಲ್ಲಿ ಹಾಕುವುದನ್ನು ನಿಷೇಧಿಸಲಾಗಿದೆ.

ಮೇಲಿನಂತೆ ನಿಷೇಧಿಲಾಗಿರುವ ಚಟುವಟಿಕೆಗಳ ಕುರಿತಂತೆ ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಫಲಕಗಳನ್ನು ಪ್ರದರ್ಶಿಸಲಾಗಿದೆ.

ಸಂಸ್ಥೆಯ ಬಸ್ ನಿಲ್ದಾಣ, ಟಿಟಿಎಂಸಿ, ಕಾರ್ಯಗಾರ, ಘಟಕ, ತರಬೇತಿ ಕೇಂದ್ರ ಮತ್ತು ಕೇಂದ್ರ ಕಛೇರಿ ಹಾಗೂ ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಸಾರ್ವಜನಿಕರು/ ಸಂದರ್ಶನಗಾರರು ಹಾಗೂ ಮಾಸ್ಕ್ ಧರಿಸದೇ ಬಸ್‌ನಲ್ಲಿ ಪ್ರಯಾಣಿಸುವವರಿಗೆ ಪುರಸಭೆ ನಿಗಮ ಪ್ರದೇಶಗಳಲ್ಲಿ ರೂ.200/- ಹಾಗೂ ಪುರಸಭೆ ನಿಗಮ ಪ್ರದೇಶವನ್ನು ಹೊರತು ಪಡಿಸಿದ ಪ್ರದೇಶಗಳಲ್ಲಿ ರೂ.100/-ದಂಡವನ್ನು ವಿಧಿಸಲು ಆದೇಶಿಸಲಾಗಿದೆ.

ಇ.	ಮಹಾನಗರ ಸಾರಿಗೆ ಸುವ್ಯವಸ್ಥೆಯನ್ನು ಇನ್ನಷ್ಟು ಅನುಕೂಲಕರವಾಗಿ ಮಾದರಿ ರೀತ್ಯಾ ಅಭಿವೃದ್ಧಿ ಪಡಿಸುವಲ್ಲಿ ಇಲಾಖೆಯವರ ಮುಂದಿರುವ ಪ್ರಸ್ತಾವನೆಗಳು ಯಾವುವು?	ಉಪ ಪ್ರಶ್ನೆ "ಅ"ರಲ್ಲಿ ಉತ್ತಿರಿಸಲಾಗಿದೆ.

ಸಂಖ್ಯೆ: ಟಿಡಿ 245 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	705
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಹೆಚ್. ಕೆ. (ಸಕಲೇಶಪುರ)
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	:	09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಹಾಸನ ಜಿಲ್ಲೆಯ ತಾಲ್ಲೂಕುಗಳಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಪ್ರತಿ ದಿನ ಸಾವಿರಾರು ಹೆಣ್ಣು ಮಕ್ಕಳು ಹಾಸನ ನಗರದಲ್ಲಿರುವ ಗಾರ್ಮೆಂಟ್ ಹಾಗೂ ಇತರೆ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸಲು ಬಂದು ಹೋಗುತ್ತಿದ್ದು, ಅವರಿಗೆ ಸರ್ಕಾರದ ಸಾರಿಗೆ ಬಸ್ ವ್ಯವಸ್ಥೆ ಇಲ್ಲದ ಕಾರಣ ಖಾಸಗಿ ಟೆಂಪೋ, ಆಟೋರಿಕ್ಷಾ ಹಾಗೂ ಇತರೆ ವಾಹನಗಳಲ್ಲಿ ಸಂಚರಿಸುತ್ತಿದ್ದು, ಸೂಕ್ತ ಸಂಚಾರ ಸುರಕ್ಷತೆ ಇಲ್ಲದ ಕಾರಣ ಹೆಣ್ಣು ಮಕ್ಕಳಿಗೆ ತೊಂದರೆಯಾಗುತ್ತಿರುವುದು ಹಾಗೂ ವಾಹನಗಳು ಅಪಘಾತಕ್ಕೀಡಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ನಗರವು ವಾಣಿಜ್ಯ ಕೇಂದ್ರವಾಗಿರುವುದರಿಂದ ಹಾಸನ ನಗರ ವ್ಯಾಪ್ತಿಯಲ್ಲಿ ಗಾರ್ಮೆಂಟ್ಸ್ ಮತ್ತು ಇತರೆ ಕಾರ್ಮಿಕರ ಅನುಕೂಲಕ್ಕಾಗಿ ಹಾಸನ ನಗರದ ದಾಸರಕೊಪ್ಪಲು-ಎಂ.ಸಿ.ಇ-ಸಾಲಗಾಮೆ ಗೇಟ್-ನಗರ ಸಾರಿಗೆ ಬಸ್ ನಿಲ್ದಾಣ-ಎನ್.ಆರ್.ವೃತ್ತ-ಹೊಸ ಬಸ್ ನಿಲ್ದಾಣ-ಚನ್ನಪಟ್ಟಣ-ಹೊಸಕೊಪ್ಪಲು-ಕೆ.ಐ.ಎ.ಡಿ.ಬಿ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಪ್ರಯಾಣಿಸುತ್ತಿರುವುದರಿಂದ 3 ಅನುಸೂಚಿಗಳಿಂದ 6 ಪ್ರತ್ಯೇಕ ಸುತ್ತುವಳಿಗಳು ಒಳಗೊಂಡಂತೆ ಹಾಸನ ನಗರದಲ್ಲಿ ಒಟ್ಟು 32 ಅನುಸೂಚಿಗಳಿಂದ 556 ಸುತ್ತುವಳಿಗಳ ನಗರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಅಲ್ಲದೆ ಹಾಸನ-ಹೊಳೆನರಸೀಪುರ ಮಾರ್ಗದಲ್ಲಿ ಕೆ.ಐ.ಎ.ಡಿ.ಬಿ ವೃತ್ತದ ಮಾರ್ಗವಾಗಿ ಪ್ರತಿ ನಿತ್ಯ 68 ಸುತ್ತುವಳಿಗಳನ್ನು ಕಾರ್ಯಾಚರಿಸಲಾಗುತ್ತಿದೆ. ಮುಂದುವರೆದು, ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರ ಮತ್ತುಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ 934 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳ ಅನುಕೂಲವನ್ನು ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಬರುವ ಸಾರ್ವಜನಿಕ ಪ್ರಯಾಣಿಕರು, ವಿದ್ಯಾರ್ಥಿಗಳು, ನೌಕರರು ಹಾಗೂ ರೈತರು ಪಡೆದುಕೊಳ್ಳುತ್ತಿದ್ದು, ಇದು ಅವಶ್ಯಕತೆಗೆ ಅನುಗುಣವಾಗಿದೆ. ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳು/ವಿದ್ಯಾಸಂಸ್ಥೆಗಳು ಪ್ರಾರಂಭವಾಗದೇ ಇರುವುದರಿಂದ ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

...2

ಆ.	ಹಾಲಿ ಖಾಸಗಿ ಗಾರ್ಮೆಂಟ್/ಕಾರ್ಖಾನೆ ಮಾಲೀಕರು ಶೇಕಡಾ 50 ಹಾಗೂ ಸಾರಿಗೆ ಇಲಾಖೆ ರಿಯಾಯಿತಿ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡಲಾಗಿರುವುದು ನಿಜವೇ;	2020-21 ನೇ ಸಾಲಿನ ಆಯವ್ಯಯದಲ್ಲಿ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಸುರಕ್ಷತೆ ಮತ್ತು ಭದ್ರತೆಯನ್ನು ಒದಗಿಸಲು ಹಾಗೂ ಆರ್ಥಿಕ ಸಹಾಯವನ್ನು ಮಾಡುವ ನಿಟ್ಟಿನಲ್ಲಿ ಒಂದು ಲಕ್ಷ ಮಹಿಳಾ ಕಾರ್ಮಿಕರಿಗೆ "ವನಿತಾ ಸಂಗಾತಿ" ಯೋಜನೆಯಡಿ ಮಾಸಿಕ ಬಸ್ ಪಾಸುಗಳನ್ನು ಕಾರ್ಖಾನೆಯ ಮಾಲೀಕರು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದೊಂದಿಗೆ ಒದಗಿಸಲು, ರೂ.25.00ಕೋಟಿ ರೂಪಾಯಿ ಮೊತ್ತದ ಅನುದಾನವನ್ನು ಘೋಷಿಸಲಾಗಿದೆ.
ಇ.	ಅದೇರೀತಿ ಹಾಸನ ಜಿಲ್ಲೆಯ ತಾಲ್ಲೂಕುಗಳು ಹಾಗೂ ಗ್ರಾಮೀಣ ಪ್ರದೇಶದಿಂದ ಗಾರ್ಮೆಂಟ್/ಕಾರ್ಖಾನೆಗಳಿಗೆ ಬರುವಂತಹ ಹೆಣ್ಣುಮಕ್ಕಳಿಗೆ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸುವ ಬಗ್ಗೆ ಹಾಗೂ ಸರ್ಕಾರ ಗ್ರಾಮೀಣ ಪ್ರದೇಶದ ಬಡ ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡುವ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?	ಹಾಸನ ಜಿಲ್ಲೆಯ ತಾಲ್ಲೂಕುಗಳು ಹಾಗೂ ಗ್ರಾಮೀಣ ಪ್ರದೇಶಗಳಿಂದ ಹಾಸನ ನಗರದ ಗಾರ್ಮೆಂಟ್/ಕಾರ್ಖಾನೆಗಳಿಗೆ ಬರುವಂತಹ ಹೆಣ್ಣುಮಕ್ಕಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಇದು ಅವಶ್ಯಕತೆಗೆ ಅನುಗುಣವಾಗಿದೆ. ಗಾರ್ಮೆಂಟ್/ಕಾರ್ಖಾನೆಗಳಿಗೆ ಬರುವಂತಹ ಗ್ರಾಮೀಣ ಪ್ರದೇಶದ ಬಡ ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡುವ ಬಗ್ಗೆ ಹಾಲಿ ರಿಯಾಯಿತಿ ಸಾರಿಗೆ ಸೌಲಭ್ಯ ಒದಗಿಸುವ ಪ್ರಸ್ತಾವನೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಇರುವುದಿಲ್ಲ.

ಸಂಖ್ಯೆ: ಟಿಡಿ 243 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 119

ಸದಸ್ಯರ ಹೆಸರು : ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಬೆಳಗಾವಿ ಜಿಲ್ಲೆ, ರಾಯಭಾಗ ಕೆ.ಎಸ್.ಆರ್.ಟಿ.ಸಿ. ಘಟಕದಿಂದ ರಾಯಭಾಗ-ಶಿರಡಿ ಮತ್ತು ರಾಯಭಾಗ-ಶ್ರೀಶೈಲ ಮಾರ್ಗಗಳಲ್ಲಿ ಹೊಸ ಬಸ್ ಸಂಚಾರ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಪ್ರಸ್ತಾವನೆ ಇರುತ್ತದೆ.
ಆ.	ಹಾಗಿದ್ದಲ್ಲಿ, ಈ ಮಾರ್ಗಗಳಲ್ಲಿ ಹೊಸ ವೋಲ್ವೋ ಬಸ್ ಸಂಚರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಮಾರ್ಗಗಳಲ್ಲಿ ಬಸ್‌ಗೆ ಬೇಡಿಕೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ಜಿಲ್ಲೆ, ರಾಯಭಾಗ ಕೆ.ಎಸ್.ಆರ್.ಟಿ.ಸಿ. ಘಟಕದಿಂದ ರಾಯಭಾಗ-ಶಿರಡಿ ಮತ್ತು ರಾಯಭಾಗ-ಶ್ರೀಶೈಲ ಮಾರ್ಗಗಳಲ್ಲಿ ಬಸ್‌ಗೆ ಬೇಡಿಕೆ ಇದ್ದರೂ ಸಹ ಸದರಿ ಮಾರ್ಗಗಳಿಗೆ ಅಂತರರಾಜ್ಯ ಪರವಾನಿಗೆ ಇರುವುದಿಲ್ಲವಾದ್ದರಿಂದ ಕಾರ್ಯಾಚರಣೆ ಸಾಧ್ಯವಾಗಿರುವುದಿಲ್ಲ.
ಇ.	ಹಾಗಿದ್ದಲ್ಲಿ, ಈ ಮಾರ್ಗಗಳಲ್ಲಿ ಹೊಸ ವೋಲ್ವೋ ಬಸ್ ಸಂಚಾರ ಮಾಡಲು ಸರ್ಕಾರ ಕ್ರಮ ಕೈಗೊಂಡು; ಸಾರ್ವಜನಿಕರು ಸುಗಮವಾಗಿ ಸಂಚರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	
ಈ.	ಇಲ್ಲವಾದಲ್ಲಿ, ಕಾರಣಗಳೇನು; (ವಿವರ ನೀಡುವುದು)	

ಸಂಖ್ಯೆ: ಟಿಡಿ 216 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 489

ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ದೇವನಹಳ್ಳಿ ಹಾಗೂ ವಿಜಯಪುರ ಪಟ್ಟಣಗಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಎರಡು ಪಟ್ಟಣಗಳಲ್ಲಿ ಉತ್ತಮ ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿದೆ.
ಆ.	ಬಂದಿದ್ದಲ್ಲಿ, ಈ ಎರಡು ಪಟ್ಟಣಗಳಲ್ಲಿ ಬಸ್ ನಿಲ್ದಾಣ ಸ್ಥಾಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಕ.ರಾ.ರ.ಸಾ.ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಬಸ್ ನಿಲ್ದಾಣ ನಿರ್ಮಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ದೇವನಹಳ್ಳಿ ಹಾಗೂ ವಿಜಯಪುರ ಪಟ್ಟಣಗಳಲ್ಲಿ ನಿಗಮವು ಯಾವುದೇ ನಿವೇಶನವನ್ನು ಹೊಂದಿರುವುದಿಲ್ಲ. ನಿವೇಶನ ಮಂಜೂರು ಮಾಡುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ. ನಿವೇಶನ ದೊರೆತ ನಂತರ ಸಂಸ್ಥೆಯ ಆರ್ಥಿಕ ಲಭ್ಯತೆ ಹಾಗೂ ಸಾರಿಗೆ ಅವಶ್ಯಕತೆಯನ್ನು ಆಧರಿಸಿ ಈ ಬಗ್ಗೆ ಪರಿಶೀಲಿಸಲಾಗುವುದು.
ಇ.	ಯಾವ ಕಾಲಮಿತಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಟಿಡಿ 220 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 129

ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ನೂತನ ಕೆಎಸ್‌ಆರ್‌ಟಿಸಿ ಘಟಕ ಸ್ಥಾಪನೆ ಮಾಡಲು ಈ ಹಿಂದೆ ಜಾಗವನ್ನು ಗುರುತಿಸಿದ್ದು, ಈವರೆವಿಗೂ ಘಟಕ ಸ್ಥಾಪಿಸದಿರಲು ಕಾರಣವೇನು; ಯಾವಾಗ ಘಟಕ ಪ್ರಾರಂಭಿಸಲಾಗುವುದು; ವಿಳಂಬಕ್ಕೆ ಕಾರಣವೇನು; (ಪೂರ್ಣ ವಿವರ ನೀಡುವುದು)	ಕುಶಾಲನಗರದಲ್ಲಿ ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಬಸವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 1/1ರಲ್ಲಿ 4.00 ಎಕರೆ ನಿವೇಶನವನ್ನು ಕ.ರಾ.ರ.ಸಾ.ನಿಗಮದ ವಶಕ್ಕೆ ಪಡೆಯಲಾಗಿದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತುಂಬಾ ಕಷ್ಟಕರವಾಗಿದೆ. ಮುಂದಿನ ದಿನಗಳಲ್ಲಿ ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 1/2015-16 ದಿ:06-06-2015 ರ ಮಾರ್ಗಸೂಚಿ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಆಧರಿಸಿ ಈ ಬಗ್ಗೆ ಪರಿಶೀಲಿಸಲಾಗುವುದು.
ಆ.	ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುವ ಪ್ರಯಾಣಿಕರ ಹಿತದೃಷ್ಟಿಯಿಂದ ಕೊರೋನಾ ಹರಡದಂತೆ ಸಂಸ್ಥೆ ಯಾವ ರೀತಿಯ ಮುಂಜಾಗೃತ ಕ್ರಮ ಕೈಗೊಂಡಿದೆ?	ಕ.ರಾ.ರ.ಸಾ.ನಿಗಮದ ವಾಹನಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಹಿತದೃಷ್ಟಿಯಿಂದ ಕೊರೋನಾ ಹರಡದಂತೆ ಕೈಗೊಂಡಿರುವ ಮುಂಜಾಗೃತ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 217 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ-1

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸುವ ಸಾರ್ವಜನಿಕ ಪ್ರಯಾಣಿಕರಿಗೆ ಮತ್ತು ನಿಗಮದ ಸಿಬ್ಬಂದಿಯ ಆರೋಗ್ಯದ ದೃಷ್ಟಿಯಿಂದ ಹಾಗೂ ನೋವೆಲ್ ಕರೋನಾ ವೈರಸ್ COVID-19 ಸೋಂಕು ಹರಡದಂತೆ ಎಚ್ಚರವಹಿಸಲು ಕೆಳಕಂಡಂತೆ ಹಲವಾರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತದೆ.

1. COVID-19 ಲಾಕ್‌ಡೌನ್ ಮುಕ್ತಾಯಗೊಂಡ ನಂತರದಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೇವೆಯನ್ನು ಒದಗಿಸುವ ಹಿನ್ನೆಲೆಯಲ್ಲಿ ಹಾಗೂ ಕೋರೊನಾ ವೈರಾಣು ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಬಸ್ಸುಗಳಲ್ಲಿ ಸ್ವಚ್ಛತೆ, ನೈರ್ಮಲ್ಯ ಮತ್ತು ಶುಚಿತ್ವ ಕುರಿತು ಅರಿವು ಉಂಟು ಮಾಡಿ ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಪ್ರಯಾಣಿಕರಲ್ಲಿ ವಿಶ್ವಾಸವನ್ನು ಮೂಡಿಸಿ ಕೇಂದ್ರ/ರಾಜ್ಯ ಸರ್ಕಾರಗಳ ಮಾರ್ಗಸೂಚಿಯಂತೆ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಿ ಕಾರ್ಯಾಚರಿಸಲಾಗುತ್ತಿದೆ.
2. ಸಂಚಾರ ಸಾರಿಗೆ ವ್ಯವಸ್ಥೆಯಲ್ಲಿ ಕೋವಿಡ್-19ರ ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು, ಮಾರ್ಗ ಕಾರ್ಯಾಚರಣೆಗೆ ತೆರಳುವ ವಾಹನಗಳನ್ನು ಘಟಕದಲ್ಲಿ ಸ್ವಚ್ಛಗೊಳಿಸಿ, ಸ್ಯಾನಿಟೈಸರ್ ಕಾರ್ಯವನ್ನು ನಿರ್ವಹಿಸಿದ ನಂತರ ಮಾರ್ಗ ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿರುತ್ತದೆ.
3. ಬಸ್‌ನ ಒಳ ಮತ್ತು ಹೊರ ಭಾಗವನ್ನು ಸ್ವಚ್ಛವಾಗಿಡುವುದರ ಜೊತೆಗೆ ಬಸ್‌ಗಳ ಒಳಗೆ ಸಾರ್ವಜನಿಕ ಪ್ರಯಾಣಿಕರು ಆಗಾಗ್ಗೆ ಸ್ಪರ್ಶಿಸುವ ಗಟ್ಟಿಯಾದ ಮೇಲ್ಮೈಗಳು (ಉದಾಹರಣೆಗೆ ಬಾಗಿಲು ಹಿಡಿಕೆಗಳು, ಪ್ರಯಾಣಿಕರ ಹಿಡಿಕೆಗಳ (Grab rails)) ಮತ್ತು ನಿಯಮಿತವಾಗಿ ಸ್ಪರ್ಶಿಸುವ ಇತರೆ ಸ್ಥಳಗಳು/ವಸ್ತುಗಳನ್ನು ಕಾರ್ಯಾಚರಣೆಗಾಗಿ ಬಸ್ಸುಗಳನ್ನು ನಿಯೋಜಿಸುವ ಮೊದಲು ಮತ್ತು ಹಿಂದಿರುಗಿದ ನಂತರ ಸ್ವಚ್ಛಗೊಳಿಸಿ ಮತ್ತು ಸೋಂಕುರಹಿತಗೊಳಿಸಲಾಗುತ್ತಿದೆ (Sanitizing).
4. ಅಂತೆಯೇ, ಚಾಲನಾ ಸಿಬ್ಬಂದಿಗೆ ಹ್ಯಾಂಡ್ ಗ್ಲೋಸ್, ಮುಖ ಗವಸು ಮತ್ತು ಸ್ಯಾನಿಟೈಸರ್‌ಗಳನ್ನು ಒದಗಿಸಿ ಸಾಮಾಜಿಕ ಅಂತರವನ್ನು ಕಾಯ್ದುಗೊಳ್ಳುವಂತೆ ತಿಳಿಸಲಾಗಿರುತ್ತದೆ.
5. ವಾಹನದಲ್ಲಿ ಪ್ರಯಾಣಿಸುವಾಗ ಪ್ರಯಾಣಿಕರ ಅಂತರ ಕಾಯ್ದುಕೊಳ್ಳುವ ಬಗ್ಗೆ ಮತ್ತು ಎಲ್ಲಾ ಪ್ರಯಾಣಿಕರು ಕಡ್ಡಾಯವಾಗಿ ಮುಖ ಗವಸನ್ನು ಧರಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ನಿರ್ದೇಶನಗಳನ್ನು ನೀಡಲಾಗಿರುತ್ತದೆ.
6. ದಿನಾಂಕ 31.08.2020 ರವರೆಗೆ ಎಲ್ಲಾ ರೀತಿಯ ಬಸ್ಸುಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ಪರ್ಯಾಯವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತಿದೆ. ಅಂದರೆ, ವಾಹನ ಸೀಟಿಂಗ್ ಕ್ಷಮತೆಗೆ ಶೇ.50 ರಷ್ಟು ಮಾತ್ರ ಪ್ರಯಾಣಿಕರನ್ನು ಅನುಮತಿಸಲಾಗುತ್ತಿದೆ. ಇದರಿಂದ ಸಂಸ್ಥೆಗೆ ಆರ್ಥಿಕ ಹೊರೆಯಾಗುತ್ತಿದ್ದರೂ, ಪ್ರಯಾಣಿಕರಿಗೆ ಪ್ರಯಾಣ ದರದಲ್ಲಿ ಯಾವುದೇ ಏರಿಕೆ ಮಾಡಿರುವುದಿಲ್ಲ.
7. ಗರಿಷ್ಠ ಸಂಖ್ಯೆಯ ಬಸ್ಸುಗಳನ್ನು ಮೊದಲೇ ಗುರುತಿಸಲಾದ ಆಸನಗಳೊಂದಿಗೆ ಮುಂಗಡ ಕಾಯ್ದಿರಿಸುವ ವ್ಯವಸ್ಥೆಗೆ ಒಳಪಡಿಸಲಾಗಿದೆ, ಇದರಿಂದ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಸರಿಯಾದ ಅಂತರವನ್ನು ಕಾಯ್ದುಕೊಳ್ಳಲು ಯಾವುದೇ ತೊಂದರೆಗಳಿಲ್ಲದೆ ಕಾರ್ಯಗತಗೊಳಿಸ ಬಹುದಾಗಿರುತ್ತದೆ.
8. ಹಂತ-ಹಂತವಾಗಿ ಪ್ರಸ್ತುತ 5434 ಬಸ್ಸುಗಳನ್ನು ಗ್ರಾಮದಿಂದ ತಾಲ್ಲೂಕು, ತಾಲ್ಲೂಕು-ತಾಲ್ಲೂಕು, ತಾಲ್ಲೂಕು-ಜಿಲ್ಲಾ ಕೇಂದ್ರ, ಜಿಲ್ಲಾ ಕೇಂದ್ರ – ಜಿಲ್ಲಾ ಕೇಂದ್ರ ಮತ್ತು ಜಿಲ್ಲಾ-ರಾಜಧಾನಿಗೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.
9. ಐರಾವತ, ಪ್ಲೈಬಸ್, ಮುಂತಾದ ಪ್ರತಿಷ್ಠಿತ ಸಾರಿಗೆಗಳಲ್ಲಿ Anti-Bacterial Solution ಗಳನ್ನು ಬಳಸಿ ಫ್ಯೂಮಿಗೇಷನ್ ಮಾಡಲಾಗುತ್ತಿದೆ.
10. ಬಸ್ ನಿಲ್ದಾಣಗಳನ್ನು ಸ್ವಚ್ಛವಾಗಿಡಲು ಆಗಿಂದಾಗ್ಗೆ ಶುಚಿಗೊಳಿಸಲಾಗುತ್ತಿದೆ.
11. ನಿಗಮದ ಬಸ್ ನಿಲ್ದಾಣಗಳಲ್ಲಿ ಜಿಂಗಲ್ಸ್‌ಗಳ ಮೂಲಕ ಕರೋನಾ ವೈರಸ್ ಸೋಂಕಿನ ಕುರಿತು ಸಾರ್ವಜನಿಕ ಪ್ರಯಾಣಿಕರ ಮಾಹಿತಿಗೆ ಪ್ರಚಾರ ಪಡಿಸಲಾಗಿರುತ್ತದೆ.
12. ಈ ಸೋಂಕಿನ ಬಗ್ಗೆ ನಿಗಮದ ಸಿಬ್ಬಂದಿ ವಹಿಸಬೇಕಾದ ಎಚ್ಚರದ ಬಗ್ಗೆ ಕರಪತ್ರಗಳನ್ನು ಮುದ್ರಿಸಿ ಬಸ್ ನಿಲ್ದಾಣಗಳು, ಸಂಚಾರ ಬಿಂದುಗಳು ಹಾಗೂ ಘಟಕಗಳಲ್ಲಿ ಹಂಚಲಾಗಿರುತ್ತದೆ.
13. ಪ್ರತಿಷ್ಠಿತ ಎಸಿ ಮತ್ತು ನಾನ್ ಎಸಿ ಸಾರಿಗೆಗಳಲ್ಲಿ ಪ್ರಯಾಣಿಕರ ಹೊದಿಕೆ ಮತ್ತು ಬೆಡ್ ಸ್ಪ್ರೆಡ್‌ಗಳನ್ನು ಪ್ರಯಾಣಿಕರಿಗೆ ನೀಡುವುದನ್ನು ನಿಲ್ಲಿಸಲಾಗಿತ್ತು.

14. ಬಸ್‌ಗಳಲ್ಲಿ ಅಳವಡಿಸಿರುವ ಕಿಟಕಿ ಪರದೆಗಳನ್ನು ತೆಗೆದುಹಾಕಲಾಗಿತ್ತು.

15. 55 ವರ್ಷಕ್ಕಿಂತ ಮೇಲ್ಪಟ್ಟ ಸಿಬ್ಬಂದಿಗೆ ರಜೆ ಕೋರಿದರೆ ಮತ್ತು ಮಧುಮೇಹ, ರಕ್ತದೊತ್ತಡ, ಅಸ್ತಮಾ ಮತ್ತು ಇತರ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಸಿಬ್ಬಂದಿಗಳಿಗೆ ಅವರ ಖಾತೆಯಲ್ಲಿರುವ ರಜೆಯನ್ನು ಮಂಜೂರು ಮಾಡಲಾಗುತ್ತಿದೆ.

16. ಸಾರ್ವಜನಿಕ ಪ್ರಯಾಣಿಕರ ಸುರಕ್ಷತೆಗೆ ಮುಂಜಾಗ್ರತಾ ಕ್ರಮವಾಗಿ ಬಸ್ ನಿಲ್ದಾಣಗಳಲ್ಲಿ ಹಾಗೂ ಪಿಕ್‌ಅಪ್ ಪಾಯಿಂಟ್‌ಗಳಲ್ಲಿ ಪ್ರಯಾಣಿಕರನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಲಾಗುತ್ತಿತ್ತು ಹಾಗೂ ಬಸ್‌ಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರಿಗೆ ಸ್ಯಾನಿಟೈಜರ್ ನೀಡಲಾಗುತ್ತಿತ್ತು.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ.ನಿಗಮ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 682

ಸದಸ್ಯರ ಹೆಸರು : ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ವರುಣ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಬಸ್ ಸೌಕರ್ಯಗಳು ಸರಿಯಾಗಿ ತಲುಪದೆ ಗ್ರಾಮಸ್ಥರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);	ವರುಣ ವಿಧಾನಸಭಾ ಕ್ಷೇತ್ರದಲ್ಲಿ 147 ಗ್ರಾಮಗಳಿದ್ದು, ಈ ಪೈಕಿ 146 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ. ಉಳಿದ ಒಂದು ಗ್ರಾಮವಾದ ಲಕ್ಷ್ಮೀಪುರ ಗ್ರಾಮಕ್ಕೆ ಭಾರಿ ವಾಹನ ಕಾರ್ಯಾಚರಣೆಗೆ ರಸ್ತೆ ಇಲ್ಲದ ಕಾರಣ ಕ.ರಾ.ರ.ಸಾ.ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುವುದಿಲ್ಲ. ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು/ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ.	ಈ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಹೊಸ ಸಾರಿಗೆ ವಾಹನಗಳನ್ನು ಒದಗಿಸಲಾಗಿದೆ (ವಿವರ ನೀಡುವುದು);	ವರುಣ ವಿಧಾನಸಭಾ ಕ್ಷೇತ್ರಕ್ಕೆ ನಿಗಮದಿಂದ 2018-19 ಮತ್ತು 2019-20ನೇ ಸಾಲಿನಲ್ಲಿ ಒಟ್ಟು 11 ಹೊಸ ವಾಹನಗಳನ್ನು ಒದಗಿಸಿ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.
ಇ.	ಈ ಕ್ಷೇತ್ರದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸಲಾಗಿದೆ (ವಿವರ ನೀಡುವುದು)?	ವರುಣ ಕ್ಷೇತ್ರದಲ್ಲಿ 2016-17, 2017-18 ಮತ್ತು 2018-19ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುತ್ತೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗಿರುತ್ತದೆ. ಬಸ್ ನಿಲ್ದಾಣವನ್ನು 3 ಹಂತದಲ್ಲಿ ರೂ.3.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದ್ದು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಸಂಖ್ಯೆ: ಟಿಡಿ 240 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 653

ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ನಾಗಠಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚಡಚಣ ಪಟ್ಟಣದಲ್ಲಿ ನೂತನ ಬಸ್ ಘಟಕ ಕಾಮಗಾರಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಡಚಣ ಪಟ್ಟಣದಲ್ಲಿ ನೂತನ ಬಸ್ ಘಟಕವನ್ನು ನಿರ್ಮಿಸುವುದಕ್ಕೆ ಪಟ್ಟಣ ಪಂಚಾಯಿತಿ ವಾರ್ಡ ನಂ. 09ರ ಜತ್ ಮತ್ತು ಸಲಗರ ರಸ್ತೆಯ ಮಧ್ಯದ ಗಾಂವಠಾಣ ಜಾಗದ 04 ಎಕರೆ ನಿವೇಶನ ಹಸ್ತಾಂತರಿಸುವುದಕ್ಕೆ ರೂ.4,20,000.00ಗಳನ್ನು ಪಾವತಿಸಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಸಂಸ್ಥೆಯು ಆರ್ಥಿಕ ನಷ್ಟದಲ್ಲಿದ್ದು ಹಾಗೂ ಹೊಸ ಕಾಮಗಾರಿಯನ್ನು ಕೈಗೊಳ್ಳುವುದನ್ನು ನಿರ್ಬಂಧಿಸಿರುವುದರಿಂದ, ಕಾಮಗಾರಿಯನ್ನು ಮುಂದಿನ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಪರಿಶೀಲಿಸಲಾಗುವುದು.
ಆ.	ಚಡಚಣ ಬಸ್ ಘಟಕ ಪ್ರಾರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	
ಇ.	ಚಡಚಣ ಬಸ್ ಘಟಕ ನಿರ್ಮಾಣಕ್ಕೆ ಸರ್ಕಾರ ನಿಗದಿಪಡಿಸಿದ ಅನುದಾನ ಎಷ್ಟು; ಯಾವ ಕಾಲಮಿತಿಯೊಳಗೆ ಬಸ್ ಘಟಕ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು; (ವಿವರವಾದ ಮಾಹಿತಿ ನೀಡುವುದು)	
ಈ.	ನೂತನ ಚಡಚಣ ಬಸ್ ಘಟಕಕ್ಕೆ ಹೊಸ ಬಸ್ಸುಗಳನ್ನು ನೀಡಲಾಗುವುದೇ: ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)	ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ವಾಹನಗಳ ಸಹಜ ಕಾರ್ಯಾಚರಣೆಗೊಳ್ಳದೇ ಇದ್ದು, ಸಂಸ್ಥೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಹೊಸ ಬಸ್ಸುಗಳ ಖರೀದಿಯನ್ನು ಕೈಬಿಡಲಾಗಿರುತ್ತದೆ. ಹೊಸದಾಗಿ ಬಸ್ ಘಟಕ ಆರಂಭಗೊಂಡು ಹೊಸ ಬಸ್ಸುಗಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿದಾಗ ಅವಶ್ಯಕತೆಗನುಗುಣವಾಗಿ ಬಸ್ಸುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 235 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 415
ಸದಸ್ಯರ ಹೆಸರು : ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನೆಲಮಂಗಲ ನಗರದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ನೆಲಮಂಗಲ ನಗರದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿ ಕೆಲಸವನ್ನು ಟೆಂಡರ್ ಮೂಲಕ ಮೆ|| ಕೆ.ಎಂ.ವಿ. ಪ್ರಾಜೆಕ್ಟ್ಸ್ ಲಿಮಿಟೆಡ್, ಇವರಿಗೆ ವಹಿಸಲಾಗಿರುತ್ತದೆ.
ಆ.	ಹೈಟೆಕ್ ಬಸ್ ನಿಲ್ದಾಣ ಕಾಮಗಾರಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ಆದೇಶ ಪ್ರತಿಯೊಂದಿಗೆ ವಿವರ ನೀಡುವುದು)	ನೆಲಮಂಗಲ ನಗರದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಲು ನಗರ ಭೂಸಾರಿಗೆ ನಿರ್ದೇಶನಾಲಯ ಅನುದಾನ, ಬಂಡವಾಳ ವೆಚ್ಚಗಳ ಅನುದಾನ, ಬೆಂ.ಮ.ಸಾ.ಸಂಸ್ಥೆ ಮತ್ತು ಕ.ರಾ.ರ.ಸಾ.ನಿಗಮದ ಆಂತರಿಕ ಸಂಪನ್ಮೂಲಗಳಿಂದ ರೂ.40.00 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಸದರಿ ಕೆಲಸದ ಟೆಂಡರ್ ಮೊತ್ತವು ರೂ.47.54 ಕೋಟಿಗಳಾಗಿದ್ದು, ಟೆಂಡರ್ ಮೊತ್ತದಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯವು ರೂ.11.74 ಕೋಟಿಗಳನ್ನು ಭರಿಸಲು ಅನುಮೋದನೆ ನೀಡಲಾಗಿರುತ್ತದೆ. ಬೆಂ.ಮ.ಸಾ.ಸಂಸ್ಥೆಯಿಂದ ರೂ.8.00 ಕೋಟಿಗಳನ್ನು ಹಾಗೂ ಬಾಕಿ ರೂ.20.26 ಕೋಟಿಗಳನ್ನು ಕ.ರಾ.ರ.ಸಾ.ನಿಗಮಕ್ಕೆ ಸರ್ಕಾರದಿಂದ ನೀಡಲಾಗುವ ಬಂಡವಾಳ ವೆಚ್ಚಗಳ ಅನುದಾನ ಮತ್ತು ಆಂತರಿಕ ಸಂಪನ್ಮೂಲಗಳಿಂದ ಭರಿಸಬೇಕಿರುತ್ತದೆ. ಸರ್ಕಾರದ ಬಂಡವಾಳ ವೆಚ್ಚಗಳ ಅನುದಾನದಲ್ಲಿ ಈವರೆಗೆ ರೂ.3.00 ಕೋಟಿಗಳು ಬಿಡುಗಡೆಯಾಗಿರುತ್ತದೆ. ನಗರ ಭೂಸಾರಿಗೆ ನಿರ್ದೇಶನಾಲದ ಅನುಮೋದನೆಯ ಪ್ರತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಇ.	ನೆಲಮಂಗಲ ಬಸ್ ನಿಲ್ದಾಣದ ಜಮೀನಿನ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಸಾರಿಗೆ ನಿಗಮದ ಅಧಿಕಾರಿಗಳು ಹಾಗೂ ನಗರಸಭೆಯ ಅಧಿಕಾರಿಗಳು ಭಾಗವಹಿಸಿದ್ದ ದಿನಾಂಕ: 03/03/2020ರ ಸಭೆಯಲ್ಲಿ ನಿಗಮದಿಂದ ನಿರ್ಮಿಸುವ ಆಧುನಿಕ ಬಸ್ ನಿಲ್ದಾಣದಿಂದ ಬರುವ ವಾಣಿಜ್ಯ ಆದಾಯವನ್ನು ಸಾರಿಗೆ ನಿಗಮಗಳು ಮತ್ತು ನಗರಸಭೆ ಹಂಚಿಕೆ ಮಾಡಿಕೊಳ್ಳುವ ಬಗ್ಗೆ ಒಡಂಬಡಿಕೆ (MOU) ಮಾಡಿಕೊಂಡು, ಖಾತಾ ಮತ್ತು ಋಣಭಾರ ದಾಖಲೆಗಳನ್ನು ಸಾರಿಗೆ ನಿಗಮಕ್ಕೆ ವರ್ಗಾವಣೆ ಮಾಡುವಂತೆ ತೀರ್ಮಾನಿಸಲಾಗಿರುತ್ತದೆ. ಅದರಂತೆ ವಾಣಿಜ್ಯ ಆದಾಯದ ಹಂಚಿಕೆ ಬಗ್ಗೆ ಒಡಂಬಡಿಕೆ (MOU) ಮಾಡಿಕೊಳ್ಳಲು ಸ್ಥಳೀಯ ನಗರಸಭೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ.	ಸೋಂಪುರ ಬಸ್ ನಿಲ್ದಾಣ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಾಬಸ್‌ಪೇಟೆಯಲ್ಲಿ (ಸೋಂಪುರ) ಇರುವ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಅಗತ್ಯವಿರುತ್ತದೆ.
ಉ.	ಬಂದಿದ್ದಲ್ಲಿ, ಬಸ್ ನಿಲ್ದಾಣದ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕೆಲಸವನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ. ಮುಂದಿನ ದಿನಗಳಲ್ಲಿ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.
ಊ.	ನೆಲಮಂಗಲ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹಳ್ಳಿಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ಇರುವ ಮಾನದಂಡಗಳೇನು?	ಕ.ರಾ.ರ.ಸಾ.ನಿಗಮದಲ್ಲಿ ಚಾಲ್ತಿಯಲ್ಲಿರುವ ಬಸ್ ನಿಲ್ದಾಣ ಮತ್ತು ಬಸ್ ಘಟಕ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16 ದಿನಾಂಕ:06.06.2015ರ ಪ್ರಕಾರ ಹಳ್ಳಿಗಳಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ಅವಕಾಶವಿರುವುದಿಲ್ಲ.

ಸಂಖ್ಯೆ: ಟಿಡಿ 219 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

Directorate of Urban Land Transport
Urban development Department

GOVERNMENT
OF KARNATAKA

Office of the Commissioner
Urban Land Transport

BMTC, TTMC 'B' Block (Above Bus Stand)
4th Floor, K.H. Road, Shanthinagar,
Bengaluru - 560027.
Ph.: 080-22226627 / 6628, Fax 080-22226630
E-mail: dultbangalore@gmail.com

PROCEEDINGS OF THE GOVERNMENT OF KARNATAKA

Sub: Project proposal submitted by KSRTC for construction of Bus Terminal and Commercial Complex at Nelamangala.

Read: 1. Letter No: KST/CO/CE/AEE/1046/2018-19 Dated: 31.10.2018
2. Proceedings of the Empowered Committee meeting held on 15.06.2020

PREAMBLE:

Karnataka State Road Transport Corporation (KSRTC) vide letter read at (1) has submitted a project proposal for funding under State Urban Transport Fund for "**Construction of Bus Terminal and Commercial Complex at Nelamangala.**" The proposed project is a mixed use project with a city bus stand at the ground floor, Moffusil Bus Stand at the 1st floor, parking in basement and commercial complex in 2nd and 3rd floor. In the 8th Empowered Committee Meeting (ECM) held on 15th June, 2020, KSRTC has made a presentation wherein it was reported that the said project has already been tendered out at a cost of Rs. 47.54 Crores. The project is tied up for funding with grants from Govt. and KSRTC to the tune of Rs. 26.15 Crores (55%) and BMTC funding Rs. 9.50 Crores (20%) share and requested the DULT to sanction the balance funding of Rs. 11.89 Crores under SUTF.

After detailed examination of the proposal, the Empowered Committee stipulated a norm that for project proposals comprising of commercial components; out of the total project cost proposed, the cost of the transport infrastructure + only 50% of the cost of the commercial components shall be taken into account for deciding the contribution of financial assistance under SUTF. Considering the above facts and by applying the norm, Empowered Committee has taken a decision to sanction in-principle approval for Rs. 11.89 Crores as F/A under SUTF and subject to the condition that the revenue earnings on parking and commercial complex shall be shared by entering the tripartite MoU between KSRTC, KNMTA and DULT.

Subsequently, KSRTC has communicated copy of the contract agreement to DULT in which approved tendered amount is Rs. 46.944 crores for construction of bus terminal and commercial complex at Nelamangala. Thus 25% of this amount works out to Rs. 11.74 crores which is the financial assistance now sanctioned under SUTF grants. Hence this order.

Government Order No: DULT-SUTFOBUTR/11/2020 dated 11.08.2020/312

In the circumstances explained in the preamble, in principle sanction is accorded for the project of "**Construction of Bus Terminal and Commercial Complex at**

Nelamangala." at a tendered cost of Rs. 46.944 Crores, as proposed by KSRTC for financial assistance under SUTF. The share of funding under SUTF will be Rs. 11.74 Crores (Rupees Eleven Crores Seventy Four Lakhs only) and the balance amount of Rs.35.21 Crores (75%) shall be borne between KSRTC and BMTC as is committed.

The sanction of financial assistance of Rs. 11.74 crores under SUTF is subject to the condition that the revenue earnings on parking and commercial complex shall be shared by entering the tripartite MoU between KSRTC, DULT and Karnataka Non-motorised Transport Agency (KNMTA) a Society. A Revolving fund will be setup by KNMTA to which share of the revenue earnings out of parking and commercial complex shall have to be credited to this fund by KSRTC.

a. The financial assistance under SUTF will be released in installments based on request proposals duly enclosing utilization certificate and on satisfactory progress of the project.

b. KSRTC should submit monthly progress report regularly to DULT.

c. Bus Terminal constructed with the grant shall have the inscription and approved logo of "Karnataka State Urban Transport Fund (ಕರ್ನಾಟಕ ರಾಜ್ಯ ನಗರ ಸಾರಿಗೆ ನಿಧಿ)".

By order and in the name of the
Governor of Karnataka

[V. Manjula IAS]
Commissioner
& E/o Additional Chief Secretary to Government
Directorate of Urban Land Transport
Urban Development Department

To:

1 The Accountant General (A&E), Karnataka, Bangalore
2. The Joint Secretary, Urban Development Department, Vikasa Soudha Bangalore
3. The Managing Director, KSRTC, Bangalore.
4 The Managing Director, BMTC, Bangalore.
5 The Joint Director (Planning), Urban Development Department, Bangalore
6 Office Copy

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 497

ಸದಸ್ಯರ ಹೆಸರು : ಶ್ರೀ ನರೇಂದ್ರ ಆರ್. (ಹನೂರು)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿರುವಂತಹ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ಡಿಪೋ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿರುವಂತಹ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ಡಿಪೋ ಮಂಜೂರು ಮಾಡುವ ಪ್ರಸ್ತಾವನೆ ಇರುವುದಿಲ್ಲ. ಸಾರಿಗೆ ಅವಶ್ಯಕತೆ, ನಿವೇಶನ ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಪರಿಶೀಲಿಸಲಾಗುವುದು.
ಆ.	ಇದ್ದಲ್ಲಿ, ಹನೂರು ತಾಲ್ಲೂಕಿನಲ್ಲಿ ಬಸ್ ಡಿಪೋ ಮಂಜೂರು ಮಾಡಲಾಗುವುದೇ; (ವಿವರ ನೀಡುವುದು)	
ಇ.	ಈ ಮಂಜೂರಾತಿಗೆ ಯಾವುದಾದರು ಕಾಲಮಿತಿ ಹಾಗೂ ಮಾನದಂಡಗಳಿವೆಯೇ; (ವಿವರ ನೀಡುವುದು)	ನಿವೇಶನ ಮಂಜೂರಾತಿಗೆ ಯಾವುದೇ ಕಾಲಮಿತಿ ಹಾಗೂ ಮಾನದಂಡಗಳಿರುವುದಿಲ್ಲ. ಕ.ರಾ.ರ.ಸಾ.ನಿಗಮವು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ:01/2015-16 ದಿನಾಂಕ:06-06-2015 ರ ಪ್ರಕಾರ, ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಟಿಡಿ 222 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 262

ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಹಗರಿಬೊಮ್ಮನಹಳ್ಳಿ ಘಟಕದಲ್ಲಿರುವ ಎಷ್ಟು ಹಳೆಯ ಬಸ್‌ಗಳನ್ನು ಬದಲಾಯಿಸಿ ಎಷ್ಟು ಹೊಸ ಬಸ್‌ಗಳನ್ನು ಯಾವಾಗ ಒದಗಿಸಲಾಗುವುದು? (ವಿವರ ನೀಡುವುದು)	ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ, ಸಾಮಾನ್ಯ ಮಾದರಿಯ ಬಸ್ಸುಗಳ ಜೀವಮಾನವನ್ನು 9.00 ಲಕ್ಷ ಕಿ.ಮೀ. ಹಾಗೂ ಕರೋನಾ ಹವಾನಿಯಂತ್ರಿತ ಬಸ್ಸುಗಳ ಜೀವಮಾನವನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸಲಾಗಿರುತ್ತದೆ. ನಿಗದಿಪಡಿಸಿದ ಕಿ.ಮೀ. ಕ್ರಮಿಸಿದ ನಂತರ ಆ ಬಸ್ಸಿನ ಸ್ಥಿತಿಗತಿ ಆಧಾರದ ಮೇಲೆ ನಿಷ್ಕ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಗರಿಬೊಮ್ಮನಹಳ್ಳಿ ಘಟಕದಲ್ಲಿ ಒಟ್ಟು 54 ಬಸ್ಸುಗಳಿದ್ದು, ಈ ಪೈಕಿ 20 ಬಸ್ಸುಗಳು ನಿಗದಿತ 9.00 ಲಕ್ಷ ಕಿ.ಮೀ ಕ್ರಮಿಸಿರುತ್ತವೆ. ನಿಗದಿತ ಕಿ.ಮೀ. ಕ್ರಮಿಸಿದ ಬಸ್ಸುಗಳನ್ನು ಪರಿಶೀಲಿಸಿ ಭೌತಿಕ ಮತ್ತು ತಾಂತ್ರಿಕ ಸ್ಥಿತಿಗತಿ ಉತ್ತಮವಾಗಿದ್ದಲ್ಲಿ, ಅವುಗಳ ಕಾರ್ಯಾಚರಣೆಯನ್ನು ಮುಂದುವರೆಸಲಾಗುತ್ತಿದ್ದು, ಸ್ಥಿತಿಗತಿ ಉತ್ತಮವಾಗಿರದಿದ್ದಲ್ಲಿ ಅದ್ಯತೆಯ ಮೇಲೆ ನಿಷ್ಕ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಹಗರಿಬೊಮ್ಮನಹಳ್ಳಿ ಘಟಕದ 07 ಬಸ್ಸುಗಳನ್ನು ನಿಷ್ಕ್ರಿಯಗೊಳಿಸಿದ್ದು, 18 ಹೊಸ ಬಸ್ಸುಗಳನ್ನು ಒದಗಿಸಲಾಗಿರುತ್ತದೆ. ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಬಸ್ಸುಗಳು ಸಹಜ ಕಾರ್ಯಾಚರಣೆಗೊಳ್ಳದೇ ಇದ್ದು, ಸಂಸ್ಥೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಹೊಸ ಬಸ್ಸುಗಳ ಖರೀದಿಯನ್ನು ಕೈಬಿಡಲಾಗಿರುತ್ತದೆ. ಹೊಸ ಬಸ್ಸುಗಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿದಾಗ ಘಟಕದ ಅವಶ್ಯಕತೆಗನುಗುಣವಾಗಿ ಹೊಸ ಬಸ್ಸುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 218 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 633
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಹುಣಸೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ಬಸ್ಸುಗಳ ಸೌಕರ್ಯ ಕಲ್ಪಿಸಿರುವುದಿಲ್ಲ (ಗ್ರಾಮಗಳವಾರು ವಿವರವಾದ ಮಾಹಿತಿ ನೀಡುವುದು);	ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 195 ಗ್ರಾಮಗಳಿದ್ದು, ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ಕ.ರಾ.ರ.ಸಾ.ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ.
ಆ.	ಬಸ್ ಸೌಕರ್ಯವಿಲ್ಲದಿರುವ ಗ್ರಾಮಗಳಿಗೆ ಬಸ್ಸುಗಳ ಸೌಕರ್ಯ ಒದಗಿಸುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು (ವಿವರ ನೀಡುವುದು);	
ಇ.	ಈ ಹೊರತುಪಡಿಸಿ ಇನ್ನುಳಿದ ಗ್ರಾಮಗಳಿಗೆ ನಿಗದಿತ ಸಮಯದಲ್ಲಿ ಬಸ್ಸುಗಳ ಸಂಚಾರವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಹೆಚ್ಚುವರಿ ಸುತ್ತುವಳಿಗಳು, ಸಮಯ ಬದಲಾವಣೆ, ಮಾರ್ಗ ಬದಲಾವಣೆ ಮತ್ತು ಕೋರಿಕೆ ನಿಲುಗಡೆಗಳಿಗೆ ನೀಡಲಾದ ಮನವಿಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದ್ದು, ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ.
ಈ.	ಹಾಗಿದ್ದಲ್ಲಿ, ಈ ಮಾರ್ಗಗಳ ಮುಖಾಂತರ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ನೌಕರರು ಹಾಗೂ ರೈತವರ್ಗದವರು ಕಾರ್ಯಗಳಿಗೆ/ ಕೆಲಸಗಳಿಗೆ ಹೋಗಿ ಬರಲು ನಿಗದಿತ ಸಮಯಕ್ಕೆ ಬಸ್ಸುಗಳು ಬರದೇ ಇರುವುದರಿಂದ ಬಹಳಷ್ಟು ಸಮಸ್ಯೆಗಳಾಗುತ್ತಿದ್ದು ಈ ತೊಂದರೆಗಳನ್ನು ನಿವಾರಿಸಲು ಸರ್ಕಾರದ ನಿಲುವೇನು (ವಿವರ ನೀಡುವುದು)?	ಈ ಮಾರ್ಗಗಳಲ್ಲಿ ಗ್ರಾಮೀಣ ಭಾಗದಿಂದ ತೆರಳುವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ನೌಕರರು ಹಾಗೂ ರೈತವರ್ಗದವರು ಕೆಲಸಗಳಿಗೆ ದಿನನಿತ್ಯ ಕಾರ್ಯಗಳಿಗೆ/ಕೆಲಸಗಳಿಗೆ ಸಂಚರಿಸುವ ಸಾರ್ವಜನಿಕರಿಗೆ ನಿಗದಿತ ಸಮಯಕ್ಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸಂಪರ್ಕ ಕಲ್ಪಿಸಲಾಗಿದೆ. ಮುಂದುವರೆದು, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು/ ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಂಖ್ಯೆ: ಟಿಡಿ 229 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 720
ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದ ಕೆಎಸ್‌ಆರ್‌ಟಿಸಿಯು ಕೋವಿಡ್-19ರ ದುಷ್ಪರಿಣಾಮದಿಂದ ಅನುಭವಿಸಿದ ಒಟ್ಟು ಆದಾಯದಲ್ಲಿನ ಕೊರತೆ ಪ್ರಮಾಣ ಹಾಗೂ ಪರ್ಯಾಯವಾಗಿ ಸಾರಿಗೆ ವ್ಯವಸ್ಥೆ ಮೂಲಕ ಆದಾಯದ ನೂತನ ಕ್ರಿಯಾ ಯೋಜನೆಗಳು ಯಾವುವು;	ಕೋವಿಡ್-19ರ ದುಷ್ಪರಿಣಾಮದಿಂದಾಗಿ ದಿನಾಂಕ: 30.11.2020ರವರೆಗೆ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ, ಕ.ರಾ.ರ.ಸಾ.ನಿಗಮವು ಸಾರಿಗೆ ಆದಾಯದಲ್ಲಿ ರೂ.1540.70 ಕೋಟಿ ಆದಾಯ ಕಡಿಮೆ ಗಳಿಕೆ ಮಾಡಿರುತ್ತದೆ. ನಿಗಮವನ್ನು ಸುಗಮ ಸ್ಥಿತಿಗೆ ತರಲು ಹಂತಹಂತವಾಗಿ ಕೊರೋನಾ-19 ಲಾಕ್‌ಡೌನ್ ಪೂರ್ವದಲ್ಲಿದಂತೆ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಮತ್ತು ಆದಾಯವನ್ನು ಗಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ.	ಸಾರಿಗೆ ಸಂಸ್ಥೆಯ ಸಂಚಾರ ವ್ಯವಸ್ಥೆಯು ಯಥಾಸ್ಥಿತಿಗೆ ಬರುವಂತಾಗಲು ಸಂಸ್ಥೆಯ ಮುಂದಿರುವ ಪ್ರಸ್ತಾವನೆಗಳು ಯಾವುವು;	ಪ್ರಸಕ್ತ ವರ್ಷ ಯಾವುದೇ ಹೊಸ ಅನುಸೂಚಿಗಳನ್ನು ಪ್ರಾರಂಭಿಸದೇ ಇರುವುದರಿಂದ, ಹೊಸ ವಾಹನಗಳನ್ನು ಖರೀದಿಸಲಾಗುವುದಿಲ್ಲ. ಅಂತರರಾಜ್ಯ ಸಂಚಾರಕ್ಕೆ ಸಂಬಂಧಿಸಿದಂತೆ, ದಿನಾಂಕ:17.06.2020ರಿಂದ ಆಂಧ್ರಪ್ರದೇಶ ರಾಜ್ಯಕ್ಕೆ, ದಿನಾಂಕ:24.08.2020ರಿಂದ ಕೇರಳ ರಾಜ್ಯಕ್ಕೆ, ದಿನಾಂಕ:07.09.2020ರಿಂದ ಗೋವಾ ರಾಜ್ಯಕ್ಕೆ, ದಿನಾಂಕ:22.09.2020ರಿಂದ ಮಹಾರಾಷ್ಟ್ರ ರಾಜ್ಯಕ್ಕೆ, ದಿನಾಂಕ:29.09.2020ರಿಂದ ತೆಲಂಗಾಣ ರಾಜ್ಯಕ್ಕೆ, ದಿನಾಂಕ:23.10.2020ರಿಂದ ಪುದುಚೇರಿಗೆ ಹಾಗೂ ದಿನಾಂಕ:11.11.2020ರಿಂದ ತಮಿಳುನಾಡು ರಾಜ್ಯಕ್ಕೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಪ್ರಯಾಣಿಕರಿಂದ ಕಡಿಮೆ ಬೇಡಿಕೆ ಇರುವ ಕಾರಣ ಪೂರ್ಣ ಪ್ರಮಾಣದ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆಗನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ.

		ಪರ್ಯಾಯ ಆದಾಯ ಕ್ರೋಢೀಕರಣದ ಸಲುವಾಗಿ ನಿಗಮವು ನೂತನ ಪಾರ್ಸಲ್ ಮತ್ತು ಕೊರಿಯರ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಯೋಜಿಸಿದ್ದು, ಇದರಿಂದ ನಿಗಮದ ಸಾರಿಗೇತರ ಆದಾಯವನ್ನು ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.
ಇ.	ಪ್ರಸ್ತುತ ಸಾರಿಗೆ ವ್ಯವಸ್ಥೆ ಪುನರಾರಂಭದೊಂದಿಗೆ ಸಾರ್ವಜನಿಕ ಸಂಚಾರ ಸೌಲಭ್ಯಗಳ ಕುರಿತಾದ ಕ್ರಮಗಳೇನು?	ಕ.ರಾ.ರ.ಸಾ.ನಿಗಮದ ಸಾರಿಗೆ ವ್ಯವಸ್ಥೆಯ ಪುನರಾರಂಭದೊಂದಿಗೆ ಸಾರ್ವಜನಿಕ ಸಂಚಾರ ಸೌಲಭ್ಯಗಳ ಕುರಿತಾದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 246 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ-1

ಸಾರಿಗೆ ವ್ಯವಸ್ಥೆಯ ಪುನರಾರಂಭದೊಂದಿಗೆ ಸಾರ್ವಜನಿಕ ಸಂಚಾರ ಸೌಲಭ್ಯಗಳ ವಿವರ

1. ಮಾರ್ಚ್-2020ರಲ್ಲಿ ಕ.ರಾ.ರ.ಸಾ.ನಿಗಮವು ಒಟ್ಟು 8176 ಅನುಸೂಚಿಗಳನ್ನು (ಬಸ್ಸುಗಳು) ಕಾರ್ಯಾಚರಣೆ ಮಾಡುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶದನ್ವಯ ದಿನಾಂಕ 22.03.2020ರಿಂದ ಸಂಪೂರ್ಣ ಲಾಕ್‌ಡೌನ್ ಘೋಷಿಸಿದ್ದರಿಂದ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು.
2. ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನಗಳನ್ವಯ ದಿನಾಂಕ 04.05.2020ರಿಂದ ಹಸಿರು ವಲಯದ ಜಿಲ್ಲೆಗಳಲ್ಲಿ ಜಿಲ್ಲೆಯೊಳಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿರುತ್ತದೆ ಮತ್ತು ದಿನಾಂಕ 19.05.2020ರಿಂದ ರಾಜ್ಯಾದ್ಯಂತ ಬೆಳಿಗ್ಗೆ 07.00 ರಿಂದ ಸಂಜೆ 07.00 ರವರೆಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿತ್ತು, ನಂತರ, ದಿನಾಂಕ: 01.06.2020ರಿಂದ ಬೆಳಿಗ್ಗೆ 05.00 ರಿಂದ ರಾತ್ರಿ 09.00ರವರೆಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿತ್ತು.
3. ಮುಂದುವರೆದು, ದಿನಾಂಕ 05.06.2020ರಿಂದ ರಾತ್ರಿ ಸಾರಿಗೆಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ದಿನಾಂಕ 08.06.2020ರಿಂದ ಲಾಕ್‌ಡೌನ್ ಸಡಿಲಗೊಂಡ ಹಿನ್ನೆಲೆಯಲ್ಲಿ ಹೆಚ್ಚು ಸಾರಿಗೆಗಳನ್ನು ಕಾರ್ಯಾಚರಿಸಲಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ಬೇಡಿಕೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಿಸಲು ಸೂಚಿಸಲಾಗಿದೆ. ದಿನಾಂಕ 10.06.2020ರಿಂದ ಈ ಹಿಂದೆ ಇದ್ದಂತೆ, ಅನುಸೂಚಿಗಳ ಕಾರ್ಯಾಚರಣೆಯನ್ನು ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ದಿನದಿಂದ ದಿನಕ್ಕೆ ಬೇಡಿಕೆಗೆ ಅನುಗುಣವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಿಸಲಾಗುತ್ತಿದೆ.
4. ಹಂತ-ಹಂತವಾಗಿ ಪ್ರಸ್ತುತ ಕ.ರಾ.ರ.ಸಾ.ನಿಗಮದ ವತಿಯಿಂದ ಸರಾಸರಿಯಾಗಿ ಪ್ರತಿದಿನ 5434 ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿದೆ. ಜಿಲ್ಲೆಯಿಂದ ಜಿಲ್ಲೆಗೆ, ತಾಲ್ಲೂಕು-ಜಿಲ್ಲೆ, ಜಿಲ್ಲೆ/ತಾಲ್ಲೂಕು-ರಾಜಧಾನಿಗೆ, ತಾಲ್ಲೂಕು-ಗ್ರಾಮಗಳಿಗೆ ಸಾರಿಗೆಗಳನ್ನು ಕಲ್ಪಿಸಲಾಗುತ್ತಿದ್ದು, ಬೇಡಿಕೆಯ ಅನುಸಾರ ಸಾರಿಗೆಗಳನ್ನು ಹೆಚ್ಚಿಸಲಾಗುತ್ತಿದೆ. ಗ್ರಾಮೀಣ ಸಾರಿಗೆ ಮತ್ತು ನಗರ ಸಾರಿಗೆಗಳನ್ನು ಕೋವಿಡ್ ಪೂರ್ವದಲ್ಲಿ ಇದ್ದಂತೆ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ದಿನಾಂಕ 24.06.2020ರವರೆಗೂ ಎ/ಸಿ ಬಸ್ಸುಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ದಿನಾಂಕ 25.06.2020ರಿಂದ ಎ/ಸಿ ಬಸ್ಸುಗಳನ್ನು ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಎ/ಸಿ ಬಸ್ಸುಗಳಿಗೆ ಪ್ರಯಾಣಿಕರಿಂದ ಬೇಡಿಕೆ ಕುಸಿದಿರುವುದರಿಂದ ಕೆಲವು ಬಸ್ಸುಗಳನ್ನು ಮಾತ್ರ ಕಾರ್ಯಾಚರಿಸುತ್ತಿದ್ದು ಸಾರಿಗೆ ಆದಾಯ ಕಡಿಮೆಯಾಗಿರುತ್ತದೆ.
6. ಅಂತರ ರಾಜ್ಯ ಸಂಚಾರಕ್ಕೆ ಸಂಬಂಧಿಸಿದಂತೆ, ದಿನಾಂಕ 17.06.2020ರಿಂದ ಆಂಧ್ರಪ್ರದೇಶ ರಾಜ್ಯಕ್ಕೆ, ದಿನಾಂಕ 24.08.2020ರಿಂದ ಕೇರಳ ರಾಜ್ಯಕ್ಕೆ, ದಿನಾಂಕ 07.09.2020ರಿಂದ ಗೋವಾ ರಾಜ್ಯಕ್ಕೆ, ದಿನಾಂಕ 22.09.2020ರಿಂದ ಮಹಾರಾಷ್ಟ್ರ ರಾಜ್ಯಕ್ಕೆ, ದಿನಾಂಕ 29.09.2020ರಿಂದ ತೆಲಂಗಾಣ ರಾಜ್ಯಕ್ಕೆ, ದಿನಾಂಕ 23.10.2020ರಿಂದ ಪುದುಚೇರಿಗೆ ಹಾಗೂ ದಿನಾಂಕ 11.11.2020ರಿಂದ ತಮಿಳುನಾಡು ರಾಜ್ಯಕ್ಕೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ.
7. ಪ್ರಯಾಣಿಕರಿಂದ ಬೇಡಿಕೆ ಇಲ್ಲದೇ ಬಸ್ ನಿಲ್ದಾಣಗಳಲ್ಲಿ ಜನಸಂದಣಿ ವಿರಳವಾಗಿರುವ ಕಾರಣ, ಪ್ರವಾಸಿ ತಾಣಗಳಿಗೆ ಹಾಗೂ ಧಾರ್ಮಿಕ ಕೇಂದ್ರಗಳಿಗೆ ಪ್ರಯಾಣಿಸಲು ಪ್ರಯಾಣಿಕರು ಕಡಿಮೆ ಇರುವ ಕಾರಣ, ಕಾರ್ಖಾನೆ/ಕಂಪನಿಗಳ ಉದ್ಯೋಗಿಗಳಿಗೆ ಮನೆಯಿಂದ ಕೆಲಸ ಮಾಡಲು ಅವಕಾಶ ನೀಡಿರುವ ಕಾರಣ ಹಾಗೂ ಶಾಲೆ/ಪದವಿ ಪೂರ್ವ ಕಾಲೇಜುಗಳು ಪುನಃ ಆರಂಭವಾಗದಿರುವುದರಿಂದ ಮತ್ತು ಹವಾನಿಯಂತ್ರಿತ (ಎ/ಸಿ) ಬಸ್ಸುಗಳಿಗೆ ಕಡಿಮೆ ಬೇಡಿಕೆ ಇರುವುದರಿಂದ ಪೂರ್ಣ ಪ್ರಮಾಣವಾಗಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆಗನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ.
8. ಎಲ್ಲಾ ರೀತಿಯ ಬಸ್ಸುಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ಪರ್ಯಾಯವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಅಂದರೆ, ವಾಹನ ಸೀಟಿಂಗ್ ಕ್ಷಮತೆಗೆ ಶೇ.50 ರಷ್ಟು ಮಾತ್ರ ಪ್ರಯಾಣಿಕರನ್ನು

		ಅನುಷ್ಠಾನಗೊಳಿಸಲು ಯೋಜಿಸಿದ್ದು, ಇದರಿಂದ ನಿಗಮದ ಸಾರಿಗೇತರ ಆದಾಯವನ್ನು ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.
ಆ	ಸಾರಿಗೆ ಸಂಸ್ಥೆಯ ಸಂಚಾರ ವ್ಯವಸ್ಥೆಯು ಯಥಾಸ್ಥಿತಿಗೆ ಬರುವಂತಾಗಲು ಸಂಸ್ಥೆಯ ಮುಂದಿರುವ ಪ್ರಸ್ತಾವನೆಗಳು ಯಾವುವು;	ಪ್ರಶ್ನೆ 'ಅ' ನಲ್ಲಿ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ	ಪ್ರಸ್ತುತ ಸಾರಿಗೆ ವ್ಯವಸ್ಥೆ ಪುನರಾರಂಭದೊಂದಿಗೆ ಸಾರ್ವಜನಿಕ ಸಂಚಾರ ಸೌಲಭ್ಯಗಳ ಕುರಿತಾದ ಕ್ರಮಗಳೇನು?	ಕ.ರಾ.ರ.ಸಾ ನಿಗಮದ ಸಾರಿಗೆ ವ್ಯವಸ್ಥೆಯ ಪುನರಾರಂಭದೊಂದಿಗೆ ಸಾರ್ವಜನಿಕ ಸಂಚಾರ ಸೌಲಭ್ಯಗಳ ಕುರಿತಾದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ.ನಿಗಮ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 702
ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್. ಕೆ. (ಸಕಲೇಶಪುರ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ) ಬೆಂಗಳೂರು ಮಹಾನಗರ ಪಾಲಿಕೆ ವಲಯದ ವ್ಯಾಪ್ತಿಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ಒದಗಿಸಲು ಒಂದು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ನಿರ್ಮಿಸಿದ್ದು, ಸದರಿ ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸುವ ಕಾರ್ಯಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ, 1950ರ ಪ್ರಕಾರ ಸ್ಥಾಪಿತವಾಗಿದ್ದು, ಸಾರ್ವಜನಿಕರಿಗೆ ಸೂಕ್ತ, ಸಮರ್ಪಕ, ದಕ್ಷ, ಹೆಚ್ಚಿನ ಆರ್ಥಿಕ ಹೊರೆಯಲ್ಲದ ಹಾಗೂ ಸುರಕ್ಷಿತ ಸಾರಿಗೆ ವ್ಯವಸ್ಥೆಯನ್ನು ನೀಡುವ ಜವಾಬ್ದಾರಿಯನ್ನು ಸಂಸ್ಥೆಯು ಹೊಂದಿರುತ್ತದೆ. ತತ್ಸಂಬಂಧ, ಮಂಡಳಿ ನಿರ್ದೇಶಕರು ತೆಗದುಕೊಳ್ಳುವ ಎಲ್ಲಾ ನಿರ್ಧಾರ / ನೀತಿಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯಾಗಿ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಡಿಡಿಪಿಇಆರ್ 35 ಎಆರ್‌ಯು 2003, ದಿನಾಂಕ 07.05.2003ರನ್ವಯ ವ್ಯವಸ್ಥಾಪಕ ನಿರ್ದೇಶಕರವರು ಬೆಂ.ಮ.ಸಾ.ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳಾಗಿದ್ದು ಅವರ ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತವೆ: 1) ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಕಾರ್ಯ ನಿರ್ವಾಹಕ ಮಂಡಳಿಯಿಂದ ಪ್ರದತ್ತವಾದ ಅಧಿಕಾರಗಳನ್ವಯ ಎಲ್ಲಾ ದೈನಂದಿನ ಕಾರ್ಯ ನಿರ್ವಹಣಾ ಮತ್ತು ವ್ಯವಸ್ಥಾಪಕ ಕರ್ತವ್ಯಗಳನ್ನು ನಿರ್ವಹಿಸುವುದು. 2) ಆಡಳಿತ ನಿರ್ವಾಹಕ ಮಂಡಳಿ ಸಭೆಗಳನ್ನು ಅಧ್ಯಕ್ಷರೊಂದಿಗೆ ಚರ್ಚಿಸಿ ಆಡಳಿತ ಮಂಡಳಿಯ ನಿರ್ವಾಹಕ ಸಭೆಗಳ ದಿನಾಂಕಗಳನ್ನು ಮುಂಚಿತವಾಗಿಯೇ ನಿರ್ಧರಿಸುವುದು. 3) ಸರ್ಕಾರ ಹೊರಡಿಸಿರುವ ಸರ್ಕಾರದ ಆದೇಶಗಳು ಸುತ್ತೋಲೆಗಳು ಮತ್ತಿತರ ಮಾರ್ಗದರ್ಶನಗಳು, ಅನುಷ್ಠಾನಗೊಳಿಸುವಂತೆ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಇರುತ್ತದೆ ಮತ್ತು ಸದರಿ ಸೂಚನೆಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ ಆಡಳಿತ ನಿರ್ವಾಹಕ ಮಂಡಳಿ ಸಭೆಯ ಮುಂದೆ ತರುವುದು. 4) ಸರ್ಕಾರದ ಸುತ್ತೋಲೆಗಳು, ಮಾರ್ಗದರ್ಶನಗಳು ಮತ್ತಿತರೆಡೆಗಳಲ್ಲಿ ಹೇಳಿರುವಂತೆ ಸಾರ್ವಜನಿಕ ಉದ್ದಿಮೆಗಳ ಹಾಗೂ ನಿರ್ದೇಶಕರುಗಳ ಪಾತ್ರ, ಕರ್ತವ್ಯ ಮತ್ತು ಜವಾಬ್ದಾರಿಯ ನಿರ್ವಹಣೆಯ ಕಾರ್ಯವನ್ನು ನಿಯಮಗಳು ಮತ್ತು ಸೂಚನೆಗಳ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದು. 5) ಸರ್ಕಾರವು ಹೊರಡಿಸಿರವ ಆದೇಶ, ನಿಯಮ ನಿಬಂಧನೆಗಳಿಗೆ ಬಹುಸಂಖ್ಯಾತ ನಿರ್ದೇಶಕರುಗಳ ಸಮ್ಮತಿ ಪಡೆಯಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಆಗದಿದ್ದಲ್ಲಿ ಅಥವಾ ತೆಗೆದುಕೊಳ್ಳುವ ನಿರ್ಧಾರವು ಈ ರೀತಿ ಹೊರಡಿಸುವ ಆದೇಶ, ನಿಯಮ ನಿಬಂಧನೆಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಅಥವಾ ಸಂಸ್ಥೆಯ ಹಣಕಾಸು ಮತ್ತು ವಾಣಿಜ್ಯ ಆಸಕ್ತಿಗಳಿಗೆ ವಿರುದ್ಧವಾಗಿದ್ದಲ್ಲಿ ಅಭಿಪ್ರಾಯ ಭೇದದ ಟಿಪ್ಪಣಿಯನ್ನು ನೀಡುವುದು ಮತ್ತು ಸದರಿ ವಿಷಯವನ್ನು ಸಂಬಂಧಿಸಿದ ಸನ್ನಿವೇಶಗಳ ವಿವರಣೆಗಳೊಂದಿಗೆ ಸರ್ಕಾರಕ್ಕೆ ಉಲ್ಲೇಖಿಸಿ ಸರ್ಕಾರದ ಆದೇಶವನ್ನು ಕೋರುವುದು. 6) ಸಂಸ್ಥೆಯು ಆರ್ಥಿಕವಾಗಿ ಸುಧಾರಿಸುವ ನಿಟ್ಟಿನಲ್ಲಿ ಕ್ರಿಯಾತ್ಮಕವಾದ ಕಾರ್ಯ ನಿರ್ವಹಿಸುವುದು ಪ್ರಮುಖ ಕರ್ತವ್ಯವಾಗಿರುತ್ತದೆ.

...2

ಆ.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಎಷ್ಟು ನಗರ ಸಾರಿಗೆ ಬಸ್ಸುಗಳು ಮಾರ್ಗದಲ್ಲಿ ಸಂಚರಿಸುತ್ತಿವೆ ಹಾಗೂ ಈ ಸಂಸ್ಥೆಯ ವ್ಯಾಪ್ತಿಯಲ್ಲಿ ಯಾವ ಯಾವ ರೀತಿಯ/ ಮಾದರಿಯ ಬಸ್ಸುಗಳನ್ನು ಓಡಿಸಲಾಗುತ್ತಿದೆ;	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಪ್ರತಿನಿತ್ಯ ಸರಾಸರಿ 5000 ಬಸ್ಸುಗಳು ಮಾರ್ಗದಲ್ಲಿ ಸಂಚರಿಸುತ್ತಿವೆ ಹಾಗೂ ಸಂಸ್ಥೆಯ ವ್ಯಾಪ್ತಿಯಲ್ಲಿ ಟಾಟಾ, ಲೇಲ್ಯಾಂಡ್, ಐಷರ್, ಕರೋನಾ ಮತ್ತು ವೋಲ್ವೋ ಮಾದರಿಯ ಬಸ್ಸುಗಳನ್ನು ಓಡಿಸಲಾಗುತ್ತಿದೆ.
ಇ.	ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಸಾರಿಗೆಯಲ್ಲಿ ಎಷ್ಟು ಜನ ಪ್ರಯಾಣಿಕರು ಪ್ರತಿನಿತ್ಯ ಪ್ರಯಾಣಿಸುತ್ತಾರೆ; ಕಳೆದ 3 ವರ್ಷಗಳಿಂದ ವ್ಯಾಪ್ತಿಯ ವಿಭಾಗಗಳು ಹಾಗೂ ಘಟಕಗಳವಾರು ಸಂಸ್ಥೆಗಳು ಗಳಿಸುತ್ತಿರುವ ಲಾಭ/ನಷ್ಟವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಾರಿಗೆಗಳಲ್ಲಿ ನವೆಂಬರ್-2020ರಲ್ಲಿ ಪ್ರತಿದಿನ ಸರಾಸರಿ 18 ಲಕ್ಷ ಪ್ರಯಾಣಿಕರು ಸಂಚರಿಸುತ್ತಿರುತ್ತಾರೆ. ಕಳೆದ 3 ವರ್ಷಗಳಿಂದ ಸಂಸ್ಥೆಯ ವ್ಯಾಪ್ತಿಯ ವಿಭಾಗಗಳು(ವಲಯಗಳು) ಮತ್ತು ಘಟಕಗಳ ಲಾಭ/ನಷ್ಟದ ವಿವರವನ್ನು **ಅನುಬಂಧ "ಅ"** ನಲ್ಲಿ ನೀಡಲಾಗಿದೆ.
ಈ.	ಈ ಸಂಸ್ಥೆಯು ನಷ್ಟ ಅನುಭವಿಸುತ್ತಿದ್ದಲ್ಲಿ, ನಷ್ಟ ಅನುಭವಿಸಲು ನಿಖರವಾದ ಕಾರಣಗಳೇನು; ಈ ಸಂಸ್ಥೆಯನ್ನು ನಷ್ಟದಿಂದ ಪಾರು ಮಾಡಿ ಲಾಭ ಗಳಿಸುವಂತೆ ಮಾಡಲು ಸರ್ಕಾರವು ಕೈಗೊಂಡಿರುವ ಮಾರ್ಗೋಪಾಯಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಸಂಸ್ಥೆಯ ಒಟ್ಟಾರೆ ವೆಚ್ಚದಲ್ಲಿ ಸುಮಾರು ಶೇ.80.0ರಷ್ಟು ಪಾಲು ಸಿಬ್ಬಂದಿ ವೆಚ್ಚ ಮತ್ತು ಇಂಧನ ವೆಚ್ಚಗಳಾಗಿರುತ್ತದೆ ಹಾಗೂ ಸಂಸ್ಥೆಯು ನಷ್ಟವನ್ನು ಅನುಭವಿಸಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣವಾಗಿರುತ್ತದೆ. ➢ ಪ್ರತಿ ವರ್ಷವು ಹೆಚ್ಚಾಗುತ್ತಿರುವ ಸಿಬ್ಬಂದಿ ವೆಚ್ಚ. ➢ ಪ್ರತಿ ಮಾಹೆ ಹೆಚ್ಚಾಗುತ್ತಿರುವ ಇಂಧನ ದರದಿಂದಾಗಿ ಅಧಿಕವಾಗುತ್ತಿರುವ ಇಂಧನ ವೆಚ್ಚ. ➢ ಉಗ್ರಾಣ ಸಾಮಗ್ರಿಗಳ ವೆಚ್ಚ ಹೆಚ್ಚಾಗಿರುವುದು. ➢ ಸಂಸ್ಥೆಯ ವಾಹನಗಳಲ್ಲಿ ಸಂಚರಿಸುತ್ತಿದ್ದ ಸುಮಾರು 5 ಲಕ್ಷ ಪ್ರಯಾಣಿಕರು ನಮ್ಮ ಮೆಟ್ರೋಗೆ ವರ್ಗಾವಣೆಗೊಂಡ ಪ್ರಯುಕ್ತ ಸಾರಿಗೆ ಆದಾಯ ಗಳಿಕೆಯಲ್ಲಿ ಇಳಿಮುಖವಾಗಿರುತ್ತದೆ. ➢ ಬೆಂಗಳೂರು ಮಹಾನಗರದಲ್ಲಿ ಓಲಾ, ಉಬರ್, ಇತರೇ ಕ್ಯಾಬ್‌ಗಳ ಕಾರ್ಯಾಚರಣೆಯಿಂದಾಗಿ ಸಾರಿಗೆ ಆದಾಯದ ಗಳಿಕೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ➢ ಸಂಸ್ಥೆಯು ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ ಒದಗಿಸಲು ಏಕಸ್ವಾಮ್ಯತೆಯನ್ನು ಹೊಂದಿರುತ್ತದೆ. ನಗರದಲ್ಲಿ ದಿನೇ ದಿನೇ ಖಾಸಗಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಸ್ಥೆಯ ಭೌತಿಕ ಅಂಶಗಳ ಗುರಿಯನ್ನು ಸಾಧಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆ. ➢ ಸಂಚಾರ ದಟ್ಟಣೆಯಿಂದ ನಿಗದಿತ ಕಿ.ಮೀ ಗಳ ಆಚರಣೆ ಕಷ್ಟ ಸಾಧ್ಯವಾಗಿದ್ದು, ವಾಹನಗಳ ಬಳಕೆ (Vehicle Utilisation) ಕಡಿಮೆಯಾಗಿರುತ್ತದೆ. ➢ ಸಂಸ್ಥೆಯು ತನ್ನ ಬಂಡವಾಳ ವೆಚ್ಚಗಳಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಪಡೆದಿದ್ದು, ಸಾಲಗಳ ಮೇಲಿನ ಬಡ್ಡಿಯು ಸಹ ನಷ್ಟಕ್ಕೆ ಕಾರಣವಾಗಿರುತ್ತದೆ.

		ಲಾಭ ಗಳಿಸುವಂತೆ ಮಾಡಲು ಸಂಸ್ಥೆಯ ವತಿಯಿಂದ ಕೈಗೊಂಡಿರುವ ಮಾರ್ಗೋಪಾಯಗಳು ಈ ಕೆಳಕಂಡತಿವೆ: ➢ ಸಾರ್ವಜನಿಕರನ್ನು ಸಮೂಹ ಸಾರಿಗೆಯತ್ತ ಸೆಳೆಯುವ ದೃಷ್ಟಿಯಿಂದ ಸಂಸ್ಥೆಯು ವಿವಿಧ ರೀತಿಯ ರಿಯಾಯಿತಿ ಪಾಸುಗಳನ್ನು ವಿತರಣೆ ಮಾಡುತ್ತಿದೆ. ➢ ಅಲ್ಲದೇ, ಸಂಸ್ಥೆಯು ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರು ನಗರದ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ 'ಸಹಾಯ ಹಸ್ತ' ಪಾಸನ್ನು ವಿತರಣೆ ಮಾಡುತ್ತಿದೆ. ➢ ಮಹಿಳಾ ಗಾರ್ಮೆಂಟ್ಸ್ ನೌಕರರಿಗೆ ಹೆಚ್ಚಿನ ರಿಯಾಯಿತಿ ದರದಲ್ಲಿ ಮಾಸಿಕ ಪಾಸುಗಳನ್ನು ವಿತರಣೆ ಮಾಡುವ ಸಂಬಂಧ ಪಾಸಿನ ವೆಚ್ಚವನ್ನು ಭರಿಸುವಂತೆ ಕೋರಿ ಸಂಸ್ಥೆಯಿಂದ ಕಾರ್ಮಿಕ ಇಲಾಖೆಯನ್ನು ಕೋರಲಾಗಿದೆ. ➢ ಸರ್ಕಾರ, ಬಿಬಿಎಂಪಿ, ಬಿಟಿಪಿ, ನಗರ ಭೂ ಸಾರಿಗೆ ನಿರ್ದೇಶನಾಲಯ ರವರುಗಳ ಸಹಯೋಗದೊಂದಿಗೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಟಿನ್ ಫ್ಯಾಕ್ಟರಿಯವರೆಗೆ 'ಬಸ್ ಆದ್ಯತಾ ಪಥವನ್ನು' ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದರಿಂದ ನಗರದ ಸಂಚಾರ ದಟ್ಟಣೆಯು ಕಡಿಮೆಯಾಗಿ, ಸಾರ್ವಜನಿಕರನ್ನು ಸಮೂಹ ಸಾರಿಗೆಯನ್ನು ಬಳಸಲು ಉತ್ತೇಜಿಸಲಾಗುತ್ತಿದೆ. ➢ ಮುಂದುವರೆದು, ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಹಿನ್ನಲೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆಯ 12 ಕಾರಿಡಾರ್‌ಗಳಲ್ಲಿ ಬಸ್ ಆದ್ಯತಾ ಪಥವನ್ನು 2ನೇ ಹಂತದಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ➢ ಸಂಸ್ಥೆಯು ಸಾಂದರ್ಭಿಕ ಒಪ್ಪಂದ, ಖಾಯಂ ಗುತ್ತಿಗೆ ಹಾಗೂ ಡೆಡಿಕೇಟೆಡ್ ಸೇವೆಗಳನ್ನು ಒದಗಿಸುತ್ತಿದೆ. ➢ ಮೆಟ್ರೋ ಪ್ರಯಾಣಿಕರನ್ನು ಸಂಸ್ಥೆಯ ಸಾರಿಗೆ ಸೌಲಭ್ಯದತ್ತ ಸೆಳೆಯಲು ಎಲ್ಲಾ ಮೆಟ್ರೋ ನಿಲ್ದಾಣಗಳಿಂದ ಮೆಟ್ರೋ ಫೀಡರ್ ಸೇವೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ➢ ಸಮೂಹ ಸಾರಿಗೆಯನ್ನು ಉತ್ತೇಜಿಸಲು ಹಾಗೂ ಮೆಟ್ರೋ ಪ್ರಯಾಣಿಕರಿಗೆ ಸಮರ್ಪಕ ಮೆಟ್ರೋ ಫೀಡರ್ ಸಾರಿಗೆ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ 90 ಎಲೆಕ್ಟ್ರಿಕ್ ಬಸ್ಸುಗಳನ್ನು ಸಂಸ್ಥೆಯ ವಾಹನ ಬಲಕ್ಕೆ ಸೇರ್ಪಡೆಗೊಳಿಸಲು ಯೋಜಿಸಲಾಗಿದೆ. ➢ ಭಾರತ ಸರ್ಕಾರದ ಫೇಮ್-2 ಅಡಿಯಲ್ಲಿ 300 ಹವಾನಿಯಂತ್ರಿತ ಬಸ್ಸುಗಳು ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ 90 ಮೆಟ್ರೋ ಫೀಡರ್ ಬಸ್ಸುಗಳು ಒಟ್ಟಾರೆ 390 ಬಸ್ಸುಗಳನ್ನು ಸಂಸ್ಥೆಯ ವಾಹನ ಬಲಕ್ಕೆ ಸೇರ್ಪಡೆಗೊಳಿಸಲು ಯೋಜಿಸಲಾಗಿದೆ. ➢ 643 ನೂತನ ಡೀಸಲ್ ಬಸ್ಸುಗಳನ್ನು ಸಂಸ್ಥೆಯ ವಾಹನ ಬಲಕ್ಕೆ ಸೇಪರ್ಡೆಗೊಳಿಸಲು ಯೋಜಿಸಲಾಗಿದೆ.

...4

ಉ.	ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿ.ಎಂ.ಟಿ.ಸಿ), ಬೆಂಗಳೂರು ಸಂಸ್ಥೆಯಿಂದ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿನ ಶಾಲಾ/ಕಾಲೇಜಿನ ವಿದ್ಯಾರ್ಥಿಗಳಿಗೆ, ಗಾರ್ಮೆಂಟ್ ಮತ್ತು ಕಾರ್ಖಾನೆಗಳಿಗೆ ತೆರಳುವ ಹೆಣ್ಣು ಮಕ್ಕಳಿಗೆ ರಿಯಾಯಿತಿ ದರದಲ್ಲಿ ಹೋಗಿ ಬರುವ ಬಸ್ ಪಾಸ್ ವ್ಯವಸ್ಥೆ ಮಾಡುವ ಬಗ್ಗೆ ಹಾಗೂ ಸಾರ್ವಜನಿಕರ ಸುಗಮ ಪ್ರಯಾಣಕ್ಕೆ ಉತ್ತಮ ಬಸ್ ಸೌಕರ್ಯವನ್ನು ಒದಗಿಸಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮತ್ತು ಎಲ್ಲಾ ತರಗತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಪಾಸುಗಳನ್ನು ಹಾಗೂ ಉಳಿದ ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸುಗಳನ್ನು ವಿತರಣೆ ಮಾಡುತ್ತಿದೆ. ಮುಂದುವರೆದು, 2020-21ನೇ ಸಾಲಿನ ಆಯವ್ಯಯದಲ್ಲಿ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಸುರಕ್ಷತೆ ಮತ್ತು ಭದ್ರತೆಯನ್ನು ಒದಗಿಸಲು ಹಾಗೂ ಆರ್ಥಿಕ ಸಹಾಯವನ್ನು ಮಾಡುವ ನಿಟ್ಟಿನಲ್ಲಿ ಒಂದು ಲಕ್ಷ ಮಹಿಳಾ ಕಾರ್ಮಿಕರಿಗೆ "ವನಿತಾ ಸಂಗಾತಿ" ಯೋಜನೆಯಡಿ ಮಾಸಿಕ ಬಸ್ ಪಾಸುಗಳನ್ನು ಕಾರ್ಖಾನೆಯ ಮಾಲೀಕರು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದೊಂದಿಗೆ ಒದಗಿಸಲು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.25.00 ಕೋಟಿಗಳ ಅನುದಾನವನ್ನು ಘೋಷಿಸಿದೆ. "ವನಿತಾ ಸಂಗಾತಿ" ಯೋಜನೆಯನ್ನು ಜಾರಿಗೊಳಿಸುವ ಕುರಿತು ಕಾರ್ಮಿಕ ಇಲಾಖೆಯಿಂದ ಆದೇಶ ಹೊರಡಿಸಿದ ನಂತರ ಪಾಸುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು. **ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೇವೆಯನ್ನು ಒದಗಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.** ➢ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ/ ಸೇರ್ಪಡೆಗೊಳಿಸಿ ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ➢ ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ/ ವಿಸ್ತರಣೆಯನ್ನು ಮಾಡಲಾಗುತ್ತಿದೆ. ➢ ಸಂಚಾರ ದಟ್ಟಣೆ ಸಮಯದಲ್ಲಿ ಹೆಚ್ಚು ಸುತ್ತುವಳಿಗಳನ್ನು ಅಳವಡಿಸಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ➢ ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile connectivity) ಮೆಟ್ರೋ ಫೀಡರ್ ಸೇವೆಗಳನ್ನು ಒದಗಿಸಲಾಗುತ್ತಿದೆ. ➢ ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವೆ ನಗದು ವ್ಯವಹಾರವನ್ನು ಕಡಿಮೆಗೊಳಿಸುವ ಹಾಗೂ ಚಿಲ್ಲರೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಪ್ರಯಾಣ ದರ ರೂ.5/-ರ ಗುಣಕದಲ್ಲಿ ನಿಗದಿಪಡಿಸಿ ಪುನರ್‌ರಚಿತ ಪ್ರಯಾಣ ದರಗಳನ್ನು ಆಕರಿಸಲಾಗುತ್ತಿದೆ. ➢ ನಗದು ವ್ಯವಹಾರವನ್ನು ಕಡಿಮೆಗೊಳಿಸಲು ಮತ್ತು ಸುಲಭವಾಗಿ ಹಣ ಸಂದಾಯಗೊಳಿಸಲು ಡಿಜಿಟಲ್ ಟಿಕೇಟಿಂಗ್ (QR code based) ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ➢ ಮಾಸಿಕ ಮತ್ತು ದಿನದ ಪಾಸುಗಳ ಜೊತೆಗೆ ವಾರದ ಪಾಸುಗಳನ್ನು ಪರಿಚಯಿಸಲಾಗಿರುತ್ತದೆ. ➢ ಸಂಸ್ಥೆಯ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರು, ನಿರ್ವಾಹಕರಿಗೆ ಹಾಗೂ ಪ್ರಯಾಣಿಕರಿಗೆ ಸಾಂಕ್ರಾಮಿಕ ರೋಗ ಹರಡದಂತೆ ಹಾಗೂ ಪ್ರಯಾಣಿಕರ ಸುರಕ್ಷತೆಯ ನಿಟ್ಟಿನಲ್ಲಿ ಬಸ್ಸುಗಳಲ್ಲಿ ಶುಚಿತ್ವವನ್ನು ಕಾಪಾಡಲು, ಸೋಂಕು ನಿವಾರಣಾ ಔಷಧಿಗಳನ್ನು ಸಿಂಪಡಿಸಿ ಶುಚಿಗೊಳಿಸಲಾಗುತ್ತಿದೆ.

		➢ ಚಾಲನಾ ಸಿಬ್ಬಂದಿಗಳಿಂದ ಕೋವಿಡ್-19 ಸಾಂಕ್ರಾಮಿಕ ರೋಗ ಹರಡದಂತೆ ತಡೆಗಟ್ಟಲು ಅವಶ್ಯವಿರುವ ಮುಖಗವಸು ಮತ್ತು ಸ್ಯಾನಿಟೈಸರ್‌ಗಳನ್ನು ಸರಬರಾಜುಗೊಳಿಸಲಾಗಿರುತ್ತದೆ. ಕರ್ತವ್ಯದ ಅವಧಿಯಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸನ್ನು ಧರಿಸುವಂತೆ ಹಾಗೂ ಸ್ಯಾನಿಟೈಸರ್ ಬಳಸಿ ಕೈಗಳ ಶುಚಿತ್ವವನ್ನು ಕಾಪಾಡಿಕೊಳ್ಳುವಂತೆ ತಿಳಿಸಲಾಗಿರುತ್ತದೆ. ➢ ಸಾರ್ವಜನಿಕ ಪ್ರಯಾಣಿಕರೊಂದಿಗೆ ಅಂತರ ಕಾಪಾಡಿಕೊಳ್ಳಲು, ಚಾಲಕರಿಗೆ ಪ್ರತ್ಯೇಕ ಕ್ಯಾಬೀನ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ➢ ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಉದ್ಘೋಷಣೆ ವ್ಯವಸ್ಥೆ ಮೂಲಕ ಕೋವಿಡ್-19 ಸೋಂಕು ನಿಯಂತ್ರಣದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
ಊ.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಕಳೆದ 3 ವರ್ಷಗಳಲ್ಲಿ ಖರೀದಿಸಿದ ಬಸ್‌ಗಳೆಷ್ಟು; ಯಾವ ಯಾವ ಮಾದರಿಯ ಬಸ್‌ಗಳನ್ನು ಖರೀದಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಕಳೆದ 03 ವರ್ಷಗಳಲ್ಲಿ ಬೆಂ.ಮ.ಸಾ.ಸಂಸ್ಥೆಯಲ್ಲಿ ಖರೀದಿಸಿರುವ ಹೊಸ ಬಸ್‌ಗಳ ವಿವರಗಳು ಈ ಕೆಳಕಂಡಂತಿರುತ್ತವೆ (see table below)

ಕ್ರ.ಸಂ.	ಮಾದರಿ	2017-18	2018-19	2019-20
1	ಟಾಟಾ ಬಿ.ಎಸ್-4	766	249	347
2	ಐಷರ್ ಬಿ.ಎಸ್-4	268	43	2
3	ಟಾಟಾ ಮಿಡಿ	292	0	0
4	ವೋಲ್ವೋ ಬಿ.ಎಸ್-4	80	0	9
5	ವೋಲ್ವೋ ಹೈಬ್ರಿಡ್	0	0	1
	ಒಟ್ಟು	1406	292	359

ಋ	ಮುಂಬರುವ ವರ್ಷಗಳಲ್ಲಿ ಸಂಸ್ಥೆಯು ನಗರದಲ್ಲಿ ಸುಸಜ್ಜಿತ ಸಾರಿಗೆ ವ್ಯವಸ್ಥೆಯನ್ನು ಒದಗಿಸಲು ಬಸ್‌ಗಳನ್ನು ಖರೀದಿಸಲು ತೀರ್ಮಾನಿಸಿರುವ ಹಾಗೂ ಉದ್ದೇಶಿಸಿರುವ ಯೋಜನೆಗಳೇನು? (ಸಂಪೂರ್ಣ ವಿವರಗಳನ್ನು ಒದಗಿಸುವುದು)	2020-21ನೇ ಸಾಲಿನಲ್ಲಿ 643 ಬಿ.ಎಸ್-6 ಡೀಸೆಲ್ ಇಂಧನದ ಸಾಮಾನ್ಯ ವಾಹನಗಳನ್ನು ಖರೀದಿಸಲು ಯೋಜಿಸಲಾಗಿದ್ದು ಹಾಗೂ ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆ, ಫೇಮ್-2 ಯೋಜನೆಯಡಿಯಲ್ಲಿ 300 ಎಲೆಕ್ಟ್ರಿಕ್ ಬಸ್ಸುಗಳನ್ನು GCC Model ಆಧಾರದ ಮೇಲೆ ಹಾಗೂ ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ 90 ಎಲೆಕ್ಟ್ರಿಕ್ ಬಸ್ಸುಗಳನ್ನು GCC Model ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಟೆಂಡರ್ ಆಹ್ವಾನಿಸಿದ್ದು ಪ್ರಗತಿಯಲ್ಲಿರುತ್ತದೆ. 2021-22ನೇ ಸಾಲಿನಲ್ಲಿ 1500 ಬಿ.ಎಸ್-6 ಡೀಸೆಲ್ ಇಂಧನದ ಸಾಮಾನ್ಯ ವಾಹನಗಳನ್ನು ಖರೀದಿಸಲು ಯೋಜಿಸಲಾಗಿರುತ್ತದೆ.

ಸಂಖ್ಯೆ: ಟಿಡಿ 242 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಶ್ರೀ. ಕುಮಾರಸ್ವಾಮಿ ಹೆಚ್.ಕೆ., ಮಾನ್ಯ ವಿಧಾನ ಸಭಾ ಸದಸ್ಯರು(ಸಕಲೇಶಪುರ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ 702(ಇ)ಕ್ಕೆ ಉತ್ತರದ ಅನುಬಂಧ

ಅನುಬಂಧ "ಅ"

ಘಟಕ		ಲಾಭ/ನಷ್ಟ (ಲಕ್ಷ ರೂ.ಗಳಲ್ಲಿ) 2017-18	ಲಾಭ/ನಷ್ಟ (ಲಕ್ಷ ರೂ.ಗಳಲ್ಲಿ) 2018-19	ಲಾಭ/ನಷ್ಟ (ಲಕ್ಷ ರೂ.ಗಳಲ್ಲಿ) 2019-20
6	ಇಂದಿರಾನಗರ	-449.71	-958.37	-1266.03
15	ಕೋರಮಂಗಲ	60.86	-345.87	-768.81
19	ಎಲೆಕ್ಟ್ರಾನಿಕ್ ಸಿಟಿ	96.14	-278.43	-636.72
27	ಜಿಗಣಿಇ	163.19	-312.21	-872.55
32	ಸೂರ್ಯನಗರ	427.73	62.99	-460.01
38	ಚಿಕ್ಕನಾಗಮಂಗಲ	297.39	86.41	-463.04
41	ಗುಂಜೂರು	464.34	137.18	-505.37
	ಪೂರ್ವ ವಲಯ	**1059.95**	**-1608.30**	**-4972.53**
12	ಕೆಂಗೇರಿ-1	-596.83	-956.19	-1578.30
16	ದೀಪಾಂಜಲಿನಗರ	-1132.33	-1526.93	-1931.91
17	ಚಂದ್ರ ಲೇ-ಔಟ್	-798.21	-1122.79	-1622.82
21	ರಾಜರಾಜೇಶ್ವರಿ ನಗರ	-254.34	-764.56	-1525.19
31	ಶ್ರೀಗಂಧದಕಾವಲು	-1145.53	-1595.08	-2140.23
35	ಕನ್ನಲ್ಲಿ (ಮಾಗಡಿ ರಸ್ತೆ)	-321.68	-580.79	-1089.91
36	ಬಿಡದಿ	-125.71	-348.81	-636.46
37	ಕೆಂಗೇರಿ-2 ಟಿ.ಟಿ.ಎಂ.ಸಿ.	-432.10	-838.65	-1314.17
	ಪಶ್ಚಿಮ ವಲಯ	**-4806.73**	**-7733.80**	**-11838.99**
8	ಯಶವಂತಪುರ-1	-1225.76	-1590.09	-1982.68
9	ಪೀಣ್ಯಾ-1	-816.24	-1298.14	-2007.58
11	ಯಲಹಂಕ-1	-506.79	-798.90	-1391.78
22	ಪೀಣ್ಯಾ-2	-694.08	-1128.19	-1775.57
26	ಯಶವಂತಪುರ-2	-973.55	-1321.47	-1955.99
30	ಯಲಹಂಕ-2	-315.04	-754.98	-1450.51
40	ದಾಸನಪುರ	-253.67	-543.01	-979.28
43	ಶಿವನಪುರ	-46.21	-307.10	-615.66
45	ಎಂ.ಎಸ್.ಪಾಳ್ಯ	-256.89	-604.77	-1211.67
46	ಸಾದೇನಹಳ್ಳಿ	-130.31	-197.77	-581.47
	ಉತ್ತರ ವಲಯ	**-5218.52**	**-8544.43**	**-13952.18**
2	ಶಾಂತಿನಗರ	-641.11	-1298.82	-1805.05
3	ಶಾಂತಿನಗರ	-226.36	-798.06	-1271.36
4	ಜಯನಗರ	-807.30	-1484.16	-1852.38
20	ಬನಶಂಕರಿ	-820.00	-1275.59	-1876.69
33	ಪೂರ್ಣಪ್ರಜ್ಞ ನಗರ	-533.45	-941.73	-1599.51
34	ಕೊತ್ತನೂರು ದಿಣ್ಣೆ	-294.00	-687.52	-1383.29
44	ಅಂಜನಾಪುರ	-154.50	-264.34	-497.95

10	ಹೆಣ್ಣೂರು ಬಾಣಸವಾಡಿ	199.45	-620.66	-1273.38
14	ಆರ್.ಟಿ.ನಗರ	-708.99	-352.46	-714.42
23	ಕಲ್ಯಾಣನಗರ	-374.22	-59.91	-423.87
24	ದೂರವಾಣಿ ನಗರ	-62.54	71.97	-670.66
29	ಕೆ.ಆರ್. ಪುರಂ	152.15	-	-
39	ಹೊಸಕೋಟೆ	-39.56	-375.31	-935.86
47	ಮಂಡೂರು	-40.96	34.24	-469.86
48	ಬೈರತಿ	–	-279.91	-672.76
	ಈಶಾನ್ಯ ವಲಯ	**-874.66**	**-1582.04**	**-5160.81**
7	ಸುಭಾಷ್‌ನಗರ	-2449.14	-2393.08	-2022.21
13	ಕತ್ತರಿಗುಪ್ಪೆ	-2408.74	-2560.65	-2703.77
18	ವೈಟ್ ಫೀಲ್ಡ್	-248.43	-40.39	-332.85
25	ಹೆಚ್.ಎಸ್.ಆರ್. ಲೇಔಟ್	-1169.97	-1477.23	-1297.06
28	ಹೆಬ್ಬಾಳ	-2168.54	-2100.58	-1985.60
29	ಕೆ.ಆರ್. ಪುರಂ	-	-158.02	-381.76
	ಕೇಂದ್ರೀಯ ವಲಯ	**-8444.82**	**-8729.95**	**-8723.26**
	ಒಟ್ಟಾರೆ ಸಂಸ್ಥೆ	**-21761.49**	**-34948.74**	**-54934.00**

ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 625
ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿರುವ ಸಾರ್ವಜನಿಕರ ಅನುಕೂಲಕ್ಕಾಗಿ ಸುಸಜ್ಜಿತವಾಗಿರುವ ಒಟ್ಟು ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು;	ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಸ್ತುತ ಸಾರ್ವಜನಿಕ ಉಪಯೋಗಕ್ಕೆ ಒಟ್ಟು 11 ಸುಸಜ್ಜಿತವಾಗಿರುವ ಬಸ್ ನಿಲ್ದಾಣಗಳು ಇರುತ್ತವೆ.
ಆ.	ಹೊಸದಾಗಿ ಬಸ್ ನಿಲ್ದಾಣಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ; ಇದ್ದಲ್ಲಿ ವಿವರಗಳನ್ನು ನೀಡುವುದು;	ಯಲಬುರ್ಗಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಬಸ್ ನಿಲ್ದಾಣಗಳನ್ನು ಪ್ರಾರಂಭಿಸುವ ಯೋಜನೆ ಇರುವುದಿಲ್ಲ.
ಇ.	ಯಲಬುರ್ಗಾ ಕ್ಷೇತ್ರದ ಬೇವೂರು, ಹಿರೇವಂಕಲಕುಂಟಾ ಗ್ರಾಮಗಳಲ್ಲಿನ ಬಸ್ ನಿಲ್ದಾಣವು ಅವೈಜ್ಞಾನಿಕತೆಯಿಂದ ಕೂಡಿದ್ದು, ಸದ್ಯ ಸಾರ್ವಜನಿಕ ಉಪಯೋಗಕ್ಕೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಲಬುರ್ಗಾ ಕ್ಷೇತ್ರದ ಬೇವೂರು ಬಸ್ ನಿಲ್ದಾಣನ್ನು ತಾಲ್ಲೂಕು ಪಂಚಾಯತ್ ವತಿಯಿಂದ 30 ಗುಂಟೆ ನಿವೇಶನದಲ್ಲಿ ನಿರ್ಮಿಸಿ ಸಂಸ್ಥೆಗೆ ಹಸ್ತಾಂತರಿಸಲಾಗಿರುತ್ತದೆ. ಈ ಬಸ್ ನಿಲ್ದಾಣವನ್ನು ಸಾರ್ವಜನಿಕ ಪ್ರಯಾಣಿಕರು ಉಪಯೋಗಿಸುತ್ತಿದ್ದು, ಈ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನ ಬಿಡುಗಡೆ ಮಾಡುವಂತೆ ಕೋರಲಾಗಿದ್ದು, ಅನುದಾನ ಬಿಡುಗಡೆಯಾದ ನಂತರ ಸದರಿ ಬಸ್ ನಿಲ್ದಾಣ ಅಭಿವೃದ್ಧಿಪಡಿಸಲಾಗುವುದು. ಹಿರೇವಂಕಲಕುಂಟಾ ಬಸ್ ನಿಲ್ದಾಣವನ್ನು ಒಂದು ಎಕರೆ ನಿವೇಶನದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ನಿರ್ಮಿಸಲಾಗಿರುತ್ತದೆ. ಸದರಿ ನಿವೇಶನ ಸಂಸ್ಥೆಯ ಹೆಸರಿಗೆ ಹಸ್ತಾಂತರಿಸಿರುವುದಿಲ್ಲ. ಈ ಬಸ್ ನಿಲ್ದಾಣವು ಮುಖ್ಯ ರಸ್ತೆಯಿಂದ ಅರ್ಧ ಕಿ.ಮೀ. ಅಂತರದಲ್ಲಿರುವುದರಿಂದ ಪ್ರಯಾಣಿಕರು ಸದರಿ ಬಸ್ ನಿಲ್ದಾಣವನ್ನು ಅಷ್ಟಾಗಿ ಉಪಯೋಗಿಸುತ್ತಿರುವುದಿಲ್ಲ. ಮುಂಬರುವ ದಿನಗಳಲ್ಲಿ ಈ ಬಸ್ ನಿಲ್ದಾಣವನ್ನು ಪರಿಶೀಲಿಸಿ ಅಭಿವೃದ್ಧಿಪಡಿಸಲಾಗುವುದು.
ಈ.	ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು? ಸದರಿ ಗ್ರಾಮಗಳಲ್ಲಿ ಹೊಸದಾಗಿ ಬಸ್ ನಿಲ್ದಾಣ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;	

ಸಂಖ್ಯೆ: ಟಿಡಿ 227 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 671

ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ (ಆನೇಕಲ್)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-12-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಆನೇಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಂಡಿರುವ ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ಬಸ್ ಮಾರ್ಗಗಳಾವುವು (ಪೂರ್ಣ ಮಾಹಿತಿ ನೀಡುವುದು);	**ಕ.ರಾ.ರ.ಸಾ.ನಿಗಮ** ಆನೇಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿಗಮದ ವತಿಯಿಂದ ಕಾರ್ಯಾಚರಿಸುತ್ತಿದ್ದ ಅನುಸೂಚಿಗಳಲ್ಲಿ ಕಳೆದ 2 ವರ್ಷದ ಅವಧಿಯಲ್ಲಿ ಆನೇಕಲ್- ಬನ್ನೇರುಘಟ್ಟ- ಕಗ್ಗಲೀಪುರ- ರಾಮನಗರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಆನೇಕಲ್ ಘಟಕದ ಅನುಸೂಚಿ ಸಂಖ್ಯೆ-12ರ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಮುಂದುವರೆದಂತೆ, ಕೋವಿಡ್-19 ರೋಗ ಹರಡುವಿಕೆ ನಿಯಂತ್ರಣದ ಹಿನ್ನೆಲೆಯಲ್ಲಿ ಲಾಕ್‌ಡೌನ್ ಘೋಷಿಸಿದ್ದರಿಂದ ಎಲ್ಲಾ ಸಾರಿಗೆಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಿದ್ದು, ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿದೆ. ಹಾಲಿ ಆನೇಕಲ್ ಘಟಕದ ವತಿಯಿಂದ 64 ಅನುಸೂಚಿಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗಿದೆ. **ಬೆಂ.ಮ.ಸಾ.ಸಂಸ್ಥೆ** ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಳಿಸಲಾಗಿರುವ ಬಿ.ಎಂ.ಟಿ.ಸಿ ಸಾರಿಗೆಗಳ ವಿವರಗಳು ಕೆಳಕಂಡಂತಿವೆ. ವರ್ಷ — ಸ್ಥಗಿತಗೊಳಿಸಲಾದ ಸಾರಿಗೆಗಳ ಸಂಖ್ಯೆ 2019-20 — 5 2020-21 — 42 ಸ್ಥಗಿತಗೊಳಿಸಿರುವ ಸಾರಿಗೆಗಳ ಮಾಹಿತಿಯನ್ನು ಅನುಬಂಧ-"ಅ" ರಲ್ಲಿ ಅಡಕಗೊಳಿಸಲಾಗಿದೆ

ವರ್ಷ	ಸ್ಥಗಿತಗೊಳಿಸಲಾದ ಸಾರಿಗೆಗಳ ಸಂಖ್ಯೆ
2019-20	5
2020-21	42

...2

ಆ.	ಬಿ.ಎಂ.ಟಿ.ಸಿ ಹಾಗೂ ಕೆ.ಎಸ್.ಆರ್.ಟಿ.ಸಿ ವತಿಯಿಂದ ಸ್ಥಗಿತಗೊಳಿಸಿರುವ ಬಸ್ ಮಾರ್ಗಗಳನ್ನು ಪುನಃ ಆರಂಭಿಸುವ ಯೋಚನೆ ಸರ್ಕಾರಕ್ಕೆ ಇದೆಯೇ (ಮಾಹಿತಿ ನೀಡುವುದು);	**ಕ.ರಾ.ರ.ಸಾ.ನಿಗಮ** ಆನೇಕಲ್- ಬನ್ನೇರುಘಟ್ಟ- ಕಗ್ಗಲೀಪುರ-ರಾಮನಗರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಆನೇಕಲ್ ಘಟಕದ ಅನುಸೂಚಿ ಸಂಖ್ಯೆ-12ರ ಕಾರ್ಯಾಚರಣೆಯನ್ನು ಪುನರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ. ಇನ್ನುಳಿದಂತೆ, ಕೋವಿಡ್-19 ರೋಗ ಹರಡುವಿಕೆ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಿರುವ ಅನುಸೂಚಿಗಳನ್ನು ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜು ಪ್ರಾರಂಭವಾಗಿ, ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಅವಶ್ಯವಿರುವ ಸಾರಿಗೆಗಳ ಕಾರ್ಯಾಚರಣೆಯನ್ನು ಹಂತ ಹಂತವಾಗಿ ಪುನರಾರಂಭಿಸಲಾಗುತ್ತದೆ. **ಬೆಂ.ಮ.ಸಾ.ಸಂಸ್ಥೆ** ಸ್ಥಗಿತಗೊಳಿಸಲಾಗಿರುವ ಮಾರ್ಗ/ಪ್ರದೇಶಗಳಲ್ಲಿ ಪರ್ಯಾಯ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ. 2020-21ನೇ ಸಾಲಿನಲ್ಲಿ ಕೋವಿಡ್-19 ಸೋಂಕು ಹಿನ್ನೆಲೆಯಲ್ಲಿ, ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಹಂತ ಹಂತವಾಗಿ ಸಾರಿಗೆಗಳನ್ನು ಸೇರ್ಪಡೆಗೊಳಿಸಲಾಗುತ್ತಿದೆ.
ಇ.	ಬಿ.ಎಂ.ಟಿ.ಸಿ ಹಾಗೂ ಕೆ.ಎಸ್.ಆರ್.ಟಿ.ಸಿ ಯಲ್ಲಿ ಈ ಹಿಂದೆ ಚಾಲ್ತಿಯಲ್ಲಿದ್ದ ಬಸ್ ಮಾರ್ಗಗಳನ್ನು ಸ್ಥಗಿತಗೊಳಿಸಲು ಕಾರಣಗಳೇನು (ಪೂರ್ಣ ಮಾಹಿತಿ ನೀಡುವುದು)?	**ಕ.ರಾ.ರ.ಸಾ.ನಿಗಮ** ಆನೇಕಲ್- ಬನ್ನೇರುಘಟ್ಟ- ಕಗ್ಗಲೀಪುರ- ರಾಮನಗರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಆನೇಕಲ್ ಘಟಕದ ಅನುಸೂಚಿ ಸಂಖ್ಯೆ-12ಕ್ಕೆ ಸಾರ್ವಜನಿಕ ಪ್ರಯಾಣಿಕರಿಂದ ಉತ್ತೇಜನ ದೊರೆಯದೇ ಪ್ರಯಾಣಿಕರ ಕೊರತೆಯುಂಟಾಗಿ ಸಾರಿಗೆಯು ನಷ್ಟದಲ್ಲಿ ಕಾರ್ಯಾಚರಣೆ ಆಗುತ್ತಿದ್ದುದರಿಂದ ಕಡಿತಗೊಳಿಸಲಾಗಿದೆ. ಕೋವಿಡ್-19 ರೋಗ ಹರಡುವಿಕೆ ಹಿನ್ನೆಲೆಯಲ್ಲಿ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಿರುವುದರಿಂದ ಇನ್ನುಳಿದ ಅನುಸೂಚಿಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. **ಬೆಂ.ಮ.ಸಾ.ಸಂಸ್ಥೆ** ಪ್ರಯಾಣಿಕರ ವಿರಳ ಸಂಚಾರ ಹಾಗೂ ನಿರೀಕ್ಷಿತ ಸಾರಿಗೆ ಆದಾಯವಿಲ್ಲದ ಕಾರಣ ಅನುಸೂಚಿಗಳನ್ನು ಸ್ಥಗಿತಗೊಳಿಸಲಾಗಿದೆ. ಸ್ಥಗಿತಗೊಳಿಸಲಾದ ಮಾರ್ಗ/ ಪ್ರದೇಶಗಳಲ್ಲಿ ಪ್ರಯಾಣಿಕರ ದಟ್ಟಣೆಗನುಗುಣವಾಗಿ ಪರ್ಯಾಯ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ. ಮುಂದುವರೆದು, ಹೊಸ ಸಾರಿಗೆಗಳನ್ನು ಪರಿಚಯಿಸುವುದು, ಪ್ರಯಾಣಿಕರ ಸಂಚಾರ ಅಧಿಕವಾಗಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಹಾಗೂ ಪ್ರಯಾಣಿಕರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸುವ ಪ್ರಕ್ರಿಯೆಯು ಸಂಸ್ಥೆಯಲ್ಲಿ ನಿರಂತರವಾಗಿ ಜಾರಿಯಲ್ಲಿರುತ್ತದೆ.

ಸಂಖ್ಯೆ: ಟಿಡಿ 239 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ "ಅ"

2019-20 ನೇ ಸಾಲಿನಲ್ಲಿ ಸ್ಥಗಿತಗೊಂಡಿರುವ ಅನುಸೂಚಿಗಳ ವಿವರಗಳು

ಕ್ರ.ಸಂ.	ಘಟಕ	ಅನುಸೂಚಿ ಸಂಖ್ಯೆ	ಇಂದ	ವರೆಗೆ
1	41	323C/1	ಕೃ.ರಾ.ಮಾರುಕಟ್ಟೆ	ತತ್ತನೂರು
2	27	366ZA/1	ಕೃ.ರಾ.ಮಾರುಕಟ್ಟೆ	ಆನೇಕಲ್
3	32	361A/1	ಕೃ.ರಾ.ಮಾರುಕಟ್ಟೆ	ಸೊಪ್ಪಹಳ್ಳಿ
4	21	600/15	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
5	21	601/2	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ

2020-21 ನೇ ಸಾಲಿನಲ್ಲಿ ಸ್ಥಗಿತಗೊಂಡಿರುವ ಅನುಸೂಚಿಗಳ ವಿವರಗಳು

ಕ್ರ.ಸಂ.	ಘಟಕ	ಅನುಸೂಚಿ ಸಂಖ್ಯೆ	ಇಂದ	ವರೆಗೆ
1	2	KBS3A/47	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
2	3	342F/14	ಕೆಂಪೇಗೌಡ ಬಸ್ ನಿಲ್ದಾಣ	ಸರ್ಜಾಪುರ
3	3	KBS3A/57	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
4	15	342F/2	ಕೆಂಪೇಗೌಡ ಬಸ್ ನಿಲ್ದಾಣ	ಸರ್ಜಾಪುರ
5	15	360K/26	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
6	19	KBS3A/45	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
7	19	KBS3A/46	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
8	20	600F/54	ಬನಶಂಕರಿ ಬಸ್ ನಿಲ್ದಾಣ	ಅತ್ತಿಬೆಲೆ
9	32	600F/55	ಬನಶಂಕರಿ ಬಸ್ ನಿಲ್ದಾಣ	ಅತ್ತಿಬೆಲೆ
10	32	KBS3A/59	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
11	38	360K/22	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
12	38	KBS3A/54	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
13	21	601/1	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
14	21	601/11	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
15	3	342A/6	ಕೃ.ರಾ.ಮಾರುಕಟ್ಟೆ	ಸರ್ಜಾಪುರ
16	3	342M/2	ಕೃ.ರಾ.ಮಾರುಕಟ್ಟೆ	ಗುಂಡೂರು
17	3	342F/17	ಕೆಂಪೇಗೌಡ ಬಸ್ ನಿಲ್ದಾಣ	ಸರ್ಜಾಪುರ
18	15	360K/27	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
19	19	360F/1	ಶಿವಾಜಿನಗರ ಬಸ್ ನಿಲ್ದಾಣ	ಅತ್ತಿಬೆಲೆ
20	32	399B/1	ಸೆಂಟ್‌ಜಾನ್ಸ್ ಆಸ್ಪತ್ರೆ	ಸೆಂಟ್‌ಜಾನ್ಸ್ ಆಸ್ಪತ್ರೆ
21	38	342N/1	ಕೃ.ರಾ.ಮಾರುಕಟ್ಟೆ	ಕೊಮ್ಮಸಂದ್ರ
22	21	600F/39	ಬನಶಂಕರಿ ಬಸ್ ನಿಲ್ದಾಣ	ಅತ್ತಿಬೆಲೆ
23	17	360/2	ಕೃ.ರಾ.ಮಾರುಕಟ್ಟೆ	ಅತ್ತಿಬೆಲೆ
24	9	356M/16	ಕೆಂಪೇಗೌಡ ಬಸ್ ನಿಲ್ದಾಣ	ಆನೇಕಲ್
25	30	365M/2	ಯಲಹಂಕ 5ನೇ ಹಂತ	ಬನ್ನೇರುಘಟ್ಟ ಮೃಗಾಲಯ
26	20	KBS3A/18	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
27	34	600F/86	ಬನಶಂಕರಿ ಬಸ್ ನಿಲ್ದಾಣ	ಅತ್ತಿಬೆಲೆ
28	34	KBS3A/70	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
29	34	KBS3A/71	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
30	34	KBS3A/72	ಕೆಂಪೇಗೌಡ ಬಸ್ ನಿಲ್ದಾಣ	ಅತ್ತಿಬೆಲೆ
31	47	328HG/1	ಅತ್ತಿಬೆಲೆ	ದೇವನಹಳ್ಳಿ

32	47	328HG/2	ಅತ್ತಿಬೆಲೆ	ದೇವನಹಳ್ಳಿ
33	47	328HE/1	ಕೆ.ಆರ್.ಪುರಂ	ಅತ್ತಿಬೆಲೆ
34	48	328HS/1	ಬಾಗಲೂರು	ಅತ್ತಿಬೆಲೆ
35	48	328HS/2	ಬಾಗಲೂರು	ಅತ್ತಿಬೆಲೆ
36	48	328HS/3	ಬಾಗಲೂರು	ಅತ್ತಿಬೆಲೆ
37	48	328HY/1	ಯಲಹಂಕ	ಅತ್ತಿಬೆಲೆ
38	38	600/2	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
39	38	600/3	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
40	38	600/4	ಬನಶಂಕರಿ ಬಸ್ ನಿಲ್ದಾಣ	ಬನಶಂಕರಿ ಬಸ್ ನಿಲ್ದಾಣ
41	38	342SH/2	ಸೆಂಟ್‌ಜಾನ್ಸ್ ಆಸ್ಪತ್ರೆ	ಸೆಂಟ್‌ಜಾನ್ಸ್ ಆಸ್ಪತ್ರೆ
42	27	398/1	ಚಂದಾಪುರ	ಹಾರೋಹಳ್ಳಿ

Chief Traffic Manager (Opn)
BMTC

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 627
ಉತ್ತರ ದಿನಾಂಕ : 09.12.2020

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಮಗ್ರ ಕುಡಿಯುವ ನೀರಿನ ಯೋಜನೆ "ಜಲಧಾರೆ"ಯನ್ನು ರಾಜ್ಯ ಸರ್ಕಾರವು ಕೈಗೊಂಡಿರುವುದು ನಿಜವೇ;	ಹೌದು
ಆ)	ಸದರಿ ಯೋಜನೆಯ ರೂಪು-ರೇಷೆಗಳೇನು; ಸದರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿಯನ್ನು ನೀಡುವುದು)	ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಸುಸ್ಥಿರ ಮೇಲ್ಮೈ ಜಲಸಂಪನ್ಮೂಲಗಳಾದ ನದಿ ಹಾಗೂ ಜಲಾಶಯಗಳಿಂದ ನೀರನ್ನು ಪಡೆದು ಶುದ್ಧೀಕರಿಸಿ ತಲಾ 55 ಲೀಟರ್‌ನಂತೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಜಲಧಾರೆ ಯೋಜನೆಯ ರೂಪು-ರೇಷೆಯಾಗಿರುತ್ತದೆ. ವಿಜಯಪುರ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಹಾಗೂ ಮಂಡ್ಯ ಜಿಲ್ಲೆಯ 3 ತಾಲ್ಲೂಕುಗಳನ್ನು (ಪಾಂಡವಪುರ, ನಾಗಮಂಗಲ ಮತ್ತು ಕೆ.ಆರ್.ಪೇಟೆ) ಮೊದಲನೇ ಹಂತದಲ್ಲಿ ಆಯ್ಕೆ ಮಾಡಿದ್ದು, ಯೋಜನೆಯ ಪ್ರಾಥಮಿಕ ಯೋಜನಾ ವರದಿಗಳು ಪರಿಶೀಲನಾ ಹಂತದಲ್ಲಿದೆ.
ಇ)	ಸದರಿ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಿ, ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗುವುದು ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಸಮಾಲೋಚಕರಿಂದ ತಯಾರಿಸಿದ PSR ನ್ನು ಇಲಾಖೆಯಲ್ಲಿ ಪರಿಶೀಲಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಮುಖಾಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ಕೇಂದ್ರ ಸರ್ಕಾರ ಘೋಷಿಸಿರುವ ಜಲಜೀವನ್ ಮಿಷನ್ ಅಡಿ ರಾಜ್ಯ ಸರ್ಕಾರದ ಯೋಜನೆಯಾದ ಮನೆ ಮನೆಗೆ ಗಂಗೆಯಿಂದ ಕಾರ್ಯಾತ್ಮಕ ನಳದ ನೀರು ಸಂಪರ್ಕವನ್ನು ನೀಡಿ ಶುದ್ಧ ಕುಡಿಯುವ ನೀರನ್ನು 2023ನೇ ಸಾಲಿನ ಅಂತ್ಯದೊಳಗೆ ಒದಗಿಸಲು ಉದ್ದೇಶಿಸಲಾಗಿದೆ.
ಈ)	ಈ ಯೋಜನೆಯ ವ್ಯಾಪ್ತಿಗೆ ವಿಜಯಪುರ ಜಿಲ್ಲೆಯ ಯಾವ ಯಾವ ನಗರ-ಪಟ್ಟಣ-ಗ್ರಾಮಗಳು-ವಸತಿ ಪ್ರದೇಶಗಳು ಒಳಪಡಲಿವೆ; (ವಿವರ ಒದಗಿಸುವುದು)	ವಿಜಯಪುರ ಜಿಲ್ಲೆಯ, ಪಟ್ಟಣ ಸ್ಥಳೀಯ ಸಂಸ್ಥೆಗಳಾದ ಇಂಡಿ, ಸಿಂದಗಿ, ಚಡಚಣ್, ದೇವರಹಿಪ್ಪರಗಿ, ಆಲಮೇಲ್ ಮುದ್ದೇಬಿಹಾಳ, ಮನಗುಳ್ಳಿ, ನಿಡಗುಂದೆ, ತಾಳಿಕೋಟೆ, ಕೋಲ್ಹಾರ್, & ನಲತ್ವಾಡ್ ಒಳಗೊಂಡಂತೆ ಜಿಲ್ಲೆಯ ಎಲ್ಲಾ ಗ್ರಾಮಗಳು ಯೋಜನೆಯ ವ್ಯಾಪ್ತಿಯಲ್ಲಿರುತ್ತದೆ.
ಉ)	ಈ ಯೋಜನೆಯ ಜಲಮೂಲ ಯಾವುದು; ಈ ಯೋಜನೆಗೆ ಬೇಕಾಗುವ ವಾರ್ಷಿಕ ನೀರಿನ ಪ್ರಮಾಣ ಎಷ್ಟು (ಟಿ.ಎಂ.ಸಿಗಳಲ್ಲಿ)? (ವಿವರ ಒದಗಿಸುವುದು)	ಈ ಯೋಜನೆಯ ಜಲಮೂಲ ಮತ್ತು ವಾರ್ಷಿಕ ನೀರಿನ ಪ್ರಮಾಣದ ವಿವರ ಈ ಕೆಳಕಂಡಂತಿದೆ; (see table below)

ಕ್ರ.ಸಂ	ಜಲಮೂಲ	ಟಿ.ಎಂ.ಸಿ
1	ಆಲಮಟ್ಟಿ ಜಲಾಶಯದ ಹಿನ್ನೀರು (ವಲಯ-1)	1.467
2	ನಾರಾಯಣಪುರ ಜಲಾಶಯದ ಹಿನ್ನೀರು (ವಲಯ-2)	1.302
	ಒಟ್ಟು	**2.75**

ಸಂ:ಗ್ರಾಕುನೀ&ನೈಇ 101 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 677

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 09-12-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಸಾರಿಗೆ ಇಲಾಖೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತನಿಖಾ ಠಾಣೆಗಳನ್ನು ವಾಣಿಜ್ಯ ತೆರಿಗೆ ಇಲಾಖೆಯು ರದ್ದುಪಡಿಸಿದ ರೀತಿಯಲ್ಲಿ ಈ ಇಲಾಖೆಯಲ್ಲಿ ರದ್ದುಪಡಿಸದಿರುವುದು ನಿಜವೇ; ತನಿಖಾ ಠಾಣೆಗಳಲ್ಲಿ, ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದಿನಂಪ್ರತಿ ವಾಹನ ಮಾಲೀಕರಿಂದ ದೂರುಗಳು ಮತ್ತು ಮಾಧ್ಯಮಗಳಲ್ಲಿ ಮೋಟಾರ್ ವಾಹನ ತನಿಖಾಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ;	ಸಾರಿಗೆ ಇಲಾಖೆಯಲ್ಲಿ ತನಿಖಾ ಠಾಣೆಗಳು ಕಾರ್ಯ ನಿರ್ವಹಿಸುತ್ತಿದ್ದು ಅವುಗಳನ್ನು ರದ್ದುಪಡಿಸಿರುವುದಿಲ್ಲ. ತನಿಖಾ ಠಾಣೆಗಳಲ್ಲಿ, ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ವಾಹನ ಮಾಲೀಕರಿಂದ ದೂರುಗಳು ಮತ್ತು ಮಾಧ್ಯಮಗಳಲ್ಲಿ ಮೋಟಾರ್ ವಾಹನ ತನಿಖಾಧಿಕಾರಿಗಳ ಬಗ್ಗೆ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
(ಆ)	ಬಂದಿದ್ದಲ್ಲಿ, ತನಿಖಾ ಠಾಣೆಗಳನ್ನು ಮುಚ್ಚುವುದಿದ್ದರೆ, ಯಾವ ಕಾಲಮಿತಿಯಲ್ಲಿ ಮುಚ್ಚಲಾಗುವುದು; ಈ ಬಗ್ಗೆ ಸರ್ಕಾರಕ್ಕೆ ಭ್ರಷ್ಟಾಚಾರ ನಿಲ್ಲಿಸುವ ಬಗ್ಗೆ ಇಚ್ಚಾ ಶಕ್ತಿ ಇದೆಯೇ (ಪೂರ್ಣವಿವರ ನೀಡುವುದು);	ಸಾರಿಗೆ ಇಲಾಖೆಯ ತನಿಖಾ ಠಾಣೆಗಳನ್ನು ಮುಚ್ಚುವ ಪ್ರಸ್ತಾವನೆ ಇರುವುದಿಲ್ಲ. ಸಾರಿಗೆ ಇಲಾಖೆಯ ತನಿಖಾ ಠಾಣೆಗಳು ಪ್ರತಿನಿತ್ಯ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕರಿಗೆ ಸೇವೆ ನೀಡುವ ಕಛೇರಿಗಳಾಗಿರುತ್ತವೆ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ವಾಹನಗಳಿಂದ ಕರ್ನಾಟಕ ರಾಜ್ಯಕ್ಕೆ ಸಂದಾಯವಾಗಬೇಕಾದ ತೆರಿಗೆ ಮತ್ತು ಶುಲ್ಕಗಳನ್ನು ಹಾಗೂ ಕಾನೂನು ಉಲ್ಲಂಘಿಸುವ ವಾಹನಗಳಿಂದ ದಂಡ ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿದ್ದು ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಗಣನೀಯ ಮೊತ್ತದ ರಾಜಸ್ವ ಸಂಗ್ರಹವಾಗುತ್ತಿದೆ. ತನಿಖಾ ಠಾಣೆಗಳನ್ನು ತೆರವುಗೊಳಿಸಿದಲ್ಲಿ ರಾಜ್ಯದ ಬೊಕ್ಕಸಕ್ಕೆ ರಾಜಸ್ವ ಸಂಗ್ರಹದಲ್ಲಿ ಕುಂಠಿತವಾಗುವುದಲ್ಲದೆ ಕಾನೂನು ಉಲ್ಲಂಘಿಸಿ ಸಂಚರಿಸುವ ವಾಹನಗಳ ವಿರುದ್ಧ ಕ್ರಮ ಜರುಗಿಸುವುದು ಕಷ್ಟಸಾಧ್ಯವಾಗುವುದರಿಂದ ಗಡಿಭಾಗದಲ್ಲಿ ಸ್ಥಾಪಿಸಲಾಗಿರುವ ತನಿಖಾಠಾಣೆಗಳನ್ನು ಮುಂದುವರೆಸುವುದು ಸೂಕ್ತವಾಗಿರುತ್ತದೆ. ತನಿಖಾ ಠಾಣೆಗಳಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಎಲ್ಲಾ ತನಿಖಾ ಠಾಣೆಗಳಲ್ಲಿ CC ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ. ಭ್ರಷ್ಟಾಚಾರದ ದೂರುಗಳು ಬಂದ ಪ್ರಕರಣಗಳಲ್ಲಿ ಸಂಬಂಧಿಸಿದ ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಭ್ರಷ್ಟಾಚಾರ ತಡೆಗಟ್ಟುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

--2

(ಇ)	ಅಂತರ ರಾಜ್ಯ ವಾಹನಗಳಿಗೆ e-Permit ಜಾರಿಗೆ ತಂದು ಭ್ರಷ್ಟಾಚಾರವನ್ನು ನಿಯಂತ್ರಿಸಿ, ಸರ್ಕಾರಕ್ಕೆ ರಾಜಸ್ವ ಸಂಗ್ರಹಣವನ್ನು ಹೆಚ್ಚಿಸಬಹುದಲ್ಲವೇ ಮತ್ತು ಯಾವ ಕಾಲಮಿತಿಯಲ್ಲಿ e-Permit ಜಾರಿಗೆ ತರಲಾಗುವುದು;	ಇತರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಬರುವ ಸಾರಿಗೆ ವಾಹನಗಳ ಮಾಲೀಕರು / ಚಾಲಕರು ಆನ್‌ಲೈನ್ ಮೂಲಕ ವಿಶೇಷ ಮತ್ತು ತಾತ್ಕಾಲಿಕ ರಹದಾರಿ ಪಡೆದು ಒಂದು ವಾರ ಅಥವಾ ಒಂದು ತಿಂಗಳ ಅವಧಿಗೆ ತೆರಿಗೆ ಪಾವತಿಸಿ ಕರ್ನಾಟಕ ರಾಜ್ಯದಲ್ಲಿ ಸಂಚರಿಸಲು ಅನುವು ಮಾಡಿಕೊಡಲಾಗಿದೆ ಮತ್ತು ಚೆಕ್‌ಪೋಸ್ಟ್‌ಗಳಲ್ಲಿ ರಹದಾರಿ ಮತ್ತು ತೆರಿಗೆ ಪಾವತಿಸಲು ಕಾಯುವ ಅವಶ್ಯಕತೆ ಇರುವುದಿಲ್ಲ. ಪ್ರಸ್ತುತ ಅಂತರ ರಾಜ್ಯ ವಾಹನಗಳಿಗೆ ಆನ್‌ಲೈನ್ ಪರ್ಮಿಟ್ ವ್ಯವಸ್ಥೆ ರಾಜ್ಯದಲ್ಲಿ ಜಾರಿಯಲ್ಲಿದೆ.
(ಈ)	ಸಾರಿಗೆ ಇಲಾಖೆಯಲ್ಲಿ ವಾಹನಗಳ ತಪಾಸಣೆಗಾಗಿ ಮೋಟಾರ್ ವಾಹನ ತನಿಖಾಧಿಕಾರಿಗಳು ಉಪಯೋಗಿಸುವ ಜೀಪುಗಳಿಗೆ ತನಿಖಾಧಿಕಾರಿಗಳ ಭ್ರಷ್ಟಾಚಾರ ನಿಯಂತ್ರಿಸುವ ಸಲುವಾಗಿ ಮತ್ತು ಸರ್ಕಾರದ ರಾಜಸ್ವ ಸಂಗ್ರಹಣೆ ಹಿತದೃಷ್ಟಿಯಿಂದ ಜೀಪುಗಳಿಗೆ ಜಿ.ಪಿ.ಆರ್.ಎಸ್ ಸಿಸ್ಟಂ ಅನ್ನು ಅಳವಡಿಸಿ ಕೇಂದ್ರ ಕಛೇರಿಯಲ್ಲಿ Monitoring ಮಾಡುವ ಕಾರ್ಯವನ್ನು ಮಾಡಲಾಗುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕಾರ್ಯವನ್ನು ಮಾಡಲಾಗುವುದೇ (ಪೂರ್ಣ ಮಾಹಿತಿಯನ್ನು ನೀಡುವುದು);	ಸಾರಿಗೆ ಇಲಾಖೆಯ ಮೋಟಾರು ವಾಹನ ತನಿಖಾಧಿಕಾರಿಗಳು ಪ್ರವರ್ತನ ಕಾರ್ಯಕ್ಕೆ ಉಪಯೋಗಿಸುವ ವಾಹನಗಳಿಗೆ ಜಿ.ಪಿ.ಆರ್.ಎಸ್ ಸಿಸ್ಟಂ ಅನ್ನು ಅಳವಡಿಸಿರುವುದಿಲ್ಲ. ಈ ವಾಹನಗಳಿಗೆ ಜಿ.ಪಿ.ಆರ್.ಎಸ್ ಅಳವಡಿಸುವ ಅವಶ್ಯಕತೆ ಇರುವುದಿಲ್ಲವಾದ್ದರಿಂದ ಅಳವಡಿಸುವ ಯೋಜನೆಯಿರುವುದಿಲ್ಲ.
(ಉ)	ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರ ಹಣ ದುರುಪಯೋಗ ಮಾಡಿದಂತಹ ಇಲಾಖಾ ನೌಕರರುಗಳ ಕಡ್ಡಾಯ ನಿವೃತ್ತಿ ಮಾಡಲು ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಭ್ರಷ್ಟಾಚಾರ ತಡೆಗಟ್ಟುವ ನಿಟ್ಟಿನಲ್ಲಿ ಯಾವ ಕಾಲಮಿತಿಯಲ್ಲಿ ಕಡ್ಡಾಯ ನಿವೃತ್ತಿಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು)?	ಸಾರಿಗೆ ಇಲಾಖೆಯೂ ಸೇರಿದಂತೆ ರಾಜ್ಯ ಸಿವಿಲ್ ಸೇವೆಗೆ ಸೇರಿದ ಅಧಿಕಾರಿ/ ನೌಕರರುಗಳ ವಿರುದ್ಧದ ಭ್ರಷ್ಟಾಚಾರ ರುಜುವಾತಾಗುವ ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8(vi) ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿ / ನೌಕರರುಗಳನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಅದೇ ರೀತಿ ಹಣ ದುರುಪಯೋಗ ರುಜುವಾತಾಗುವ ಪ್ರಕರಣಗಳಲ್ಲಿಯೂ ಸಹ ಸಕ್ಷಮ ಪ್ರಾಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ಸೇರಿದಂತೆ ವಿವಿಧ ರೀತಿಯ ದಂಡನೆಗಳನ್ನು ವಿಧಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಟಿಡಿ 109 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ (ಅನೇಕಲ್)
ಚುಕ್ಕೆ ರಹಿತ ಸಂಖ್ಯೆ : 668
ಉತ್ತರ ದಿನಾಂಕ : 09.12.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಅನೇಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಮಂಜೂರಾದ ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಘಟಕಗಳು ಎಷ್ಟು; (ಪೂರ್ಣ ಮಾಹಿತಿ ನೀಡುವುದು)	ಅನೇಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಮಂಜೂರಾದ ಶುದ್ಧ ಕುಡಿಯುವ ನೀರಿನ ಘಟಕಗಳ ಒಟ್ಟು ಸಂಖ್ಯೆ 168, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ 150. (ಪ್ರತಿ ಲಗತ್ತಿಸಿದೆ).
ಆ	ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ದುರಸ್ತಿಪಡಿಸಬೇಕಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟು; ದುರಸ್ತಿ ಮಾಡಲು ಯಾವ ಸಂಸ್ಥೆಗೆ ಜವಾಬ್ದಾರಿ ವಹಿಸಲಾಗಿದೆ? (ಪೂರ್ಣ ಮಾಹಿತಿ ನೀಡುವುದು)	ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ದುರಸ್ತಿಪಡಿಸಬೇಕಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ 18. ಅವುಗಳ ಪೈಕಿ ದುರಸ್ತಿ ಮಾಡಲು 2 ಘಟಕಗಳನ್ನು M/s EP Products ಸಂಸ್ಥೆಗೆ ಮತ್ತು 16 ಘಟಕಗಳನ್ನು ಗ್ರಾಮ ಪಂಚಾಯತಿಯವರಿಗೆ ವಹಿಸಲಾಗಿದೆ.

ಸಂ:ಗ್ರಾಕುನೀ&ನೈಇ 105 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:- 6680 ಲಗತ್ತು

LIST OF OPERATIONAL & NON-OPERATIONAL WPP IN ANEKAL TALUK.

Sl.No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)
1	WPP17547	Bengaluru Urban	Anekal	Ballur	AREHALLI	School Back Side	Not handover in KRDIL To GP
2	WPP17544	Bengaluru Urban	Anekal	Ballur	Ballur	In Front of Lakshminarayana Temple	Operational
3	WPP17568	Bengaluru Urban	Anekal	Ballur	Ballur	Near G P buiding	Operational
4	WPP17567	Bengaluru Urban	Anekal	Ballur	DASANAPURA	Near Masjid	Operational
5	WPP17545	Bengaluru Urban	Anekal	Ballur	Dasanapura (Haleuru)	Near Chandrappa house	Operational
6	WPP17546	Bengaluru Urban	Anekal	Ballur	Halehalli	Near Muneshwara Temple	Operational
7	WPP17564	Bengaluru Urban	Anekal	Ballur	Kodlipura	Near Dairy	Operational
8	WPP17521	Bengaluru Urban	Anekal	Bidaraguppe	Arenuru	Next to the dairy	Operational
9	WPP17543	Bengaluru Urban	Anekal	Bidaraguppe	Bidaraguppe	Next to the GP Office	Operational
10	WPP17522	Bengaluru Urban	Anekal	Bidaraguppe	Chikkanahalli	In Front of Ashwathakatte	Operational
11	WPP17599	Bengaluru Urban	Anekal	Bidaraguppe	Indlabele	Near bus stop	Operational
12	WPP17515	Bengaluru Urban	Anekal	Bidaraguppe	Indlabele (Janatha colony)	Janatha Colony	Operational
13	WPP17621	Bengaluru Urban	Anekal	Bidaraguppe	Jigala	In Front of Ramareddi house	Operational
14	WPP20194	Bengaluru Urban	Anekal	Bidaraguppe	Jigala	In Front of Anganavadi	Operational
15	WPP17517	Bengaluru Urban	Anekal	Bidaraguppe	Malenahalli	Near Anjaneya Temple	Operational
16	WPP17617	Bengaluru Urban	Anekal	Billapura	ADIGARA KALLAHALLI	Near Angavadi	Operational
17	WPP17514	Bengaluru Urban	Anekal	Billapura	Billapura	Next to the GP Office	Operational
18	WPP14537	Bengaluru Urban	Anekal	Byagadadenahalli	Avadadenahalli	In Front of Anganavadi	Operational
19	WPP17602	Bengaluru Urban	Anekal	Byagadadenahalli	Byagadadenahalli	Next to the Eshwara Temple	Operational
20	WPP14572	Bengaluru Urban	Anekal	Byagadadenahalli	Chikkahagde	Next to the Govt. School	Operational
21	WPP14573	Bengaluru Urban	Anekal	Byagadadenahalli	Dodda Hagade	Doddahagade Circle	Operational
22	WPP14570	Bengaluru Urban	Anekal	Byagadadenahalli	Kammasandra Agrahara	In Front of Shrirama Temple	Operational
23	WPP14596	Bengaluru Urban	Anekal	Byagadadenahalli	SOPPAHALLI	Near Ambedkarbhavana	Operational
24	WPP14577	Bengaluru Urban	Anekal	Byagadadenahalli	Thattanahalli(Bus Stop)	Bus Stop	Operational
25	WPP17600	Bengaluru Urban	Anekal	Byagadadenahalli	Thattanahalli/Janatha Colon	Janatha Colony	Operational
26	WPP14571	Bengaluru Urban	Anekal	Byagadadenahalli	Yellammanapalya	Near Ashwath katte	Operational
27	WPP17585	Bengaluru Urban	Anekal	Dommasandra	DOMMASANDRA	Santhe beedi 3rd Ward	Plant is in good condition sufficient water is not available
28	WPP17596	Bengaluru Urban	Anekal	Dommasandra	DOMMASANDRA	Near darga Ward 10	Plant is in good condition sufficient water is not available
29	WPP17586	Bengaluru Urban	Anekal	Dommasandra	Dommasandra (Housing Boa	Dommasandra Ward 12	Plant is in good condition sufficient water is not available
30	WPP17561	Bengaluru Urban	Anekal	Dommasandra	Govindapura	Ganesha Mata 6 th Ward	Operational
31	WPP17612	Bengaluru Urban	Anekal	Handenahalli	Bikkanahalli	Next to the Anjaneya Temple	Operational
32	WPP17613	Bengaluru Urban	Anekal	Handenahalli	Handenahalli	Next to the GP Office	Operational
33	WPP17512	Bengaluru Urban	Anekal	Handenahalli	Sollepura Chikkanahalli	Next to the Primary School	Operational

Sl.No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)
34	WPP17513	Bengaluru Urban	Anekal	Handenahalli	Tyavakanahalli	Next to the Anganavadi	Operational
35	WPP17614	Bengaluru Urban	Anekal	Handenahalli	Tyavakanahalli	Near Ashokanagara	Operational
36	WPP14525	Bengaluru Urban	Anekal	Haragadde	KUMBARANAHALLI	Village out Side	Operational
37	WPP14520	Bengaluru Urban	Anekal	Haragadde	Lingapura	Near Ashwathkatte	Membrain to be Repair
38	WPP14521	Bengaluru Urban	Anekal	Haragadde	Nayanahalli	Center of Village	Operational
39	WPP17572	Bengaluru Urban	Anekal	Huskur	Avalahalli	Near Main Village Arch	Operational
40	WPP17573	Bengaluru Urban	Anekal	Huskur	Chintalmadivala	Main road	Operational
41	WPP17537	Bengaluru Urban	Anekal	Huskur	Gulimangala	Main road	Operational
42	WPP17539	Bengaluru Urban	Anekal	Huskur	HAROHALLI	Near Temple	Operational
43	WPP17536	Bengaluru Urban	Anekal	Huskur	Huskur	Thigala beedi	Operational
44	WPP10858	Bengaluru Urban	Anekal	Huskur	Huskuru	In Colony (Near OHT)	Operational
45	WPP10859	Bengaluru Urban	Anekal	Huskur	Huskuru	Near Anjaneyaswamy Temple	Operational
46	WPP17535	Bengaluru Urban	Anekal	Huskur	Huskuru	Huskur Beside Madduramma Temple	Operational
47	WPP17574	Bengaluru Urban	Anekal	Huskur	Huskuru	Sanjeevnagara	Operational
48	WPP14550	Bengaluru Urban	Anekal	Indlawadi	BAGGANADODDI	Near Anjaneya temple	Repair work in progress
49	WPP14558	Bengaluru Urban	Anekal	Indlawadi	BASAVANAPURA	Near Samudayabhavana	Operational
50	WPP14538	Bengaluru Urban	Anekal	Indlawadi	Chikkahosahalli	Near P Srinivas house	Operational
51	WPP14553	Bengaluru Urban	Anekal	Indlawadi	Choodahalli	Near bus stop	Repair work in progress
52	WPP14539	Bengaluru Urban	Anekal	Indlawadi	Indlawadi	Near Primary helth centre	Operational
53	WPP14551	Bengaluru Urban	Anekal	Indlawadi	Indlawadi	Near Primary helth centre	Repair work in progress
54	WPP14586	Bengaluru Urban	Anekal	Indlawadi	INDLAWADIPURA	Near Govt School	Operational
55	WPP14548	Bengaluru Urban	Anekal	Indlawadi	Kadajakanahalli	In Front of Ashwathkatte	Repair work in progress
56	WPP14584	Bengaluru Urban	Anekal	Indlawadi	Kadajakkanahalli/Thimmaia	Near Gaviyappa Plant	Repair work in progress
57	WPP 1458	Bengaluru Urban	Anekal	Indlawadi	Laxmipura	Near Anganawadi	Operational
58	WPP14549	Bengaluru Urban	Anekal	Indlawadi	Mysoorammana doddi	Near Sidramnayak hose	Operational
59	WPP14552	Bengaluru Urban	Anekal	Indlawadi	NAGANAYAKANADODDI	Near Muniyappa house	Operational
60	WPP14587	Bengaluru Urban	Anekal	Indlawadi	Thammanaikanahalli	Near bus stop	Operational
61	WPP14559	Bengaluru Urban	Anekal	Indlawadi	Thammanaikanahalli/ Muth	Near Krishnappa house	Operational
62	WPP14540	Bengaluru Urban	Anekal	Indlawadi	THAMMANAYAKANAHALLI	Near Erappa house	Repair work in progress
63	WPP14578	Bengaluru Urban	Anekal	Indlawadi	Thammanayakanahalli/Areh	Near Kenchappa Plant	Operational
64	WPP14579	Bengaluru Urban	Anekal	Indlawadi	THIMMASANDRA	Near R Narayanappa house	Operational
65	WPP17524	Bengaluru Urban	Anekal	Karpur	Aravanthigepura	Near Ambedkarbhavana	Operational
66	WPP14574	Bengaluru Urban	Anekal	Karpur	Bestammanahalli	Near Venkataramanaswami Temple	Operational
67	WPP14575	Bengaluru Urban	Anekal	Karpur	Bidaragere	Near Govt School	Operational
68	WPP17500	Bengaluru Urban	Anekal	Karpur	Haldenahalli	Near Anganavadi	Operational
69	WPP17601	Bengaluru Urban	Anekal	Karpur	Karpur	Near Govt Hospital	Operational
70	WPP14576	Bengaluru Urban	Anekal	Karpur	Rachamanahalli	Near Ashwathkatte	Operational
71	WPP14514	Bengaluru Urban	Anekal	Marsoor	Adisonahatti	Circle	Operational

6

Sl.No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)
72	WPP14566	Bengaluru Urban	Anekal	Marsoor	Bandapura	Near Dairy	Operational
73	WPP14569	Bengaluru Urban	Anekal	Marsoor	Haleuru	Near Dairy	Operational
74	WPP14567	Bengaluru Urban	Anekal	Marsoor	M Madivala	Vivekananda Circle	Operational
75	WPP19971	Bengaluru Urban	Anekal	Marsoor	Marasur	Colony	Operational
76	WPP14595	Bengaluru Urban	Anekal	Marsoor	Marsoor	Near Rangamandira	Operational
77	WPP14565	Bengaluru Urban	Anekal	Marsoor	Marsoor Colony	Near Bill Collector Venkataramanappa house	Operational
78	WPP14594	Bengaluru Urban	Anekal	Marsoor	Marsoor Indiranagara Colon	Indiranagara Colony	Operational
79	WPP14597	Bengaluru Urban	Anekal	Marsoor	Naganayakanahalli	Abedkar Circle	Operational
80	WPP14568	Bengaluru Urban	Anekal	Marsoor	Shettihalli	Near Dairy	Operational
81	WPP17507	Bengaluru Urban	Anekal	Mayasandra	HAROHALLI	Near Ashwathktte	Operational
82	WPP17506	Bengaluru Urban	Anekal	Mayasandra	Kambalipura	Near Dairy	Operational
83	WPP17609	Bengaluru Urban	Anekal	Mayasandra	M.Medihalli	Near School	Operational
84	WPP17505	Bengaluru Urban	Anekal	Mayasandra	MANCHANAHALLI	Bus Stop	Operational
85	WPP17624	Bengaluru Urban	Anekal	Mayasandra	MANCHANAHALLI	Near basaveshwara Temple	Operational
86	WPP17504	Bengaluru Urban	Anekal	Mayasandra	Mayasandra	Near School	Operational
87	WPP17607	Bengaluru Urban	Anekal	Mayasandra	Mayasandra	Near Samudayabhavana	Operational
88	WPP19966	Bengaluru Urban	Anekal	Mayasandra	Mayasandra	Near Alehalli Road	Operational
89	WPP17608	Bengaluru Urban	Anekal	Mayasandra	MUTHSANDRA	Near Samudayabhavana	Operational
90	WPP17595	Bengaluru Urban	Anekal	Mugaluru	Bhovipalya	Near School	Operational
91	WPP17594	Bengaluru Urban	Anekal	Mugaluru	Doddathimmasandra	Center of village	Operational
92	WPP20191	Bengaluru Urban	Anekal	Mugaluru	Kamanahalli	Near Diary	Operational
93	WPP17555	Bengaluru Urban	Anekal	Mugaluru	Kuguru	Near OHT	Operational
94	WPP17566	Bengaluru Urban	Anekal	Mugaluru	Kuguru	Near Temple	Operational
95	WPP17580	Bengaluru Urban	Anekal	Mugaluru	Kuthaganahalli	Near School	Operational
96	WPP17592	Bengaluru Urban	Anekal	Mugaluru	MADAPPANAHALLI	Near Anganavadi	Operational
97	WPP20195	Bengaluru Urban	Anekal	Mugaluru	Mahal Chowdenahalli	Near OHT	Operational
98	WPP17553	Bengaluru Urban	Anekal	Mugaluru	Mattanahalli	Main Road	Operational
99	WPP17593	Bengaluru Urban	Anekal	Mugaluru	MUGALOORU	Center of village	Operational
100	WPP17597	Bengaluru Urban	Anekal	Mugaluru	Pandithana Agrahara	Main Road	Operational
101	WPP17554	Bengaluru Urban	Anekal	Mugaluru	Rajeevgandhi nagara	N#207 Main Road	Operational
102	WPP17552	Bengaluru Urban	Anekal	Mugaluru	THINDLU	Near Temple	operational
103	WPP17598	Bengaluru Urban	Anekal	Mugaluru	THINDLU	Near School	Operational
104	WPP17569	Bengaluru Urban	Anekal	Muttanalluru	Alibommasamdra	Sollepura Road	Operational
105	WPP17533	Bengaluru Urban	Anekal	Muttanalluru	Kommasandra	Near Temple	Operational
106	WPP17540	Bengaluru Urban	Anekal	Muttanalluru	Muttanalluru	Near GP Office	Operational
107	WPP17534	Bengaluru Urban	Anekal	Muttanalluru	Narayanaghatta	Near Chowdeshwara Temple	Operational
108	WPP17541	Bengaluru Urban	Anekal	Muttanalluru	SAMMANAHALLI	Right Side of Thimmasandra Road	Operational
109	WPP17575	Bengaluru Urban	Anekal	Muttanalluru	Singenaagrahara	Near Fair Price Shop	Operational

Sl.No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)
110	WPP17611	Bengaluru Urban	Anekal	Neraluru	Adigondanahalli	Near Bus stop	Operational
111	WPP17622	Bengaluru Urban	Anekal	Neraluru	Balagaranahalli	In Front of S K Hotel In Bandapura Road	Operational
112	WPP17511	Bengaluru Urban	Anekal	Neraluru	Bendiganahalli	Next to the Anjaneya Temple	Operational
113	WPP17510	Bengaluru Urban	Anekal	Neraluru	Guddahatti	Near Anjaneya Temple	Operational
114	WPP17516	Bengaluru Urban	Anekal	Neraluru	Ithangooru	Next to the Venugopala swami Temple	Operational
115	WPP17623	Bengaluru Urban	Anekal	Neraluru	Ithangooru	In Front of Governament School	Operational
116	WPP17610	Bengaluru Urban	Anekal	Neraluru	Neraluru	Front of Anjaneyaswami Temple	Operational
117	WPP17542	Bengaluru Urban	Anekal	Neraluru	Thirumagondanahalli	Next to the Dairy	Operational
118	WPP17509	Bengaluru Urban	Anekal	Neraluru	Yadavanahalli	Next to the Chandrashekar houe	Operational
119	WPP17625	Bengaluru Urban	Anekal	Neraluru	Yadavanahalli	Next to the milk Dairy	Operational
120	WPP17590	Bengaluru Urban	Anekal	Neriga	Gonighattipura	Main Road	Operational
121	WPP17588	Bengaluru Urban	Anekal	Neriga	HALASALLI	Near Muneshwara Temple	Operational
122	WPP17559	Bengaluru Urban	Anekal	Neriga	Janthgondanahalli	Center of village	Operational
123	WPP17525	Bengaluru Urban	Anekal	Neriga	Kathariguppe	Near Anganavadi	Operational
124	WPP17560	Bengaluru Urban	Anekal	Neriga	Nekkundi dommasandra	Main Road Behind Bus Stop	Operational
125	WPP17558	Bengaluru Urban	Anekal	Neriga	NERIGA	Chumbenahalli Road Side	Operational
126	WPP17591	Bengaluru Urban	Anekal	Neriga	NERIGA	JHC Beside Jaggajeevana Ram Bhavan	Operational
127	WPP17589	Bengaluru Urban	Anekal	Neriga	RAMANAYAKANAHALLI	Near Temple	Operational
128	WPP17527	Bengaluru Urban	Anekal	Neriga	THIPPASANDRA	Center of village	Operational
129	WPP17502	Bengaluru Urban	Anekal	Samandur	CHANNENA AGRAHARA	In front of Anjaneya Temple	Operational
130	WPP17604	Bengaluru Urban	Anekal	Samandur	Geretiganabele	In front of Govt School	under Repair
131	WPP17501	Bengaluru Urban	Anekal	Samandur	GUDDANAHALLI	In front of Primary School	Operational
132	WPP17603	Bengaluru Urban	Anekal	Samandur	Hopalaghatta	In Front of Over head tank	Operational
133	WPP17503	Bengaluru Urban	Anekal	Samandur	Maranayakana halli	In Front of Ashwathkatte	Operational
134	WPP17523	Bengaluru Urban	Anekal	Samandur	Muthagatti	Near Omshakthi Temple	Operational
135	WPP17605	Bengaluru Urban	Anekal	Samandur	Sabmangala	Near over head tank	Operational
136	WPP17606	Bengaluru Urban	Anekal	Samandur	Samandur	In Front of Anganavadi	Operational
137	WPP17519	Bengaluru Urban	Anekal	Sarjapura	Sarjapura	Infront of Police Station	Plant is in good condition sufficient water is not available
138	WPP17520	Bengaluru Urban	Anekal	Sarjapura	Sarjapura	Near Abayya Temple	Operational
139	WPP17581	Bengaluru Urban	Anekal	Sarjapura	Sarjapura	Near Muthyalamma temple	Operational
140	WPP17582	Bengaluru Urban	Anekal	Sarjapura	Sarjapura	Near Gram Panchayat Building	Operational
141	WPP17583	Bengaluru Urban	Anekal	Sarjapura	Sarjapura	Near Dairy	Operational
142	WPP17584	Bengaluru Urban	Anekal	Sarjapura	Sarjapura	Near Chandramouleshawra temple	WPP Building as bein Damaged Due to on accident

Sl.No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)
143	WPP17518	Bengaluru Urban	Anekal	Sarjapura	Sarjapura CT	Near Petrol Bunk	Plant is in good condition sufficient water is not available
144	WPP17538	Bengaluru Urban	Anekal	Shanthipura	Chikkanagamangala	In front of Govt School	Pipeling work going on
145	WPP17570	Bengaluru Urban	Anekal	Shanthipura	RAYASANDRA	Gunduthopu	Operational
146	WPP17571	Bengaluru Urban	Anekal	Shanthipura	Shanthipura	Near GP Office	Operational
147	WPP14547	Bengaluru Urban	Anekal	Suragajakkana halli	A. Medahalli	In front of Govt School	Operational
148	WPP14589	Bengaluru Urban	Anekal	Suragajakkana halli	Aduru	Near Dairy	Operational
149	WPP14592	Bengaluru Urban	Anekal	Suragajakkana halli	Bodarahalli	Near Govt School	Operational
150	WPP14546	Bengaluru Urban	Anekal	Suragajakkana halli	Gowrenahalli	Near Anjaneya Temple	Operational
151	WPP19967	Bengaluru Urban	Anekal	Suragajakkana halli	Honnakalashapura	Near Anjaneya Temple	Operational
152	WPP14545	Bengaluru Urban	Anekal	Suragajakkana halli	Siddanapalya	Near Rathnamma house	Operational
153	WPP14593	Bengaluru Urban	Anekal	Suragajakkana halli	Sidihosakote	Near Library	Operational
154	WPP14544	Bengaluru Urban	Anekal	Suragajakkana halli	Suragajakkana halli	Near Mahadeshwara Temple	Operational
155	WPP14590	Bengaluru Urban	Anekal	Vannakanahalli	CHUDAHALLI	Near Muneshwra Temple	Operational
156	WPP14561	Bengaluru Urban	Anekal	Vannakanahalli	Menasiganahalli	Near Watermen house	Operational
157	WPP14560	Bengaluru Urban	Anekal	Vannakanahalli	Telagarahalli	Near Ashwathkatte	Operational
158	WPP14591	Bengaluru Urban	Anekal	Vannakanahalli	Vannakanahalli	ANM Centre	Operational
159	WPP17531	Bengaluru Urban	Anekal	Yamare	B. Hosahalli	Near Temple	Operational
160	WPP17526	Bengaluru Urban	Anekal	Yamare	Chambenahlli	Near OHT	Operational
161	WPP17578	Bengaluru Urban	Anekal	Yamare	Ittangur	Center of the Village	Plant is in good condition sufficient water is not available
162	WPP17577	Bengaluru Urban	Anekal	Yamare	Kadagrahara	Oposite School Building	Operational
163	WPP17530	Bengaluru Urban	Anekal	Yamare	Sompura	Near School Building	Operational
164	WPP17579	Bengaluru Urban	Anekal	Yamare	Thigala Chowdadenahalli	Ward No 1	Plant is in good condition sufficient water is not available
165	WPP17528	Bengaluru Urban	Anekal	Yamare	Tigala Chowdenahalli	Near Milk Dairy	Operational
166	WPP17529	Bengaluru Urban	Anekal	Yamare	Valagerakalahalli	Center of village	Operational
167	WPP17532	Bengaluru Urban	Anekal	Yamare	YAMARE	Near Temple	Operational
168	WPP17576	Bengaluru Urban	Anekal	Yamare	Yamare Badavane	Near APMC Market	Operational

NOT-OPERATIONAL WPP IN ANEKAL TALUK. (3)

Sl. No	PlantId	District Name	Taluka	PanchayatName	VillageName	Location	Remark for not - operational plants (Repaird/not repaired)	Remarks
1	WPP17547	Bengaluru Urban	Anekal	Ballur	AREHALLI	School Back Side	under Repair	Grama Panchayath
2	WPP17585	Bengaluru Urban	Anekal	Dommasandra	DOMMASANDRA	Santhe beedi 3rd Ward	Plant is in good condition sufficient water is not available	Grama Panchayath
3	WPP17596	Bengaluru Urban	Anekal	Dommasandra	DOMMASANDRA	Near darga Ward 10	Plant is in good condition sufficient water is not available	Grama Panchayath
4	WPP17586	Bengaluru Urban	Anekal	Dommasandra	Dommasandra (Housing B	Dommasandra Ward 12	Plant is in good condition sufficient water is not available	Grama Panchayath
5	WPP14520	Bengaluru Urban	Anekal	Haragadde	Lingapura	Near Ashwathkatte	Membrain to be Repair	EP Products
6	WPP14550	Bengaluru Urban	Anekal	Indlawadi	BAGGANADODDI	Near Anjaneya temple	Repair work in progress	Grama Panchayath
7	WPP14553	Bengaluru Urban	Anekal	Indlawadi	Choodahalli	Near bus stop	Repair work in progress	Grama Panchayath
8	WPP14551	Bengaluru Urban	Anekal	Indlawadi	Indlawadi	Near Primary helth centre	Repair work in progress	Grama Panchayath
9	WPP14548	Bengaluru Urban	Anekal	Indlawadi	Kadajakanahalli	In Front of Ashwathkatte	Repair work in progress	Grama Panchayath
10	WPP14584	Bengaluru Urban	Anekal	Indlawadi	Kadajakkanahalli/Thimma	Near Gaviyappa Plant	Repair work in progress	Grama Panchayath
11	WPP14540	Bengaluru Urban	Anekal	Indlawadi	THAMMANAYAKANAHALL	Near Erappa house	Repair work in progress	Grama Panchayath
12	WPP17604	Bengaluru Urban	Anekal	Samandur	Geretiganabele	In front of Govt School	under Repair	EP Products
13	WPP17519	Bengaluru Urban	Anekal	Sarjapura	Sarjapura	Infront of Police Station	Plant is in good condition sufficient water is not available	Grama Panchayath
14	WPP17584	Bengaluru Urban	Anekal	Sarjapura	Sarjapura	Near Chandramouleshawra te	WPP Building as bein Damaged Due to on accident	Grama Panchayath
15	WPP17518	Bengaluru Urban	Anekal	Sarjapura	Sarjapura CT	Near Petrol Bunk	Plant is in good condition sufficient water is not available	Grama Panchayath
